೧೮ ಯಾಕಂದರೆ ಅಂಥವರು ನಮ್ಮ ಕರ್ತನಾದ ಯೇಸು ಕ್ರಿಸ್ತನಿಗಲ್ಲ, ತಮ್ಮ [1]ಹೊಟ್ಟೆಗೆ ಸೇವೆ ಮಾಡಿ, ನಯ
ಮಾತುಗಳಿಂದಲೂ, ಹೊಗಳಿಕೆಯಿಂದಲೂ, ಕೆಟ್ಟತನವಿಲ್ಲದವರ ಹೃದಯಗಳನ್ನು ಮೋಸಗೊಳಿಸುತ್ತಾರೆ.
೧೯ ನಿಮ್ಮ [2]ವಿಧೇಯತ್ವವು ಎಲ್ಲರಿಗೆ ಬೈಲಾಯಿತು; ಆದದರಿಂದ ನಿಮ್ಮ ನಿಮಿತ್ತ ಸಂತೋಷ ಪಡುತ್ತೇನೆ. ಆದರೆ
ನೀವು ಒಳ್ಳೇತನಕ್ಕೆ ಜ್ಞಾನಿಗಳಾಗಿಯೂ, ಕೆಟ್ಟತನಕ್ಕೆ [3]ನಿರ್ಮಲರಾಗಿಯೂ ಇರ ಬೇಕೆಂದು, ಇಚ್ಛೈಸುತ್ತೇನೆ.
೨೦ ಆದರೆ, ಸಮಾಧಾನದ ದೇವರು ಸೈತಾನನನ್ನು ಬೇಗ ನಿಮ್ಮ ಪಾದಗಳ ಕೆಳಗೆ [4]ಜಜ್ಜುವನು.
ನಮ್ಮ ಕರ್ತನಾದ ಯೇಸು ಕ್ರಿಸ್ತನ ಕೃಪೆಯು ನಿಮ್ಮ ಸಂಗಡ ಇರಲಿ. [5]ಆಮೆನ್.
೨೧ ನನ್ನ ಜತೆಕೆಲಸದವನಾದ ತಿಮೊಥೆಯನೂ, ನನ್ನ ನೆಂಟರಾದ [6]ಲೂಕ್ಯನೂ, ಯಸೋನನೂ, ಸೋಸಿಪತ್ರನೂ,
೨೨ ನಿಮ್ಮನ್ನು ವಂದಿಸುತ್ತಾರೆ. [7]ಈ ಪತ್ರಿಕೆಯನ್ನು ಬರೆದ ತೆರ್ತ್ಯನೆಂಬ ನಾನು ಕರ್ತನಲ್ಲಿ ನಿಮ್ಮನ್ನು ವಂದಿಸುತ್ತೇನೆ.
೨೩ ನನಗೂ ಎಲ್ಲಾ ಸಭೆಗೂ ಉಪಚಾರಿಯಾದ [8]ಗಾಯನು ನಿಮ್ಮನ್ನು ವಂದಿಸುತ್ತಾನೆ. [9]ಪಟ್ಣದ ಉಗ್ರಾ
ಣಿಕನಾದ ಎರಸ್ತನೂ, ಸಹೋದರನಾದ ಕ್ವರ್ತನೂ ನಿಮ್ಮನ್ನು ವಂದಿಸುತ್ತಾರೆ.
೨೪ ನಮ್ಮ ಕರ್ತನಾದ ಯೇಸು ಕ್ರಿಸ್ತನ ಕೃಪೆಯು ನಿಮ್ಮೆಲ್ಲರ ಸಂಗಡ ಇರಲಿ. ಆಮೆನ್.
೨೫ ಈಗ, ನನ್ನ ಸುವಾರ್ತೆಯ ಪ್ರಕಾರವಾಗಿಯೂ, ಯೇಸು ಕ್ರಿಸ್ತನ ಪ್ರಸಂಗದ ಪ್ರಕಾರವಾಗಿಯೂ, [10]ಆದಿ
೨೬ ಕಾಲಗಳಿಂದ ಮರೆಯಾಗಿದ್ದು, ಈಗ ಪ್ರತ್ಯಕ್ಷವಾಗಿ, [11]ಪ್ರವಾದಿಗಳ ಬರಹಗಳ ಮುಖಾಂತರ ನಿತ್ಯ ದೇವರ
ಅಪ್ಪಣೆಯ ಮೇರೆಗೆ, ವಿಶ್ವಾಸದ ವಿಧೇಯತ್ವಕ್ಕೋಸ್ಕರ ಸಮಸ್ತ ಜನಾಂಗಗಳಿಗೆ ತಿಳಿಯ ಮಾಡಲ್ಪಟ್ಟ ಮ
೨೭ ರ್ಮದ ಪ್ರಕಟಣೆಯ ಪ್ರಕಾರವಾಗಿಯೂ, ನಿಮ್ಮನ್ನು ಸ್ಥಿರ ಪಡಿಸ ಶಕ್ತನಾಗಿರುವ ಒಬ್ಬನೇ ಜ್ಞಾನಿಯಾದ
ದೇವರಿಗೆ, ಯೇಸು ಕ್ರಿಸ್ತನ ಮುಖಾಂತರ, ಎಂದೆಂದಿಗೂ ಮಹಿಮೆ ಆಗಲಿ. ಆಮೆನ್.

---

1. ಅಸತ್ಯವನ್ನು ಬೋಧಿಸಿ ಭೇದವನ್ನುಂಟು ಮಾಡಿದವರು, ತಮ್ಮ ಶರೀರದಿಚ್ಛೆಗಳ ಪ್ರಕಾರ ದ್ರವ್ಯವನ್ನೂ ಶ್ರೇಷ್ಠತ್ವವನ್ನೂ ಆಶಿಸಿ ನಡೆದವರಾಗಿದ್ದರು. ಇಂಥವರು ತಮ್ಮ ನಯನುಡಿಗಳಿಂದ ಕಪಟವಿಲ್ಲದವರನ್ನು ವಶ ಪಡಿಸಿ ಕೊಳ್ಳುವವರಾಗಿದ್ದರು.

2. ಪೌಲನು ತಾನು ಹೇಳುವ ಬೋಧನೆಗಳನ್ನು ಅವರು ಅಂಗೀಕರಿಸುವರೆಂಬ ನಂಬಿಕೆ ಅವನಿಗೆ ಇದ್ದಾಗ್ಯೂ, ಕಳ್ಳ ಬೋಧಕರು ಹೇಳುವ ಬೋಧನೆಗಳನ್ನು ಅವರು ಸುಲಭವಾಗಿ ಅಂಗೀಕರಿಸುವರೆಂಬ ಸಂದೇಹದಿಂದ ಹೀಗೆ ಹೇಳುತ್ತಾನೆ.

3. ನಿರ್ಮಲತ್ವ ಎಂಬುವದು ನಿರ್ದೋಷವೆಂದು, ಮತ್ತಾ. ೧೦. ೧೬. ವಚನದ ವ್ಯಾಖ್ಯಾನದಲ್ಲಿ ಕಾಣುವದು. ಕರ್ತನು ಹೇಳಿದ ಈ ವಾಕ್ಯವನ್ನು ಪೌಲನು ತನ್ನ ಮನಸ್ಸಿನಲ್ಲಿ ಇಟ್ಟು ಕೊಂಡು ಈ ಕಟ್ಟಳೆಯನ್ನು ಬರೆದನೆಂದು ತೋರುತ್ತದೆ.

4. ಸಮಾಧಾನದ ದೇವರು, ಸ್ನೇಹದ ತಂದೆಯೂ ಕಲಹ ಭೇದಗಳಿಗೆ ಕಾರಣನೂ ಆಗಿರುವ ಸೈತಾನನನ್ನು ಅತಿ ಶೀಘ್ರವಾಗಿ ಜಜ್ಜುವನು. ಆಗ ಉತ್ಪ. ೩. ೧೫ಲ್ಲಿ ಅಡಗಿರುವ ಆದಿ ಪ್ರವಾದನೆಯು ಸಂಪೂರ್ಣವಾಗಿ ಈಡೇರುವದು.

5. ಈ ಅಂತ್ಯೋಕ್ತಿಯಿಂದ ಪೌಲನು ಈ ಪತ್ರಿಕೆಯನ್ನು ಮುಗಿಸ ಯೋಚಿಸಿರುವನು. ತರುವಾಯ ಕೆಲವು ವಿಷಯಗಳನ್ನು ನೆನಸಿ ಕೊಂಡು ಅವುಗಳನ್ನು ಬರೆದಿರುವನು. ಇನ್ನು ಕೆಲವು ಪತ್ರಿಕೆಗಳಲ್ಲಿಯೂ ಹೀಗೆ ಬರೆದಿರುವದನ್ನು ನೋಡ ಬಹುದು. (೧ ಕೊರಿ. ೧೬. ೨೨—೨೪. ಫಿಲಿ. ೪. ೨೦—೨೩.)

6. ತಿಮೊಥೆಯನು ಪೌಲನ ಸಂಗಡ ಇದ್ದಾಗಲೆಲ್ಲಾ ಅವನ ಹೆಸರು ಬೇರೆ ಪತ್ರಿಕೆಗಳ ಮುಂಭಾಗದಲ್ಲಿ ಬರೆದಿರಲಾಗಿ ಈ ಪತ್ರಿಕೆಯಲ್ಲಿ ಮಾತ್ರ ಅವನ ಹೆಸರು ಮುಂಭಾಗದಲ್ಲಿ ಇಲ್ಲ. ಲೂಕ್ಯನು ಅಪೊ. ಕ್ರಿ. ೧೩. ೧ಲ್ಲಿ ಹೇಳಿದ ಕುರೇನೆ ಊರಿನವನಾಗಿರಬಹುದು. ಯಾಸೋನನು ಥೆಸ್ಸಲೊನೀಕ್ಯದವನೂ, ಸೋಸಿಪತ್ರನು ಬೆರೋಯದವನೂ ಆಗಿರ ಬಹುದು. (ಅಪೊ. ಕ್ರಿ. ೨೦. ೪.)

7. ಪೌಲನು ತನ್ನ ಪತ್ರಿಕೆಗಳನ್ನು ಬಹುಶಾ ಬೇರೊಬ್ಬರಿಂದ ಬರೆಸಿದನೆಂದು ತೋರುತ್ತದೆ. ಕಡೆಯಲ್ಲಿ ತಾನು ಹೇಳುವ ಆಶೀರ್ವಾದವನ್ನು ಮಾತ್ರ ತನ್ನ ಸ್ವಹಸ್ತದಿಂದ ಬರೆಯುವನು. (೧ ಕೊರಿ. ೧೬. ೨೧. ೨ ಥೆಸ್ಸ. ೩. ೧೭.) ಈ ಪತ್ರಿಕೆಯನ್ನು ಬರೆದ ತೆರ್ತ್ಯನೆಂಬವನು, ನಾನು ವಂದಿಸುತ್ತೇನೆಂದು ತನ್ನ ಸ್ವಹಸ್ತದಿಂದ ಬರೆಯುತ್ತಾನೆ.

8. ಗಾಯನಿಗೆ ಪೌಲನು ಸ್ನಾನ ಕೊಟ್ಟಿದ್ದನು. (೧ ಕೊರಿ. ೧. ೧೫.) ಪೌಲನು ಎರಡನೇ ಸಾರಿ ಕೊರಿಂಥಕ್ಕೆ ಹೋದಾಗ ಅವನ ಮನೆಯಲ್ಲಿ ತಂಗಿದ್ದನು. ಕ್ರೈಸ್ತರು ಅವನ ಮನೆಯಲ್ಲಿ ಸಭೆಯಾಗಿ ಕೂಡಿ ಬರುವರು.

9. ಎರಸ್ತನು ಕೊರಿಂಥ ಪಟ್ಣದ ಉಗ್ರಾಣಿಕನು. ಹೀಗೆ ಕ್ರಿಸ್ತನ ಮಾರ್ಗವು ಎಲ್ಲಾ ಅಂತಸ್ತಿನವರಲ್ಲಿ ಫಲ ಕೊಟ್ಟಿತು.

10. ಈ ರಹಸ್ಯವನ್ನು ಕುರಿತು ಪೂರ್ವಪ್ರವಾದಿಗಳು ಹೇಳಿದ್ದಾಗ್ಯೂ ಅವುಗಳನ್ನು ಯೆಹೂದ್ಯರು ಗ್ರಹಿಸದೆ ಜನಾಂಗಗಳವರು ಅರಿಯದೆ ಹೋದರು. ಸುವಾರ್ತೆಯ ಪ್ರಸಂಗದಿಂದ ಅದು ಎಲ್ಲಾ ದೇಶಗಳವರಿಗೂ ಪ್ರಕಟವಾಯಿತು.

11. ಪೌಲನು ಈ ಅಂತ್ಯೋಕ್ತಿಯಲ್ಲಿ ಪತ್ರಿಕೆಯ ಶ್ರೇಷ್ಠ ವಿಷಯವನ್ನೂ ಗುರಿಯನ್ನೂ ತಿಳಿಸುತ್ತಾನೆ. ಜನಾಂಗಗಳು ವಿಶ್ವಾಸಕ್ಕೆ ವಿಧೇಯರಾಗುವದೇ ಇದರ ಗುರಿಯು. ಆದಿಯಿಂದ ಮರೆಯಾಗಿದ್ದು ಪ್ರವಾದಿಗಳಿಂದ ಸಾರಲ್ಪಟ್ಟ ಈ ರಹಸ್ಯವು ಪ್ರಕಟವಾಯಿತು. ಈ ಪ್ರಕಟಣೆ ಸಮಸ್ತರನ್ನೂ ವಿಶ್ವಾಸಕ್ಕೆ ವಿಧೇಯರಾಗುವಂತೆ ಮಾಡ ಹೇತುವೆಯಾಯಿತು. ಇದರಿಂದ ತೋರುವ ದೇವರ ಕೃಪೆಯನ್ನು ನಾವು ಯಾವಾಗಲೂ ಸ್ತುತಿಸುವ. ಆಮೆನ್.

# THE FIRST EPISTLE OF PAUL THE APOSTLE TO THE CORINTHIANS.

## ಅಪೊಸ್ತಲನಾದ ಪೌಲನು
## ಕೊರಿಂಥ್ಯರಿಗೆ ಬರೆದ ಮೊದಲನೇ ಪತ್ರಿಕೆಯ ಪೀಠಿಕೆ.

ಗ್ರೀಕ ದೇಶವು ಪ್ರಖ್ಯಾತಿಯಾಗಿ ಬಾಳುವ ಕಾಲದಲ್ಲಿ ಕೊರಿಂಥ ಪಟ್ಣವು ಐಶ್ವರ್ಯದಲ್ಲಿಯೂ, ವಿದ್ಯದಲ್ಲಿಯೂ, ನಾಗರೀಕದಲ್ಲಿಯೂ, ಕೈಕೆಲಸಗಳಲ್ಲಿಯೂ ಕೀರ್ತಿ ಹೊಂದಿದ್ದಾಗಿತ್ತು.

ಅಪೊಸ್ತಲನಾದ ಪೌಲನು ಎರಡನೇ ಸಾರಿ ಪ್ರಸಂಗ ಮಾಡುವದಕ್ಕೆ ಪ್ರಯಾಣ ಮಾಡಿದಾಗ ಈ ಪಟ್ಣಕ್ಕೆ ಹೋಗಿ ಸುವಾರ್ತೆ ಪ್ರಸಂಗಿಸಿದನು. (೧೮. ಸಂಧಿ.) ದೇವಭಕ್ತಿಯುಳ್ಳ ಇಬ್ಬರು ಯೆಹೂದ್ಯರ ಸಂಗಡ ವಾಸ ಮಾಡಿ, ಸ್ವಂತ ಕೆಲಸದಿಂದ ಜೀವನ ಮಾಡಿ ಕೊಂಡು, ತನ್ನ ವಾಡಿಕೆಯ ಪ್ರಕಾರ ಮೊದಲು ಯೆಹೂದ್ಯರಿಗೆ ಕೆಲವು ವಾರಗಳು ಸಭೆಮನೆಯಲ್ಲಿ ಸುವಾರ್ತೆಯ ಬೋಧನೆಗಳನ್ನು ಬೋಧಿಸಿದ್ದರಿಂದ, ಅವರಿಂದ ಆತನಿಗೆ ಉಪದ್ರ ಸಂಭವಿಸಿತು. ಆದಾಗ್ಯೂ ಆಶ್ಚರ್ಯ ವಿಧವಾಗಿ ಆತನಿಗೆ ದೇವರ ಸಹಾಯ ಉಂಟಾದದರಿಂದ ಒಂದುವರೆ ಸಂವತ್ಸರ ಅಲ್ಲಿದ್ದು, ಕ್ರಿಸ್ತನ ಮಾರ್ಗವನ್ನು ಪ್ರಸಿದ್ಧಿ ಮಾಡಿದ್ದರಿಂದ ಅನೇಕರು ಗುಣ ಪಟ್ಟು ಸಭೆಯಲ್ಲಿ ಸೇರಿದರು.

ಪೌಲನು ಅಲ್ಲಿಂದ ಹೊರಟು ಹೋದ ತರುವಾಯ ಅಪೊಲ್ಲೋಸ್ ಎಂಬವನು ಅಲ್ಲಿಗೆ ಹೋಗಿ, ಆ ಮಾರ್ಗದ ವಿಷಯವನ್ನು ಕುರಿತು ಕ್ರೈಸ್ತರಿಗೂ ಯೆಹೂದ್ಯರಿಗೂ ಉಂಟಾದ ತರ್ಕಗಳಲ್ಲಿ ನಾನಾ ಪ್ರಕಾರ ಅನುಕೂಲ ಉಂಟು ಮಾಡಿದನು. (ಅಪೊ. ಕ್ರಿ. ೧೮. ೨೬, ೨೮.) ಇಂಥಾ ಸಹಾಯಗಳನ್ನೆಲ್ಲಾ ಹೊಂದಿದ ಆ ಸಭೆಯಲ್ಲಿ ಅನೇಕ ವಿಧವಾದ ತಾರುಮಾರುಗಳು ಉಂಟಾದವು. ಗ್ರೀಕರಲ್ಲಿ ಇದ್ದ ಹೆಚ್ಚಳವೂ, ಕಕ್ಷಿಯೂ, ಆ ಸಭೆಯವರಲ್ಲಿಯೂ ಉಂಟಾದದರಿಂದ ಸಭೆಯ ಸ್ಥಿತಿಯು ಬಹುಶಾ ಕೆಟ್ಟು ಹೋಯಿತು. ಬೋಧಕರ ಬೋಧನೆಗೆ ತಕ್ಕದ್ದಾಗಿ ನಾನಾ ಕಕ್ಷಿಗಾರರು ಎದ್ದರು. (೧. ೧೦—೧೨.) ಯೆಹೂದ್ಯ ಮತದ ಬೋಧಕರು ಪೌಲನ ಗುಣಾತಿಶಯಗಳನ್ನು ಕುರಿತೂ, ಕೆಲಸವನ್ನು ಕುರಿತೂ ಬಹಳವಾಗಿ ತಪ್ಪು ಹೊರಿಸುತ್ತಾ ಬಂದರು. ಒಂದು ಕಕ್ಷಿಗಾರರು ಸನ್ಮಾರ್ಗಕ್ಕೆ ಸ್ವಲ್ಪವಾದರೂ ಸರಿ ಬೀಳದ ಕಾರ್ಯಗಳನ್ನು ಮಾಡಿದರು; (೫, ೬. ಸಂಧಿ. ೯. ವ.) ಮತ್ತು ವಿಗ್ರಹಗಳಿಗೆ ನಡಿಯುವ ಉತ್ಸವಗಳಿಗೂ ಹೋದರು. (೮. ೪—೧೩; ೧೦. ೧೪—೨೩.) ಕೆಲವರು ತಮ್ಮ ಸಹೋದರರಿಗೆ ವಿರೋಧವಾಗಿ ಅಜ್ಞಾನ ನ್ಯಾಯಾಧಿಪತಿಗಳ ಬಳಿಯಲ್ಲಿ ಫಿರ್ಯಾದು ಮಾಡಿದರು. (೬. ೧—೮.) ಸ್ತ್ರೀಯರು ನಾಚಿಕೆ ಎಂಬ ಬೇಲಿಯನ್ನು ದಾಟಿದವರಾಗಿ ತಲೆಯ ಮೇಲೆ ಮುಸುಕಿಲ್ಲದೆ, ತೃಣೀಕಾರವಾಗಿ ಸಭೆಯಲ್ಲಿ ನಿಂತು ಪ್ರಸಂಗಿಸಿದರು. (೧೧. ೩—೧೦; ೧೪. ೩೪, ೩೫.) ಕರ್ತನ ರಾತ್ರಿಭೋಜನದ ಆಚರಣೆಯು ಒಂದು ಸಾಧಾರಣ ಔತಣದಂತೆ, ಸಭೆಯಲ್ಲಿ ತಾರುಮಾರಾಗಿ ನಡಿಯುತ್ತಾ ಇತ್ತು. (೧೧. ೨೦, ೩೪.) ಕ್ರಿಸ್ತನ ಮಾರ್ಗವು ಕಲಿಸುವ ಸದ್ಗುಣಗಳಿಗಿಂತ ಅದ್ಭುತವರಗಳು ಅಧಿಕ ಶ್ರೇಷ್ಠವೆಂದು ಅನೇಕರು ಎಣಿಸಿ ಕೊಂಡು ಭಕ್ತಿಯ ವೃದ್ಧಿಯನ್ನು ಕೋರದೆ, ಸ್ವಂತ ಹೊಗಳಿಕೆಯನ್ನು ಅಪೇಕ್ಷಿಸಿ, ಅವುಗಳನ್ನೇ ಪ್ರಯೋಗಿಸುತ್ತಾ ಬಂದರು. (೧೪. ಸಂಧಿ.) ಪುನರುತ್ಥಾನವೆಂಬ ಉಪದೇಶವು ಶಾಸ್ತ್ರಕ್ರಮಕ್ಕೆ ಸರಿ ಬೀಳದೆಂದು ಅನೇಕರು ಎಣಿಸಿ ಕೊಂಡು, ಅದನ್ನು ಕುರಿತು ಸಂದೇಹ ಪಟ್ಟು, ನಿರಾಕರಿಸುವದಕ್ಕೆ ಪ್ರಾರಂಭಿಸಿದರು. (೧೫. ೧೨.)

ಇಂಥಾ ತಾರುಮಾರುಗಳು ಉಂಟಾಗಿದ್ದ ಆ ಸಭೆಯಲ್ಲಿ ಉತ್ತಮ ಭಕ್ತರು ಅನೇಕರಿದ್ದದರಿಂದ, ಪೌಲನು ಅವರನ್ನು ಕುರಿತು ಸಾಧಾರಣವಾಗಿ ಮಾತಾಡುವಾಗ, ಕ್ರಿಸ್ತ ಯೇಸುವಿನಲ್ಲಿ ಪರಿಶುದ್ಧ ಮಾಡಲ್ಪಟ್ಟವರೆಂದು ಹೊಗಳಿ ಬರೆದಿರುವದು ನ್ಯಾಯವಾಗಿದೆ. ಅವರ ಸ್ಥಿತಿಯು ಅಜ್ಞಾನಾಂಧಕಾರದಿಂದ ಸುವಾರ್ತೆಯ ಆಶ್ಚರ್ಯವಾದ ಬೆಳಕಿನಲ್ಲಿ ಪ್ರವೇಶಿಸುವ ನೂತನ ಕ್ರೈಸ್ತರ ಸ್ಥಿತಿ. ಬಾಲ್ಯದಿಂದ ಅವರಲ್ಲಿ ಬೆಳದ ದುರ್ಗುಣಗಳು ಪೂರ್ಣ ನಿವರ್ತಿಯಾಗಿ, ಕ್ರಿಸ್ತನ ಮಾರ್ಗವು ಕಲಿಸುವ ಸದ್ಗುಣಗಳು ಅವರಲ್ಲಿ ಪೂರ್ಣ ಪ್ರಕಾಶ ಹೊಂದುವದಕ್ಕೆ ಬಹಳ ಕಾಲ ಹಿಡಿಯುವದೆಂಬುವದು ಸಹಜವಾದ ಕಾರ್ಯವೇ.

ಪೌಲನು ಎಫೆಸ ಪಟ್ಣದಲ್ಲಿ ವಾಸವಾಗಿದ್ದ ಕಡೇ ಕಾಲದಲ್ಲಿ ಕೊರಿಂಥ ಸಭೆಯವರಿಂದ ಆತನಿಗೆ ಒಂದು ಪತ್ರಿಕೆ ಬಂತೆಂದು ತೋರುತ್ತದೆ. ಅದರಲ್ಲಿ ತಮ್ಮೊಳಗಿದ್ದ ತಾರುಮಾರುಗಳನ್ನೂ ಕೆಟ್ಟತನಗಳನ್ನೂ ಕುರಿತು ಏನೂ ಹೇಳದೆ, ತಮ್ಮೊಳಗೆ ಹುಟ್ಟಿದ ನಾನಾ ತರ್ಕಗಳನ್ನು ಕುರಿತು ಆತನ ಅಭಿಪ್ರಾಯವನ್ನು ಕೇಳಿದ್ದರಿಂದ (೭. ೧; ೮. ೧. ವಚನಗಳ ವ್ಯಾಖ್ಯಾನದಲ್ಲಿ ನೋಡಬೇಕು.) ಆತನ ಬೋಧನೆಯ ಪ್ರಕಾರ ತಾವು ಇನ್ನೂ ನಡಿಯುತ್ತಾ ಇದ್ದೇವೆಂದು ತೋರಿಸಿದರು. (೧೧. ೨.) ಅವರೊಳಗಿದ್ದ ವಾಗ್ವಾದಗಳನ್ನು ಕುರಿತು ಪೌಲನು ಬೇರೊಬ್ಬರ ಮೂಲಕವಾಗಿ ಕೇಳಿ ಇದ್ದನು. (೧. ೧೧; ೫. ೧.) ತಿಮೊಥೆಯನಿಗೆ ತಕ್ಕ ಆಲೋಚನೆ ಹೇಳಿ, ಮಕೆದೋನ್ಯದಿಂದ ಕೊರಿಂಥಕ್ಕೆ ಹೋಗಿ ತಾನು ಸಭೆಯವರಿಗೆ ಹೇಳಿದ್ದ ಬೋಧನೆಗಳನ್ನೆಲ್ಲಾ ಅವರಿಗೆ ಜ್ಞಾಪಕ ಪಡಿಸಲೂ, (೪. ೧೭.) ತಾನು ಇನ್ನು ಸ್ವಲ್ಪ ಕಾಲದಲ್ಲಿ ಮಕೆದೋನ್ಯದ ಮಾರ್ಗವಾಗಿ ಹೋಗುವಾಗ

ಅವರನ್ನು ಕಾಣ ಮನಸ್ಸಾಗಿರುವದನ್ನು ಅವರಿಗೆ ತಿಳಿಯ ಮಾಡಲೂ ಅವನನ್ನು ಕಳುಹಿಸಿದನು. (೨ಕೊರಿ. ೧. ೧೫, ೧೬.) ಆದರೆ ಅವರನ್ನು ಕುರಿತು ಕೇಳಿ ಇದ್ದ ದುಃಖವಾದ ಸಮಾಚಾರದಿಂದ ಪೌಲನು ಕೊರಿಂಥಕ್ಕೆ ಹೋಗ ಬೇಕೆಂದಿದ್ದ ತನ್ನ ಕೋರಿಕೆಯನ್ನು ಕೆಲವು ಕಾಲ ಈಡೇರಿಸದೆ ಇದ್ದನು. (೧೬. ೫, ೭. ವಚನಗಳ ವ್ಯಾಖ್ಯಾನದಲ್ಲಿ ನೋಡ ಬೇಕು.) ಆದದರಿಂದ ಆತನು ಸಂಗಡಲೇ ಈ ಪತ್ರಿಕೆಯನ್ನು ಬಹಳ ಕಣ್ಣೀರಿನಿಂದ ಬರೆದು ಕಳುಹಿಸಿದನು.

ಇದು ೫೭ನೇ ವರುಷದಲ್ಲಿ ಎಫೆಸ ಪಟ್ಟದಲ್ಲಿ ಬರೆಯಲ್ಪಟ್ಟಿತು. ಪೌಲನು ಕೊರಿಂಥ ಪಟ್ಟಕ್ಕೆ ಹೋಗುವ ಉದ್ದಿಶ್ಯವಾಗಿ ಎಫೆಸವನ್ನು ಬಿಟ್ಟು, ಮಕೆದೋನ್ಯಕ್ಕೆ ಹೊರಡುವ ಸಮಯದಲ್ಲಿ ಇದನ್ನು ಆತನು ಬರೆದನೆಂದು ತೋರುತ್ತದೆ. (೧೬. ೫, ೮.)

**I.** ಈ ಪತ್ರಿಕೆಯ ಮೊದಲನೇ ಭಾಗದಲ್ಲಿ ಪೌಲನು ಸಭೆಯವರಿಗೆ ವಂದನೆ ಹೇಳಿ, ಅವರಲ್ಲಿ ತೋರಲ್ಪಟ್ಟ ಸತ್ಕಾರ್ಯಗಳಿಗಾಗಿ ದೇವರನ್ನು ಸ್ತುತಿಸಿ, ತರುವಾಯ ಅವರೊಳಗಿದ್ದ ಭೇದಗಳನ್ನೂ ಕಕ್ಷಿಗಳನ್ನೂ ಎತ್ತಿ ತೋರಿಸಿ, ತನ್ನ ಪ್ರಸಂಗದ ಸ್ವಭಾವವನ್ನೂ ಕ್ರಿಸ್ತಮಾರ್ಗದ ಬೋಧನೆಯ ಶ್ರೇಷ್ಠತ್ವವನ್ನೂ ವಿವರಿಸುತ್ತಾನೆ. (೧—೪. ಸಂಧಿ.)

**II.** ಸನ್ಮಾರ್ಗವನ್ನು ಬಿಟ್ಟು ತೊಲಗಿದ್ದು, ಸಭೆಯ ಕ್ರಮದಿಂದ ತೊಲಗಿದ್ದು, ಕ್ರಿಸ್ತಮಾರ್ಗದ ಪ್ರೀತಿಯನ್ನೂ ನೀತಿಯನ್ನೂ ಬಿಟ್ಟು ಬಿಟ್ಟದ್ದು ಮುಂತಾದ ಈ ಅಪರಾಧಗಳ ನಿಮಿತ್ತ ಸಭೆಯವರನ್ನು ಖಂಡಿಸುತ್ತಾನೆ. (೫, ೬. ಸಂಧಿ.)

**III.** ಮದುವೆ, ವಿಗ್ರಹಗಳಿಗೆ ಅರ್ಪಿಸಲ್ಪಟ್ಟವುಗಳನ್ನು ಉಣ್ಣುವದು ಮುಂತಾದ ವಿಷಯಗಳನ್ನು ಕುರಿತು ಸಭೆಯವರು ಕೇಳಿದ ಪ್ರಶ್ನೆಗಳಿಗೆ ತಕ್ಕ ಉತ್ತರ ಹೇಳಿ, ತಮ್ಮ ಕ್ಷೇಮಕ್ಕೂ ಮತ್ತೊಬ್ಬರ ಮೇಲಿಗೂ ಹೇತುವೆಯಾಗಿ ಅವರು ತಮ್ಮನ್ನು ಅಲ್ಲಗಳೆದು ನಡಿಯ ಬೇಕೆಂದು ಆಜ್ಞಾಪಿಸುತ್ತಾನೆ. (೭—೧೧. ಸಂಧಿ. ೧. ವಚನ.)

**IV.** ಅವರು ನಡಿಸುತ್ತಾ ಬಂದ ಆರಾಧನೆಯಲ್ಲಿ ಮಾಡಿದ ತಾರುಮಾರುಗಳನ್ನು ಕುರಿತು ಹೇಳಿ ಅವರನ್ನು ಖಂಡಿಸುತ್ತಾನೆ. ಮೊದಲನೇದು, ಸಭೆಯಲ್ಲಿ ಸ್ತ್ರೀಯರು ಅಯೋಗ್ಯವಾಗಿ ನಡೆದದ್ದು; ಎರಡನೇದು, ಕರ್ತನ ರಾತ್ರಿಭೋಜನವನ್ನು ಭಯಭಕ್ತಿ ಇಲ್ಲದೆ ಅನುಭವಿಸಿದ್ದು; ಮೂರನೇದು, ಅದ್ಭುತವರಗಳನ್ನು ತಪ್ಪಾಗಿ ಪ್ರಯೋಗಿಸಿದ್ದು ಮುಂತಾದ ಈ ಅಪರಾಧಗಳ ನಿಮಿತ್ತ ಅವರನ್ನು ಖಂಡಿಸಿ, ಎಲ್ಲವುಗಳಿಗಿಂತ ಶ್ರೇಷ್ಠ ವರವಾದ ಪ್ರೀತಿಯನ್ನು ಎಲ್ಲರೂ ಅನುಸರಿಸಿ, ಅದರ ಇಂಬನ್ನು ಗ್ರಹಿಸಿ ನಡಿಯ ಬೇಕೆಂದು ಆಜ್ಞಾಪಿಸುತ್ತಾನೆ. (೧೧. ೨—೧೪. ಸಂಧಿ.)

**V.** ಪುನರುತ್ಥಾನವನ್ನು ಕುರಿತು ಉಂಟಾದ ಆಕ್ಷೇಪಣೆಗಳಿಗೆ ಸಮಾಧಾನ ಹೇಳಿ, ಅದರ ನಿಶ್ಚಯತ್ವವನ್ನು ಸ್ಥಾಪಿಸಿ, ಅದರ ಸ್ವಭಾವವನ್ನು ವಿವರಿಸುತ್ತಾನೆ. (೧೫. ಸಂಧಿ.)

**VI.** ಯೆರೂಸಲೇಮಿನಲ್ಲಿರುವ ಪರಿಶುದ್ಧವಂತರಿಗೋಸ್ಕರ ಕೊಡಲ್ಪಟ್ಟ ಧರ್ಮಕಾಣಿಕೆಯನ್ನು ಕುರಿತು ಕೆಲವು ಬೋಧನೆಗಳನ್ನು ಹೇಳಿ, ವಂದನೆಯಿಂದ ಪತ್ರಿಕೆಯನ್ನು ಮುಗಿಸುತ್ತಾನೆ. (೧೬. ಸಂಧಿ.)

ಕೊರಿಂಥ್ಯರಿಗೆ ಬರೆಯಲ್ಪಟ್ಟ ಎರಡು ಪತ್ರಿಕೆಗಳಲ್ಲಿಯೂ ಹಲವು ಮುಖ್ಯ ವಿಷಯಗಳು ಅಡಗಿವೆ. ಪೌಲನ ನಾನಾ ತರದ ಜೀವವೃತ್ತಾಂತಗಳೂ, ಗುಣಾತಿಶಯಗಳೂ ಅವುಗಳಲ್ಲಿ ಚನ್ನಾಗಿ ತೋರುತ್ತವೆ. ವಿವೇಕವು, ಸಾಮರ್ಥ್ಯವು, ಧೃಢತ್ವವು, ಶಾಂತವು, ವೈರಾಗ್ಯವು, ತಾಳ್ಮೆಯು, ಸಾಮಾನ್ಯ ವಿಷಯಗಳಲ್ಲಿ ದಯದಾಕ್ಷಿಣ್ಯವು, ಮುಖ್ಯ ವಿಷಯಗಳಲ್ಲಿ ತಪ್ಪಿಹೋಗದ ಮನೋಸ್ಥಿರತ್ವವು ಮುಂತಾದ ಗುಣ ಲಕ್ಷಣಗಳು ಪೌಲನಲ್ಲಿ ಪ್ರಕಾಶಿಸಿದ್ದು ಈ ಪತ್ರಿಕೆಗಳಲ್ಲಿ ಚನ್ನಾಗಿ ಕಾಣುತ್ತದೆ. ಮತ್ತು ಅಜ್ಞಾನಮಾರ್ಗದಲ್ಲಿದ್ದು ಕ್ರಿಸ್ತಮಾರ್ಗವನ್ನು ಅನುಸರಿಸಿದ ಒಂದು ಪೂರ್ವಿಕ ಸಭೆಯ ಒಳಗಿನ ಸ್ಥಿತಿಯೂ, ದೇವರ ಕೃಪೆಯನ್ನು ಹೊಂದಿದ ಕ್ರೈಸ್ತರು ಕ್ರೈಸ್ತರಲ್ಲದ ಅಜ್ಞಾನರೊಳಗೆ ಹ್ಯಾಗೆ ನಡೆಯ ಬೇಕೆಂದೂ, ಈ ಪತ್ರಿಕೆಗಳಲ್ಲಿ ಸ್ಪಷ್ಟವಾಗಿ ತೋರುತ್ತದೆ.

# THE FIRST EPISTLE OF PAUL THE APOSTLE TO THE CORINTHIANS.

## ಅಪೊಸ್ತಲನಾದ ಪೌಲನು

# ಕೊರಿಂಥ್ಯರಿಗೆ ಬರೆದ ಮೊದಲನೇ ಪತ್ರಿಕೆ.

ಪೀಠಿಕೆ; ಆಶೀರ್ವಾದ; ಸ್ತೋತ್ರ.

1\. [1]ದೇವರ ಚಿತ್ತದಿಂದ ಯೇಸು ಕ್ರಿಸ್ತನು [2]ಕರೆದ ಅಪೊಸ್ತಲನಾದ ಪೌಲನೂ, ಸಹೋದರನಾದ [3]ಸೋ
೨ ಸ್ಥೆನನೂ, ಕ್ರಿಸ್ತ ಯೇಸುವಿನಲ್ಲಿ [4]ಪರಿಶುದ್ಧ ಮಾಡಲ್ಪಟ್ಟು, [5]ಕರೆಯಲ್ಪಟ್ಟ ಪರಿಶುದ್ಧರಾದಂಥ, ಕೊರಿಂಥದಲ್ಲಿ
ರುವ ದೇವರ ಸಭೆಗೂ, ಸಕಲ ಸ್ಥಳಗಳಲ್ಲಿ ಅವರಿಗೂ [6]ನಮಗೂ ಕರ್ತನಾಗಿರುವ [7]ಯೇಸು ಕ್ರಿಸ್ತನ ಹೆಸ
೩ ರನ್ನು ಕರೆಯುವವರೆಲ್ಲರಿಗೂ— ನಮ್ಮ ತಂದೆಯಾದ ದೇವರಿಂದಲೂ, ಕರ್ತನಾದ ಯೇಸು ಕ್ರಿಸ್ತನಿಂದಲೂ,
ನಿಮಗೆ ಕೃಪೆಯೂ [8]ಸಮಾಧಾನವೂ ಆಗಲಿ.
೪ ಯೇಸು [9]ಕ್ರಿಸ್ತನಲ್ಲಿ ನಿಮಗೆ ಕೊಡಲ್ಪಟ್ಟ ದೇವರ ಕೃಪೆಗೋಸ್ಕರ ನಿಮ್ಮನ್ನು ಕುರಿತು ನನ್ನ ದೇವರನ್ನು
೫ ಯಾವಾಗಲೂ ಸ್ತುತಿಸುತ್ತೇನೆ. ಯಾಕಂದರೆ, ಕ್ರಿಸ್ತನ ಸಾಕ್ಷಿ ನಿಮ್ಮಲ್ಲಿ ಸ್ಥಿರ ಪಟ್ಟ ಹಾಗೆಯೇ,

---

1\. ಈ ಪತ್ರಿಕೆಯ ಮುಂಭಾಗದಲ್ಲಿ ಪೌಲನು ತನ್ನ ಅಪೊಸ್ತಲೋದ್ಯೋಗವನ್ನೂ ಕೊರಿಂಥದ ಸಭೆಯವರ ಪರಿಶುದ್ಧ ಕರೆಯುವಿಕೆಯನ್ನೂ ಕುರಿತು ಹೇಳಿ, ಅವರಿಗೆ ಸಕಲ ವಿಧ ಆತ್ಮವರಗಳು ಕರುಣಾಕರ ದೇವರಿಂದ ಉಂಟಾಗ ಬೇಕೆಂದು ಕೋರಿ, (೧—೩. ವ.) ಅವರಿಗೆ ಅನುಗ್ರಹಿಸಲ್ಪಟ್ಟ ಶ್ರೇಷ್ಠ ಆಶೀರ್ವಾದಗಳ ನಿಮಿತ್ತವೂ, ಅವರು ಕಡೇ ವರಿಗೂ ಸತ್ಯದಲ್ಲಿ ನೆಲೆಯಾಗಿ ನಿಲ್ಲುವರೆಂದು ತನಗಿರುವ ನಂಬಿಕೆಯ ನಿಮಿತ್ತವೂ, ದೇವರನ್ನು ಸ್ತುತಿಸುತ್ತಾನೆ. (೪—೯. ವ.)

2\. (ರೋಮಾ. ೧. ೧. ವಚನದ ವ್ಯಾಖ್ಯಾನದಲ್ಲಿ ನೋಡ ಬೇಕು.) ದೇವರ ಚಿತ್ತದಿಂದ ತನಗೆ ಅಪೊಸ್ತಲ ಉಳಿಗವು ದೊರಕಿತೆಂದು ಪೌಲನು ಹೇಳಿದ್ದು, ಕೊರಿಂಥದ ಸಭೆಯಲ್ಲಿ ಅವನ ಅಧಿಕಾರವನ್ನು ಅಲಕ್ಷ್ಯ ಮಾಡಿದ ಕೆಲವರಿಗೆ ಎಚ್ಚರಿಸುವದಾಗಿಯೂ, ತನಗೆ ದೊರಕಿದ ಮೇಲುಗಳೆಲ್ಲಾ ದಯಾಪರನಾದ ದೇವರ ಕೃಪೆಯಿಂದ ಕೊಡಲ್ಪಟ್ಟವೆಂದೂ, ಅವನು ಕೃತಜ್ಞತೆಯಿಂದ ಒಪ್ಪಿಕೊಂಡದ್ದಾಗಿಯೂ ಇರುತ್ತದೆ. (ಗಲಾ. ೧. ೧.)

3\. ಸೋಸ್ಥೆನನು ಕೊರಿಂಥ ಪಟ್ಟದಲ್ಲಿದ್ದ ಯೆಹೂದ್ಯರ ಸಭೆಮನೆಯ ಯಜಮಾನನಾಗಿದ್ದನು. (ಅಪೊ. ಕ್ರಿ. ೧೮. ೧೭.) ಇವನು ಮೊದಲಲ್ಲಿ ಕ್ರಿಸ್ತನ ಮಾರ್ಗವನ್ನು ವಿರೋಧಿಸುವವನಾಗಿದ್ದಾಗ್ಯೂ, ತರುವಾಯ ಅವನು ಗುಣ ಪಟ್ಟು ಸುವಾರ್ತೆ ಪ್ರಸಂಗಿಸುವವನಾದನೆಂದು ತೋರುತ್ತದೆ. ಕೊರಿಂಥದ ಸಭೆಯವರು ಇವನನ್ನು ಚನ್ನಾಗಿ ಅರಿತಿದ್ದದರಿಂದ ಪೌಲನು ತನ್ನ ಹೆಸರಿನ ಸಂಗಡ ಅವನ ಹೆಸರನ್ನು ಸೇರಿಸಿ ಬರೆಯುತ್ತಾನೆ. ಇವನು ಪೌಲನಿಗೆ ಬರೆಯುವ ಕೆಲಸದವನಾಗಿದ್ದರೂ ಇರ ಬಹುದು.

4\. ಕ್ರಿಸ್ತನ ಸಭೆಯಲ್ಲಿ ಕೊರಿಂಥದ ಸಭೆಯು ಒಂದು ಭಾಗವಾಗಿರುವದರಿಂದ ಅದನ್ನು ಕುರಿತು ಹುದುವಾಗಿ ಮಾತಾಡುವಾಗ ಪರಿಶುದ್ಧ ಮಾಡಲ್ಪಟ್ಟವರೆಂದು ಕೃತಜ್ಞತೆಯಿಂದ ಹೇಳುತ್ತಾನೆ. (೪. ವ.) ಆದರೆ ಆ ಸಭೆಯಲ್ಲಿ ಅನೇಕರು ಕೊರತೆಯುಳ್ಳವರಾಗಿದ್ದರೇ ಹೊರ್ತು ಪೂರ್ಣ ಪರಿಶುದ್ಧರಲ್ಲವೆಂದು ಕೆಳಗೆ ಬರುವ ವಿಷಯಗಳಿಂದ ತೋರುವದು. (೩. ೨—೪.)

5\. ರೋಮಾ. ೧. ೬, ೭. ವಚನಗಳ ವ್ಯಾಖ್ಯಾನದಲ್ಲಿ ನೋಡ ಬೇಕು.

6\. ಕ್ರಿಸ್ತನು ಒಂದು ಕಕ್ಷಿಯವರಿಗೆ ಮಾತ್ರವಲ್ಲ, ನಮ್ಮಲ್ಲಿಯಾದರೂ ಬೇರೆ ಯಾವ ಸ್ಥಳದಲ್ಲಾದರೂ ಇರುವ ಎಲ್ಲಾ ಉತ್ತಮ ಭಕ್ತರಿಗೆ ಕರ್ತನಾಗಿದ್ದಾನೆ.

7\. ಅಪೊ. ಕ್ರಿ. ೨. ೩೮. ವಚನದ ವ್ಯಾಖ್ಯಾನದಲ್ಲಿ ನೋಡ ಬೇಕು.

8\. ರೋಮಾ. ೧. ೫. ವಚನದ ವ್ಯಾಖ್ಯಾನದಲ್ಲಿ ನೋಡ ಬೇಕು.

9\. ಉತ್ತಮ ಭಕ್ತರು ಕ್ರಿಸ್ತನ ಸಂಗಡ ಐಕ್ಯವುಳ್ಳವರಾಗಿರುವದರಿಂದ, ಆತನಲ್ಲಿ ಅವರಿಗೆ ದೇವರ ಕೃಪೆ ಕೊಡಲ್ಪಟ್ಟಿತು. ಮತ್ತು ಎಲ್ಲಾ ವರಗಳೂ ಆಶೀರ್ವಾದಗಳೂ ಆತನಲ್ಲಿ ಆತನ ಮೂಲಕವಾಗಿ ಕೊಡಲ್ಪಡುತ್ತವೆ.

೬ ಸಮಸ್ತ [1]ವಾಕ್ಯದಲ್ಲಿಯೂ, ಸಮಸ್ತ ತಿಳುವಿಕೆಯಲ್ಲಿಯೂ, ಎಲ್ಲಾದರಲ್ಲಿ ಅವನಿಂದ ಐಶ್ವರ್ಯವಂತರಾದಿರಿ.
೭ ಆದ ಕಾರಣ ಯಾವ ವರದಲ್ಲಿಯೂ ಕೊರತೆಯಾಗಿರದೆ, ನಮ್ಮ ಕರ್ತನಾದ ಯೇಸು ಕ್ರಿಸ್ತನು ಪ್ರತ್ಯಕ್ಷ
೮ ವಾಗುವದನ್ನು ಎದುರು ನೋಡುತ್ತಾ ಇದ್ದೀರಿ. ಅವನೇ ನಮ್ಮ ಕರ್ತನಾದ ಯೇಸು ಕ್ರಿಸ್ತನ ದಿವಸದಲ್ಲಿ,
೯ ನೀವು ನಿರಪರಾಧಿಗಳಾಗಿರುವ ಹಾಗೆ, ಕಡೇ ವರಿಗೂ ನಿಮ್ಮನ್ನು ಸ್ಥಿರ ಪಡಿಸುವನು. ಯೇಸು ಕ್ರಿಸ್ತನೆಂಬ
[2]ನಮ್ಮ ಕರ್ತನಾಗಿರುವ ತನ್ನ ಮಗನ ಅನ್ಯೋನ್ಯಕ್ಕೆ ನಿಮ್ಮನ್ನು ಕರೆದ ದೇವರು [3]ನಂಬಿಕೆಯುಳ್ಳವನಾಗಿದ್ದಾನೆ.

ಕಕ್ಷಿಗಾರರನ್ನು ಖಂಡಿಸಿದ್ದು; ಪೌಲನು ಪ್ರಸಂಗಿಸಿದ ವಿಧವು.

೧೦ ಮತ್ತು, [4]ಸಹೋದರರೇ, ನೀವೆಲ್ಲರು [5]ಒಂದನ್ನೇ ಹೇಳ ಬೇಕೆಂದೂ, ನಿಮ್ಮೊಳಗೆ ಭೇದಗಳು ಇಲ್ಲದೆ, ಒಂದೇ
ಮನಸ್ಸಿನಲ್ಲಿಯೂ ಒಂದೇ ಆಲೋಚನೆಯಲ್ಲಿಯೂ [6]ಯುಕ್ತವಾಗಿ ಕೂಡಿರ ಬೇಕೆಂದೂ, ನಮ್ಮ ಕರ್ತನಾದ

1. ವಾಕ್ಯದಲ್ಲಿ ಎಂಬುವದು ಸುವಾರ್ತೆಯಾದ ದಿವ್ಯ ಪ್ರಕಟಣೆಯನ್ನು ಸೂಚಿಸುತ್ತದೆ. ಸಮಸ್ತ ತಿಳುವಿಕೆಯಲ್ಲಿ ಎಂಬುವದು ಸುವಾರ್ತೆಯ ಸತ್ಯವನ್ನು ಕುರಿತು ಅವರ ಮನಸ್ಸುಗಳಲ್ಲಿ ಉಂಟಾಗಿದ್ದ ನಿಶ್ಚಯವನ್ನು ಸೂಚಿಸುತ್ತದೆ. ಹೀಗೆ ಅವರು ಸಾಧಾರಣ ವರಗಳು, ಅದ್ಭುತವರಗಳು ಆದ ಆತ್ಮನ ವರಪ್ರಸಾದಗಳಲ್ಲಿ ಬೇರೊಬ್ಬರಿಗೆ ಕಡಿಮೆಯಾದವರಲ್ಲ. ಅವರು ಯೇಸು ಕ್ರಿಸ್ತನ ಪ್ರತ್ಯಕ್ಷತೆಯ ಕಾಲವನ್ನು ಆಶೆಯಿಂದ ಎದುರು ನೋಡುತ್ತಿದ್ದದರಿಂದ ಅವರು ವಿಶೇಷವಾದ ವರವನ್ನು ಹೊಂದಿದವರೆಂಬುವದಕ್ಕೆ ಸಂದೇಹವಿಲ್ಲ. (೭. ವ.)

2. ಈ ಸಂಧಿಯಲ್ಲಿ ಮೊದಲನೇ ಹತ್ತು ವಚನಗಳಲ್ಲಿ ಅಪೊಸ್ತಲನಾದ ಪೌಲನು ಹತ್ತು ಸಾರಿ ಕ್ರಿಸ್ತನ ಪರಿಶುದ್ಧ ಹೆಸರನ್ನು ಉಚ್ಚರಿಸುತ್ತಾನೆ. ಆತನನ್ನೇ ನಮಸ್ಕರಿಸ ಬೇಕೆಂದೂ, ಸಕಲ ಕೃಪೆಗೂ ಸಮಾಧಾನಕ್ಕೂ ಆತನೇ ಕಾರಣನೆಂದೂ, ತನ್ನ ಅಪೊಸ್ತಲೋದ್ಯೋಗವು ಆತನಿಂದಲೇ ಬಂತೆಂದೂ, ಆತನೇ ಸುವಾರ್ತೆಯ ಅರ್ಥವೆಂದೂ, ಕ್ರೈಸ್ತರು ಆತನ ಸಂಗಡ ಐಕ್ಯ ಮಾಡಲ್ಪಟ್ಟವರೆಂದೂ, ಆತನಿಂದಲೇ ಪರಿಶುದ್ಧ ಮಾಡಲ್ಪಡುವವರೆಂದೂ, ಪರಿಶುದ್ಧತ್ವದಲ್ಲಿ ಆತನಿಗೆ ಸಮವಾಗುವವರೆಂದೂ, ಆತನ ಮಹಿಮೆಯಾದ ಪ್ರಸನ್ನತೆಗೆ ಕಾದು ಕೊಂಡಿರುವವರೆಂದೂ ಹೇಳುತ್ತಾನೆ. ಕ್ರಿಸ್ತರಕ್ಷಕನ ಮೇಲೆ ಪೌಲನಿಗೆ ಇದ್ದ ಪ್ರೀತಿಯೂ ಭಕ್ತಿಯೂ ಇದರಲ್ಲಿ ಚನ್ನಾಗಿ ತೋರುತ್ತದೆ. ಮತ್ತು ಮನುಷ್ಯರನ್ನು ನಂಬಿ ಕೊಂಡು ನಾನಾ ಕಕ್ಷಿಗಾರರನ್ನೂ ಬೋಧಕರನ್ನೂ ಅನುಸರಿಸುವದು ತಕ್ಕದ್ದಲ್ಲವೆಂದೂ ಎಚ್ಚರಿಸುವಂಥಾದ್ದಾಗಿದೆ ಎಂದು ತೋರುತ್ತದೆ. (೧೦—೧೨. ವ.)

3. ದೇವಭಕ್ತರೆಲ್ಲರೂ ಕ್ರಿಸ್ತನ ಸಂಗಡ ಐಕ್ಯವಾಗಿ ಆತನ ಪರಿಶುದ್ಧ ಹೋಲಿಕೆಯನ್ನು ಧರಿಸಿ ಕೊಳ್ಳುವದು, ಇನ್ನು ಮೇಲೆ ಆತನ ಮಹಿಮೆಯನ್ನು ಹೊಂದುವರೆಂಬುವದಕ್ಕೆ ಮುಂಗುರುತಾಗಿಯೂ ದೃಷ್ಟಾಂತವಾಗಿಯೂ ಇರುತ್ತದೆ. (ರೋಮಾ. ೮. ೨೧—೨೩.) ಇಂಥಾ ಮಹಿಮೆ ಅವರಿಗೆ ಉಂಟಾಗುತ್ತದೆಂಬ ನಂಬಿಕೆಯುಳ್ಳ ವಾಗ್ದತ್ತವನ್ನು ಕೊಟ್ಟ ದೇವರು ಸತ್ಯಪರನಾಗಿದ್ದಾನೆ. (ಫಿಲಿ. ೧. ೬.)

4. ಕೊರಿಂಥದ ಸಭೆಯಲ್ಲಿ ಉಂಟಾಗಿದ್ದ ಕೆಲವು ಕೇಡಾದ ಸಂಗತಿಗಳನ್ನು ಕುರಿತು ಪೌಲನು ಕೇಳಿದವುಗಳನ್ನು, ಅವರಿಗೆ ಹೇಳಿ ತೋರಿಸಿ ಖಂಡಿಸುತ್ತಾನೆ. ಸದ್ಗುರುವಾದ ಕ್ರಿಸ್ತನಿಗೆ ಬದಲಾಗಿ ಬೋಧಕರನ್ನು ಏರ್ಪಡಿಸಿ ಕೊಂಡು ಒಬ್ಬೊಬ್ಬನು ಒಂದೊಂದು ಕಕ್ಷಿಗೆ ಶೇರಿ ಕೊಳ್ಳುವದು ತಕ್ಕದ್ದಲ್ಲವೆಂದು ತೋರಿಸುತ್ತಾನೆ. (೧೦—೧೨. ವ.) ಈ ಸತ್ಯವು ಅವರ ಮನಸ್ಸಿಗೆ ಚನ್ನಾಗಿ ತಗಲಿ, ಅವರು ಅದನ್ನು ಗ್ರಹಿಸುವ ಹಾಗೆ, ತಾನು ಅವರೊಳಗೆ ವಾಸ ಮಾಡಿದ ಕಾಲದಲ್ಲಿ ತನ್ನನ್ನು ಹೆಚ್ಚು ಮಾಡಿ ಕೊಳ್ಳದೆ, ಮನುಷ್ಯರ ಜ್ಞಾನವನ್ನೂ ಹೆಚ್ಚಳವನ್ನೂ ತಗ್ಗಿಸುವ ದೇವರನ್ನೇ ಶ್ರೇಷ್ಠ ಮಾಡಿದೆನೆಂದು ಹೇಳುತ್ತಾನೆ. (೧೩—೩೧. ವ.) ಅವರ ವಿಶ್ವಾಸವು ಕ್ರಿಸ್ತನ ಮೇಲೆ ಮಾತ್ರ ನಿಲ್ಲುವಂತೆ, ಆತನನ್ನು ಕುರಿತು ಲೋಕದ ಜ್ಞಾನದಿಂದ ಪ್ರಸಂಗಿಸದೆ, ಕಪಟವಿಲ್ಲದ ಯೋಚನೆಯಿಂದ ಪ್ರಸಂಗಿಸಿದೆನೆಂದು ಹೇಳುತ್ತಾನೆ. (೨. ೧—೫.) ಹೀಗೆ ಅವನು ಪ್ರಸಂಗಿಸಿದ ಸುವಾರ್ತೆಯು ದೇವರ ಉತ್ತಮ ಜ್ಞಾನಪೂರಿತವಾದದ್ದಾಗಿಯೂ, ಪರಿಶುದ್ಧಾತ್ಮನ ಕೃಪೆಯ ವರವನ್ನು ಹೊಂದಿದವರು ಮಾತ್ರ ಅರಿತು ಅಂಗೀಕರಿಸ ತಕ್ಕದ್ದಾಗಿಯೂ ಇತ್ತು. (೬—೧೬. ವ.) ಅದರಿಂದ ಅದು ಮಾಂಸಭಾವದವರಾದ ಕೊರಿಂಥ್ಯರಿಗೆ ತಿಳಿಯಲಿಲ್ಲ. (೩. ೧—೪.) ಈ ಕಾರಣದಿಂದ ಅವರು ದಾಸರನ್ನು ಗುರುವಿನಂತೆ ಎಣಿಸಿದರು. (೫—೯. ವ.) ಇದರ ಸಲವಾಗಿ ಅವರು ಕ್ರಿಸ್ತನಿಗೆ ಮಾತ್ರ ಉತ್ತರ ಕೊಡ ಬೇಕು. (೧೦—೧೭. ವ.) ಆತನು ಲೋಕದ ಜ್ಞಾನವನ್ನು ವ್ಯರ್ಥ ಮಾಡಿ, ತನ್ನ ಸಭೆಯ ಮೇಲಿಗೆ ಅನುಕೂಲವಾಗಿ ತನ್ನ ಆಶೀರ್ವಾದಗಳನ್ನು ಅನುಗ್ರಹಿಸುತ್ತಾನೆ.(೧೮—೨೩.ವ.) ದೇವರ ಉಗ್ರಾಣಿಕರಾದ ಬೋಧಕರು ಯಥಾರ್ಥವಂತರಾಗಿ ಮನುಷ್ಯರ ಹೊಗಳಿಕೆಯನ್ನು ಅಪೇಕ್ಷಿಸದೆ, ಎಲ್ಲಾ ವರಗಳಿಗೆ ಬುಗ್ಗೆಯಾದ ಆತನ ಮಹಿಮೆಯನ್ನು ಕೋರಿ ನಡಿಯ ತಕ್ಕದ್ದು. (೪. ೧—೭.) ಅಪೊಸ್ತಲರಾದ ದೇವರ ದಾಸರ ತಾಳ್ಮೆಯನ್ನೂ ಭಕ್ತಿ ವೈರಾಗ್ಯವನ್ನೂ ತೋರಿಸಿ, ತಮಗೆ ಅಧಿಕವಾದ ಆತ್ಮವರಗಳುಂಟೆಂದು ಹೆಚ್ಚಳ ಪಟ್ಟ ಕೊರಿಂಥ್ಯರ ಗರ್ವವನ್ನು ಖಂಡಿಸಿದ್ದು. (೮—೧೩. ವ.) ಕ್ರಿಸ್ತನಲ್ಲಿ ಅವರಿಗೆ ತಂದೆಯಾಗಿದ್ದ ಪೌಲನು ಅವರಿಗೆ ಹೇಳುವ ಬುದ್ಧಿಮತಿಗಳನ್ನು ಪ್ರೀತಿಯಿಂದಲೂ ಭಕ್ತಿ ವೈರಾಗ್ಯದಿಂದಲೂ ಹೇಳಿ ಅವರನ್ನು ಎಚ್ಚರಿಸುತ್ತಾನೆ. (೧೪—೨೧. ವ.)

5. ೨೨ನೇ ವಚನದಲ್ಲಿ ಹೇಳಲ್ಪಟ್ಟ ವ್ಯತ್ಯಾಸವಾದ ಕಾರ್ಯಗಳಿಗೆ ಎದುರಾದ ಒಂದೇ ಕಾರ್ಯವನ್ನು ಅವರು ಯೋಚಿಸ ಬೇಕೆಂದು ಹೇಳಿ ಇದೆ. ಇದು ಅವರೊಳಗಿರ ಬೇಕಾದ ಐಕ್ಯವನ್ನು ಕುರಿತು ಹೀಗೆ ಹೇಳಲ್ಪಟ್ಟಿದೆ.

6. ಹರಕು ವಸ್ತ್ರವು ಹೊಲಿಗೆಯಿಂದ ತಿರಿಗಿ ಕೂಡಿ ಕೊಂಡು ನೆಟ್ಟಗಾಗುವ ಪ್ರಕಾರ ಭೇದಗಳಿಂದ ಬೇರೆಯಾದ ಕೊರಿಂಥ್ಯರು ಏಕ ಮನಸ್ಸೂ ಏಕ ಯೋಚನೆಯೂ ಉಳ್ಳವರಾಗಿ ನೆಟ್ಟಗಾಗ ಬೇಕು ಅನ್ನುತ್ತಾನೆ.



೧೧ ಯೇಸು ಕ್ರಿಸ್ತನ ಹೆಸರಿನಿಂದ ನಿಮ್ಮನ್ನು ಬೇಡಿ ಕೊಳ್ಳುತ್ತೇನೆ. ಯಾಕಂದರೆ, ನನ್ನ ಸಹೋದರರೇ, ನಿಮ್ಮೊ
೧೨ ಳಗೆ ವಾಗ್ವಾದಗಳುಂಟೆಂದು, ನಿಮ್ಮನ್ನು ಕುರಿತು [1]ಕ್ಲೋವೆಯವರಿಂದ ನನಗೆ ತಿಳಿಸಲ್ಪಟ್ಟಿತು. ನಾನು ಹೇ
ಳುವದೇನಂದರೆ, [2]ನಿಮ್ಮಲ್ಲಿ ಒಬ್ಬೊಬ್ಬನು—ನಾನು ಪೌಲನವನು, ನಾನು ಅಪೊಲ್ಲೋಸನವನು, ನಾನು [3]ಕೇಫ
ನವನು, ನಾನು [4]ಕ್ರಿಸ್ತನವನು, ಎಂದು ಹೇಳಿ ಕೊಳ್ಳುತ್ತಾನೆ.
೧೩ ಕ್ರಿಸ್ತನು [5]ವಿಭಾಗಿಸಲ್ಪಟ್ಟಿದ್ದಾನೋ? ಪೌಲನು ನಿಮಗೋಸ್ಕರ ಶಿಲುಬೆಗೆ ಹಾಕಲ್ಪಟ್ಟನೋ? ಇಲ್ಲವೆ
೧೪ [6]ಪೌಲನ ಹೆಸರಿನಲ್ಲಿ ಸ್ನಾನ ಹೊಂದಿದಿರೋ? ನನ್ನ ಸ್ವಂತ ಹೆಸರಿನಲ್ಲಿ ಸ್ನಾನ ಕೊಟ್ಟೆನೆಂದು ಯಾರಾದರೂ
೧೫ ಹೇಳದ ಹಾಗೆ, ಕ್ರಿಸ್ಪನಿಗೂ ಗಾಯನಿಗೂ ಹೊರ್ತಾಗಿ, ಮತ್ತ್ಯಾರಿಗೂ ಸ್ನಾನ ಕೊಡದದರಿಂದ ದೇವ
೧೬ ರನ್ನು ಸ್ತುತಿಸುತ್ತೇನೆ. ಇದಲ್ಲದೆ ಸ್ತೆಫನನ ಮನೆಯವರಿಗೆ ಸ್ನಾನ ಕೊಟ್ಟೆನು. ಇವರ ಹೊರ್ತು, [7]ಮತ್ತ್ಯಾ
ರಿಗೆ ಸ್ನಾನ ಕೊಟ್ಟೆನೋ, ನಾನರಿಯೆ.
೧೭ ಯಾಕಂದರೆ [8]ಸ್ನಾನ ಕೊಡುವದಕ್ಕಲ್ಲ, ಸುವಾರ್ತೆ ಪ್ರಸಂಗಿಸುವದಕ್ಕೆ ಕ್ರಿಸ್ತನು ನನ್ನನ್ನು ಕಳುಹಿಸಿದನು;
೧೮ ಆದರೆ ಕ್ರಿಸ್ತನ ಶಿಲುಬೆ ವ್ಯರ್ಥವಾಗದ ಹಾಗೆ, [9]ವಾಕ್ಯದ ಜ್ಞಾನದಿಂದಲ್ಲ. ಯಾಕಂದರೆ, [10]ಶಿಲುಬೆಯ
ವಾಕ್ಯವು ನಾಶವಾಗುವವರಿಗೆ ಹುಚ್ಚುತನವಾಗಿದೆ, ಆದರೆ ರಕ್ಷಿಸಲ್ಪಡುವ ನಮಗೆ ದೇವರ ಬಲವಾಗಿದೆ.

1. ಕ್ಲೋವೆ ಯಾರೆಂದೂ, ಎಫೆಸದಲ್ಲಿದ್ದ ಪೌಲನಿಗೆ ಕೊರಿಂಥ ಸಭೆಯ ಸ್ಥಿತಿಯನ್ನು ತಿಳಿಸಿದ ಅವಳ ಮನೆಯವರು ಯಾರೆಂದೂ, ತಿಳಿಯಲಿಲ್ಲ. ಅವರಲ್ಲಿದ್ದ ವಾಗ್ವಾದಗಳು ಕ್ಲೋವೆಯವರಿಂದ ಪೌಲನಿಗೆ ತಿಳಿಸಲ್ಪಟ್ಟವು. ವಾಗ್ವಾದಗಳಿರುವಲ್ಲಿ ಭೇದಗಳು ಸಹ ಇರುವವು.

2. ಕೊರಿಂಥದ ಸಭೆಯಲ್ಲಿ ಒಬ್ಬೊಬ್ಬನು ಒಂದೊಂದು ಕಕ್ಷಿಗೆ ಶೇರಿದ್ದನು. ಒಬ್ಬನು ಸಭೆಯ ಸ್ಥಾಪಕನಾದ ಪೌಲನಿಗೆ ಶೇರಿದವನೆಂದೂ, ಇನ್ನೊಬ್ಬನು ಚಾತುರ್ಯಪ್ರಸಂಗಿಯಾದ ಅಪೊಲ್ಲೋಸನಿಗೆ ಶೇರಿದವನೆಂದೂ, ಹಲವರು ಹಲವು ಕಕ್ಷಿಗಳಿಗೆ ಶೇರಿದವರೆಂದೂ ಹೆಚ್ಚಳ ಪಟ್ಟರು. ಹೆಚ್ಚಳವೂ ಭೇದವೂ ಉಳ್ಳ ಗುಣವು ದೊಡ್ಡ ತಪ್ಪು.

3. ಪರಿಛೇದನೆಯವರಿಗೆ ಅಪೊಸ್ತಲನಾದ ಪೇತ್ರನ ಕಕ್ಷಿಗಾರರಾದ ಯೆಹೂದ್ಯರು, ಅವನಿಗೆ ಇದ್ದ ಅರಮೆಯ ಭಾಷೆಯ ಹೆಸರಾದ ಕೇಫ ಎಂಬ ಹೆಸರನ್ನು ಇಟ್ಟು ಕೊಂಡರು.

4. ಒಬ್ಬೊಬ್ಬ ಉತ್ತಮ ಕ್ರೈಸ್ತನು ನಾನು ಕ್ರಿಸ್ತನವನು ಎಂದು ಹೇಳ ತಕ್ಕದ್ದು. ಆದರೂ ಈ ಕಕ್ಷಿಗಾರರು ಬೇರೆ ಕ್ರೈಸ್ತರಿಗಿಲ್ಲದ ಘನವು ತಮಗುಂಟೆಂದು ಹೆಚ್ಚಳ ಪಟ್ಟರು. (೨ಕೊರಿ. ೧೦. ೭.) ಸಮಸ್ತ ಹೆಸರುಗಳಿಗಿಂತ ಅತಿ ಶ್ರೇಷ್ಠ ಹೆಸರಾದ ಆ ಪರಿಶುದ್ಧ ಹೆಸರು ಒಂದು ಕಕ್ಷಿಯವರಿಗೆ ಮಾತ್ರ ಸಲ್ಲದು.

5. ಸಭೆಗೆ ಶಿರಸ್ಸಾಗಿರುವ ಕ್ರಿಸ್ತನು ವಿಭಾಗಿಸಲ್ಪಟ್ಟಿದ್ದಾನೋ? ಆದರೆ ನಿಮ್ಮ ವಾಗ್ವಾದಗಳಿಂದ ಕ್ರಿಸ್ತನು ವಿಭಾಗಿಸಲ್ಪಟ್ಟ ಹಾಗಾಯಿತಲ್ಲವೋ? ಎಂಬುವದು ಈ ಪ್ರಶ್ನೆಯ ಅಭಿಪ್ರಾಯವು. ಶಿರಸ್ಸಿನಲ್ಲಿ ವಿಭಾಗಗಳಿಲ್ಲದೆ ಇರುವ ಪ್ರಕಾರ, ಶರೀರದಲ್ಲಿಯೂ ವಿಭಾಗಗಳಿಲ್ಲದೆ ಇರ ತಕ್ಕದ್ದು ನ್ಯಾಯವು.

6. ಪೌಲನ ಸಂಗಡ ಐಕ್ಯವಾದವರಾಗಿಯೂ, ಅವನ ಅನುಸರಣೆಯವರಾಗಿಯೂ ಸ್ನಾನ ಹೊಂದಿದಿರಾ? ಎಂಬುವದು ಈ ಪ್ರಶ್ನೆಯ ಅಭಿಪ್ರಾಯವು. (ರೋಮಾ. ೬. ೩. ಮತ್ತಾ. ೨೮. ೧೯. ವಚನಗಳ ವ್ಯಾಖ್ಯಾನಗಳನ್ನು ನೋಡ ಬೇಕು.) ಪೌಲನು ನಿಮಗೋಸ್ಕರ ಶಿಲುಬೆಗೆ ಹಾಕಲ್ಪಡಲಿಲ್ಲ ಎಂಬುವದೂ, ಅವನ ಹೆಸರಿನಲ್ಲಿ ನೀವು ಸ್ನಾನ ಹೊಂದಲಿಲ್ಲವೆಂಬುವದೂ ನಿಶ್ಚಯವಾದರೆ, ನೀವು ಆತನ ಕಕ್ಷಿಗಾರರೆಂದು ಹೇಳುವದು ದೊಡ್ಡ ತಪ್ಪು.

7. ಪೌಲನು ಕೊರಿಂಥದ ಸಭೆಯಲ್ಲಿ ಕೆಲವರಿಗೆ ಮಾತ್ರ ಸ್ನಾನ ಕೊಟ್ಟಿದ್ದನು. ಸಭೆಮನೇ ಯಜಮಾನನಾದ ಕ್ರಿಸ್ಪನಿಗೂ, (ಅಪೊ. ಕ್ರಿ. ೧೮. ೮.) ತನ್ನ ಮನೆಯಲ್ಲಿ ಅವನನ್ನು ಅಂಗೀಕರಿಸಿದ ಗಾಯನಿಗೂ (ರೋಮಾ. ೧೬. ೨೩.) ಸ್ನಾನ ಕೊಟ್ಟದ್ದು ಅವನಿಗೆ ಜ್ಞಾಪಕವಿತ್ತು. ಸ್ತೆಫನನ ಮನೆಯವರಿಗೆ ಸ್ನಾನ ಕೊಟ್ಟದ್ದು, ಅವನು ಆಗ ಪೌಲನ ಸಂಗಡ ಇದ್ದದರಿಂದಾಗಲಿ (೧೬. ೧೭.) ಅವನಿಗೆ ಸಂಪ್ರತಿಯವನಾಗಿದ್ದ ಬೇರೊಬ್ಬನಿಂದಾಗಲಿ ಅವನಿಗೆ ಜ್ಞಾಪಕ ಬಂದಿರ ಬಹುದು. ಇದು ಅಷ್ಟು ಮುಖ್ಯ ವಿಷಯವಲ್ಲದ್ದರಿಂದ ಅವನು ಮತ್ತ್ಯಾರಿಗಾದರೂ ಸ್ನಾನ ಕೊಟ್ಟದ್ದು ಜ್ಞಾಪಕವಿಲ್ಲದಿರುವದು ದೊಡ್ಡ ಕಾರ್ಯವಲ್ಲ.

8. ಸ್ನಾನ ಕೊಡುವದಲ್ಲ, ಪ್ರಸಂಗಿಸುವದೇ ಪೌಲನ ಮುಖ್ಯ ಕೆಲಸವು. ತಮ್ಮ ಕರ್ತನ ಹಾಗೆ (ಯೋಹಾ. ೪. ೨.) ಪೌಲನೂ ಪೇತ್ರನೂ (ಅಪೊ. ಕ್ರಿ. ೧೦. ೪೮.) ಸ್ನಾನ ಕೊಡುವ ಕೆಲಸವನ್ನು ಬೇರೊಬ್ಬರು ಮಾಡುವ ಹಾಗೆ ಒಪ್ಪಿಸಿದರೆಂದು ತೋರುತ್ತದೆ.

9. ಯೆಹೂದ್ಯರಲ್ಲಿದ್ದ ಶಾಸ್ತ್ರಿಗಳ ಹಾಗೆಯೂ, ಗ್ರೇಕರಲ್ಲಿದ್ದ ತರ್ಕಶಾಸ್ತ್ರಿಗಳ ಹಾಗೆಯೂ, ಪೌಲನು ಚಾತುರ್ಯವಾಗಿ ಪ್ರಸಂಗಿಸುವದರಿಂದ, ಶಿಲುಬೆಯ ಬೋಧನೆಯಾದ ಸುವಾರ್ತೆಯ ಸತ್ಯವು ಜನರೊಳಗೆ ನಿಷ್ಫಲವಾಗುವಂತೆ ಮಾಡಲಿಲ್ಲ. ಅವನು ಪ್ರಸಂಗಿಸಿದ ಅರ್ಥವನ್ನೂ ವಿಧವನ್ನೂ ಹೇಳಿದ್ದರಲ್ಲಿ ಅದರ ಮುಖ್ಯ ವಿವರಗಳನ್ನು ಹೇಳಿ ತೋರಿಸುತ್ತಾನೆ. (೧. ೧೮—೨. ೧೪.) ಮತ್ತು ಇವುಗಳನ್ನು ಅವನು ತನ್ನ ಅಪೊಸ್ತಲ ಊಳಿಗವನ್ನು ಕುರಿತು ಉಂಟಾದ ಆಕ್ಷೇಪಣೆಗೆ ಸಮಾಧಾನವಾಗಿ ಹೇಳಿರುತ್ತಾನೆ. (೨ಕೊರಿ. ೧೦. ೧೦.)

10. ಶಿಲುಬೆಯ ವಾಕ್ಯವು ಅಂದರೆ, ಪಾಪನಿವಾರಣಬಲಿಯಾಗಿ, ಶಿಲುಬೆಯ ಮೇಲೆ ಪ್ರಾಣತ್ಯಾಗ ಮಾಡಿದ ಕ್ರಿಸ್ತನನ್ನು ಕುರಿತ ಬೋಧನೆಯನ್ನು ಸೂಚಿಸುತ್ತದೆ. ವಾಕ್ಚಾತುರ್ಯವಿಲ್ಲದೆ ಇದನ್ನು ಬೋಧಿಸುವದು ಅನೇಕರಿಗೆ ಹುಚ್ಚುತನವಾಗಿ ಕಾಣುತ್ತದೆ. ಯಥಾಸ್ಥಿತಿಯಾಗಿ ಅದನ್ನು ಕುರಿತು ಯೋಚಿಸಿದರೆ, ಅದು ದೇವರ ಬಲವುಳ್ಳದ್ದಾಗಿದೆ. (ರೋಮಾ. ೧. ೧೬.)

೧೯ ಯಾಕಂದರೆ, ಜ್ಞಾನಿಗಳ ಜ್ಞಾನವನ್ನು ನಾಶ ಮಾಡಿ, ವಿವೇಕಿಗಳ ವಿವೇಕವನ್ನು ತೆಗೆದು ಹಾಕುವೆ
೨೦ ನೆಂದು, [1]ಬರೆದದೆ. (ಯೆಶಾ. ೨೯. ೧೪.) ಜ್ಞಾನಿ ಎಲ್ಲಿ? ಶಾಸ್ತ್ರಿ ಎಲ್ಲಿ? ಈ ಲೋಕದ ತರ್ಕವಾದಿ ಎಲ್ಲಿ?
೨೧ ದೇವರು ಈ ಲೋಕದ ಜ್ಞಾನವನ್ನು ಹುಚ್ಚುತನ ಮಾಡಿದ್ಧಾನಲ್ಲವೇ? [2]ಯಾಕಂದರೆ ದೇವರ ಜ್ಞಾನದ
ಪ್ರಕಾರ ಲೋಕವು ದೇವರನ್ನು ಜ್ಞಾನದಿಂದ ಅರಿಯದೆ ಇರಲಾಗಿ, ಪ್ರಸಂಗದ ಹುಚ್ಚುತನದಿಂದ ವಿಶ್ವಾಸಿಸು
೨೨ ವವರನ್ನು ರಕ್ಷಿಸುವದು ದೇವರಿಗೆ ಒಳ್ಳೇದಾಗಿ ತೋಚಿತು. ಹ್ಯಾಗಂದರೆ, [3]ಯೆಹೂದ್ಯರು ಗುರುತನ್ನು ಕೇಳು
೨೩ ತ್ತಾರೆ, ಗ್ರೇಕರು ಜ್ಞಾನವನ್ನು ಹುಡುಕುತ್ತಾರೆ; ಆದರೆ ನಾವು ಶಿಲುಬೆಗೆ ಹಾಕಲ್ಪಟ್ಟ ಕ್ರಿಸ್ತನನ್ನು ಸಾರು
೨೪ ತ್ತೇವೆ—ಯೆಹೂದ್ಯರಿಗೆ ಆಟಂಕವೂ ಗ್ರೇಕರಿಗೆ ಹುಚ್ಚುತನವೂ; ಆದರೆ ಕರೆಯಲ್ಪಟ್ಟವರಾದ ಯೆಹೂದ್ಯರಿಗೂ
೨೫ ಗ್ರೇಕರಿಗೂ [4]ದೇವರ ಬಲವೂ ದೇವರ ಜ್ಞಾನವೂ ಆಗಿರುವ ಕ್ರಿಸ್ತನನ್ನೇ. ಯಾಕಂದರೆ ದೇವರ ಹುಚ್ಚಾದದ್ದು
ಮನುಷ್ಯರಿಗಿಂತ ಜ್ಞಾನವುಳ್ಳದ್ದಾಗಿದೆ, ಮತ್ತು ದೇವರ ಬಲಹೀನವಾದದ್ದು ಮನುಷ್ಯರಿಗಿಂತ ಶಕ್ತವಾದದ್ದಾಗಿದೆ.
೨೬ ಹ್ಯಾಗಂದರೆ, ಸಹೋದರರೇ, ನಿಮ್ಮ ಕರೆಯುವಿಕೆಯನ್ನು ನೋಡಿರಿ. ಏನಂದರೆ, ಯಾವ ಮಾಂಸವಾ
ದರೂ ಅವನ ಸಮ್ಮುಖದಲ್ಲಿ ಹೆಚ್ಚಳ ಪಡದ ಹಾಗೆ, ಮಾಂಸದ ಪ್ರಕಾರ ಜ್ಞಾನಿಗಳು ಅನೇಕರಿಲ್ಲ, ಬಲವುಳ್ಳ
೨೭ ವರು ಅನೇಕರಿಲ್ಲ, ಕುಲೀನರು ಅನೇಕರಿಲ್ಲ. ಆದರೆ ಜ್ಞಾನಿಗಳನ್ನು ನಾಚಿಕೆ ಪಡಿಸುವ ಹಾಗೆ, ಲೋಕದ
೨೮ ಹುಚ್ಚಾದವುಗಳನ್ನು ದೇವರು ಆದು ಕೊಂಡಿದ್ಧಾನೆ; ಮತ್ತು ಶಕ್ತವಾದವುಗಳನ್ನು ನಾಚಿಕೆ ಪಡಿಸುವ
೨೯ ಹಾಗೆ, ಲೋಕದ ಬಲಹೀನವಾದವುಗಳನ್ನು ದೇವರು ಆದು ಕೊಂಡಿದ್ಧಾನೆ; ಮತ್ತು ಇರುವವುಗಳನ್ನು
ಹೀನ ಮಾಡುವ ಹಾಗೆ, ಲೋಕದ ಕುಲಹೀನವಾದವುಗಳನ್ನೂ, ಅಸಡ್ಡೆ ಮಾಡಲ್ಪಟ್ಟವುಗಳನ್ನೂ, [5]ಇಲ್ಲದ
೩೦ ವುಗಳನ್ನೂ, ದೇವರು ಆದು ಕೊಂಡಿದ್ಧಾನೆ. ಆದರೆ [6]ಅವನಿಂದ ನೀವು ಕ್ರಿಸ್ತ ಯೇಸುವಿನಲ್ಲಿ ಇದ್ಧೀರಿ.
ಇವನು ದೇವರಿಂದ ನಮಗೆ ಜ್ಞಾನವಾಗಿಯೂ, ನೀತಿಯಾಗಿಯೂ, ಪರಿಶುದ್ಧವಾಗಿಯೂ, ವಿಮೋಚನೆ
೩೧ ಯಾಗಿಯೂ, ಮಾಡಲ್ಪಟ್ಟಿದ್ಧಾನೆ. ಆದದರಿಂದ, [7]ಬರೆದಿರುವ ಪ್ರಕಾರ, ಹೆಚ್ಚಳ ಪಡುವವನು ಕರ್ತನಲ್ಲಿ
ಹೆಚ್ಚಳ ಪಡಲಿ. (ಯೆರೆಮಿಾ. ೯. ೨೪.)

1. ಲೋಕದ ಜ್ಞಾನವನ್ನು ವ್ಯರ್ಥವಾಗ ಮಾಡುವೆನೆಂದು ದೇವರು ಹೇಳಿದ್ದು ಪೌಲನ ಈ ಅಭಿಪ್ರಾಯಕ್ಕೆ ಒಂದು ಆಧಾರ ವಾಗಿತ್ತು. (ಯೆಶಾ. ೨೯. ೧೪; ೩೩. ೧೮.) ಲೋಕದ ಜ್ಞಾನವು ವ್ಯರ್ಥವಾಗಿ ಹೋದದರಿಂದ ದೇವರ ಉನ್ನತ ಜ್ಞಾನವು ಲೋಕಕ್ಕೆ ತಿಳಿಯದೆ ಹೋಯಿತು.

2. ದೇವರನ್ನು ಕುರಿತು ತಿಳಿದು ಕೊಳ್ಳುವದಕ್ಕೆ ಮನುಷ್ಯರಿಗೆ ಸಾಕಾದ ಜ್ಞಾನವಿಲ್ಲವೆಂದೂ, ಸರ್ವಜ್ಞನಾದ ದೇವರು ತನ್ನ ಜ್ಞಾನವನ್ನು ಪ್ರಕಟ ಮಾಡಿದ ವಿಥದಲ್ಲಿ ಆತನನ್ನು ತಿಳಿದು ಕೊಳ್ಳುವದಕ್ಕೆ ತಕ್ಕ ಮನುಷ್ಯನ ಜ್ಞಾನವು ವ್ಯರ್ಥವಾಯಿತೆಂದೂ ಅರ್ಥ ಮಾಡ ಬಹುದು. ಕಾರ್ಯ ಹೀಗಿರುವದರಿಂದ ಲೋಕಕ್ಕೆ ಹುಚ್ಚುತನದ ಹಾಗೆ ತೋರಿದ ಶಿಲುಬೆಯ ಪ್ರಸಂಗದಿಂದ ಮನುಷ್ಯರನ್ನು ರಕ್ಷಿಸುವದಕ್ಕೆ ದೇವರು ಚಿತ್ತವುಳ್ಳವನಾದನು. (ಅಪೊ. ಕ್ರಿ. ೧೭. ೨೩—೨೯. ರೋಮಾ. ೧. ೧೯—೨೩.)

3. ಗುರುತನ್ನು ಎಂಬುವದಕ್ಕೆ ಗುರುತುಗಳು ಅನ್ನ ಬಹುದು. ಆಕಾಶದಿಂದ ಗುರುತುಗಳನ್ನು ತೋರಿಸ ಬೇಕೆಂದು ಯೆಹೂದ್ಯರು ಯೇಸುವನ್ನು ಕೇಳಿದರು. (ಮತ್ತಾ. ೧೨. ೩೮. ವಚನದ ವ್ಯಾಖ್ಯಾನ ನೋಡ ಬೇಕು.)

4. ಲೋಕರಕ್ಷಕನಾದ ಕ್ರಿಸ್ತನು ಶಿಲುಬೆಯ ಮೇಲೆ ಪ್ರಾಣತ್ಯಾಗ ಮಾಡಿ ರಕ್ಷಣ್ಯವನ್ನು ಸಂಪಾದಿಸಿದ್ದರಲ್ಲಿ ದೇವರ ಜ್ಞಾನವೂ ದೇವರ ಬಲವೂ ಪ್ರಕಟವಾಗುತ್ತದೆ. ಇದು ದೇವರ ಜ್ಞಾನಕ್ಕೆ ಮಾತ್ರ ತೋಚ ತಕ್ಕದ್ದೂ, ದೇವರ ಬಲದಿಂದ ಮಾತ್ರ ಈಡೇರ ತಕ್ಕದ್ದೂ ಎಂಬುವದಕ್ಕೆ ಎಷ್ಟು ಮಾತ್ರ ಸಂದೇಹವಿಲ್ಲ. (ಎಫೆ. ೩. ೧೦. ರೋಮಾ. ೮. ೩.) ಈ ಜ್ಞಾನವೂ ಬಲವೂ ಕೊರಿಂಥದ ಸಭೆಯವರು ಕರೆಯಲ್ಪಟ್ಟ ವಿಥದಲಿ ಸಹ ಪ್ರಕಟವಾಗುತ್ತದೆ ಎಂದು ಪೌಲನು ಮುಂದೆ ಬರುವ ವಚನಗಳಲ್ಲಿ ಹೇಳುತ್ತಾನೆ. (೨೬—೩೧. ವ.)

5. ಲೋಕದವರು ಜ್ಞಾನಿಗಳೆಂದೂ ಅಧಿಕಾರಿಗಳೆಂದೂ ಪ್ರಭುಗಳೆಂದೂ ಎಣಿಸುವವರನ್ನು ದೇವರು ಕರೆಯದೆ, ಅವರು ಹುಚ್ಚಾದವರೆಂದೂ ಬಲಹೀನರೆಂದೂ ಹೀನವಾದವರೆಂದೂ ಅಲ್ಪರೆಂದೂ ಇಲ್ಲದವರೆಂದೂ ಎಣಿಸಿದವರನ್ನೇ ಕರೆಯುತ್ತಾನೆ. ಇಲ್ಲದವುಗಳು ಅಂದರೆ ಲೋಕದವರ ದೃಷ್ಟಿಯಲ್ಲಿ ಇಲ್ಲದವುಗಳೆಂದು ತೋರುವ ಹೀನವಾದವುಗಳನ್ನು ಕುರಿತದ್ದು. ಜ್ಞಾನವೂ ಅಂತಸ್ತೂ ಐಶ್ವರ್ಯವೂ ಲೋಕದವರಿಗೆ ದೊಡ್ಡದೇ ಹೊರ್ತು, ದೇವರ ದೃಷ್ಟಿಯಲ್ಲಿ ದೊಡ್ಡದಲ್ಲ. ಇವರಿಂದ ಎತ್ತರವಾದವರು ತಗ್ಗಾಗಿಯೂ, ತಗ್ಗಾದವರು ಮನೋರಮ್ಯವುಳ್ಳವರಾಗಿಯೂ ಇರ ತಕ್ಕದೆಂದು ತಿಳಿಯ ಬಹುದು.

6. ಭಕ್ತರನ್ನು ದೇವರು ಪರಿಶುದ್ಧಾತ್ಮನ ಕೃಪೆಯಿಂದ ಕ್ರಿಸ್ತನ ಸಂಗಡ ಜೋಡಿಸಿ, (ಯೋಹಾ. ೧೫. ೧—೧೦.) ಆತನ ಮೂಲಕವಾಗಿ ಅವರಿಗೆ ಜ್ಞಾನವನ್ನೂ ನೀತಿಯನ್ನೂ ಪರಿಶುದ್ಧತ್ವವನ್ನೂ ಬಿಡುಗಡೆಯನ್ನೂ ಅನುಗ್ರಹಿಸುತ್ತಾನೆ. ಕ್ರಿಸ್ತನೇ ಜ್ಞಾನವೂ ನೀತಿಯೂ ಪರಿಶುದ್ಧತ್ವವೂ ವಿಮೋಚನೆಯೂ ಆಗಿದ್ಧಾನೆ. ವಿಮೋಚನೆ ಅಂದರೆ, ಶರೀರವೂ ಆತ್ಮವೂ ಪಾಪದಿಂದುಂಟಾದ ಸಕಲ ಕೇಡುಗಳಿಗೂ ತೊಲಗಿ ಪೂರ್ಣ ಬಿಡುಗಡೆ ಹೊಂದುವದನ್ನು ಕುರಿತದ್ದು. (ರೋಮಾ. ೮. ೨೩. ಎಫೆ. ೧. ೧೪; ೪. ೩೦. ಇಬ್ರಿ. ೯. ೧೨.) ದೇವರ ಕೃಪೆಯಿಂದ ಕ್ರಿಸ್ತನ ಸಂಗಡ ಐಕ್ಯವಾದವರಿಗೆ ಮಾತ್ರ ಈ ಮೇಲಾದ ಭಾಗ್ಯವು ದೊರಕುವದು.

7. ಯೆರೆಮಿಾ. ೯. ೨೩, ೨೪ನೇ ವಚನಗಳ ಅರ್ಥವನ್ನು ಇದರಲ್ಲಿ ಕ್ಲುಪ್ತವಾಗಿ ತೋರಿಸಿ ಇದೆ. ಕ್ರಿಸ್ತನ ಸಂಗಡ ಐಕ್ಯವಾಗು



2. ಮತ್ತು ನಾನು, [1]ಸಹೋದರರೇ, ನಿಮ್ಮ ಬಳಿಗೆ ಬಂದಾಗ, ಘನವಾದ ವಾಕ್ಯದಿಂದಲಾದರೂ ಜ್ಞಾನದಿಂ
೨ ದಲಾದರೂ ಅಲ್ಲ, ದೇವರ ಸಾಕ್ಷಿಯನ್ನು ನಿಮಗೆ ತಿಳಿಸುವವನಾಗಿ ಬಂದೆನು. ಯಾಕಂದರೆ ನಾನು [2]ಶಿಲು
ಬೆಗೆ ಹಾಕಲ್ಪಟ್ಟವನಾದ ಯೇಸು ಕ್ರಿಸ್ತನನ್ನೇ ಹೊರ್ತು, ನಿಮ್ಮಲ್ಲಿ ಏನಾದರೂ ತಿಳಿಯದಿರ ನಿರ್ಣಯಿಸಿ
೩ ಕೊಂಡೆನು. ಮತ್ತು ನಾನು [3]ಬಲಹೀನತ್ವದಲ್ಲಿಯೂ, ಭಯದಲ್ಲಿಯೂ, ಬಹಳ ನಡುಗುವಿಕೆಯಲ್ಲಿಯೂ,
೪ ನಿಮ್ಮ ಹತ್ತರ ಇದ್ದೆನು. ಇದಲ್ಲದೆ ನಿಮ್ಮ ವಿಶ್ವಾಸವು ಮನುಷ್ಯಜ್ಞಾನದಲ್ಲಿ ಅಲ್ಲ, ದೇವರ ಬಲದಲ್ಲಿ ಇರುವ
೫ ಹಾಗೆ, ನನ್ನ ವಾಕ್ಯವೂ ನನ್ನ ಪ್ರಸಂಗವೂ ಮನುಷ್ಯರ ಜ್ಞಾನದ [4]ಇಚ್ಚಕದ ವಾಕ್ಯಗಳಲ್ಲಿ ಅಲ್ಲ, ಆತ್ಮ
ಬಲಗಳ [5]ದೃಷ್ಟಾಂತದಲ್ಲಿ ಇದ್ದವು.
೬ [6]ಆದರೆ ಸಂಪೂರ್ಣರಲ್ಲಿ ಜ್ಞಾನವನ್ನು ಹೇಳುತ್ತೇವೆ. ಈ ಲೋಕದ ಜ್ಞಾನವನ್ನಾದರೂ, ಈ ಲೋಕದ
೭ ನಾಶವಾಗುವ [7]ಪ್ರಭುಗಳ ಜ್ಞಾನವನ್ನಾದರೂ ಅಲ್ಲ, ಮರೆಯಾಗಿದ್ದಂಥ, ದೇವರು ಯುಗಗಳ ಮುಂಚೆ
೮ ನಮ್ಮ ಮಹಿಮೆಗೆ ಮುನ್ನೇಮಿಸಿದಂಥ, [8]ಮರ್ಮದಲ್ಲಿರುವ ದೇವರ ಜ್ಞಾನವನ್ನೇ ಹೇಳುತ್ತೇವೆ. ಇದನ್ನು
ಈ ಲೋಕದ ಪ್ರಭುಗಳಲ್ಲಿ ಯಾವನಾದರೂ ಅರಿಯಲಿಲ್ಲ; ಯಾಕಂದರೆ ಅವರು ಅರಿತಿದ್ದರೆ, ಮಹಿಮೆಯ
೯ ಕರ್ತನನ್ನು ಶಿಲುಬೆಗೆ ಹಾಕುತ್ತಿದ್ದಿಲ್ಲ. ಆದರೆ, [9]ಬರೆದಿರುವ ಪ್ರಕಾರ, ದೇವರು ತನ್ನನ್ನು ಪ್ರೀತಿ ಮಾಡುವವರಿಗೆ
ಸಿದ್ಧ ಮಾಡಿದವುಗಳನ್ನು ಕಣ್ಣು ನೋಡಲಿಲ್ಲ, ಕಿವಿ ಕೇಳಲಿಲ್ಲ, ಅವು ಮನುಷ್ಯನ ಹೃದಯದಲ್ಲಿ ಶೇರಲಿಲ್ಲ;
೧೦ (ಯೆಶಾ. ೫೨. ೧೫; ೬೪. ೪; ೬೫. ೧೭.) ಆದರೆ ದೇವರು ಅವುಗಳನ್ನು ತನ್ನ ಆತ್ಮದಿಂದ ನಮಗೆ
ಪ್ರಕಟ ಮಾಡಿದ್ಧಾನೆ. ಯಾಕಂದರೆ ಆತ್ಮವು ಎಲ್ಲವುಗಳನ್ನು ಶೋಧಿಸುತ್ತದೆ, ದೇವರ ಅಗಾಧಗಳನ್ನು ಸಹ.

ವದೂ, ಆತನ ಐಕ್ಯದಿಂದ ಉಂಟಾಗುವ ಶ್ರೇಷ್ಠ ಮೇಲುಗಳೂ, ದೇವರ ಉಚಿತವಾದ ಕೃಪೆಯಿಂದ ದೊರಕುವದರಿಂದ ಆತನಲ್ಲಿ ಹೆಚ್ಚಳ ಪಡ ಬೇಕೇ ಹೊರ್ತು, ತನ್ನನ್ನು ಕುರಿತಾದರೂ ಬೇರೊಬ್ಬನನ್ನು ಕುರಿತಾದರೂ ಹೆಚ್ಚಳ ಪಡ ಕೂಡದು.

1. ೧. ೧೭ನೇ ವಚನದಲ್ಲಿ ಹೇಳಿದ್ದ ಸಂಗತಿಯನ್ನು ಪೌಲನು ತಿರಿಗಿ ಹೇಳುತ್ತಾನೆ. ಚಾತುರ್ಯ ಪ್ರಸಂಗಕ್ಕೆ ತಕ್ಕ ಘನವಾದ ವಾಕ್ಯದಿಂದಲಾದರೂ, ಶಾಸ್ತ್ರಿಗಳಿಗೆ ತಕ್ಕ ಜ್ಞಾನದಿಂದಲಾದರೂ ಅವನು ಸುವಾರ್ತೆಯನ್ನು ಪ್ರಸಂಗಿಸದೆ, ದೈವಲಕ್ಷಣಕ್ಕೆ ಅನುಸಾರವಾದ ಯಥಾರ್ಥದಿಂದಲೂ ಸುಲಭ ವಾಕ್ಯಗಳಿಂದಲೂ ಪ್ರಸಂಗಿಸ ನಿಶ್ಚಯಿಸಿ ಕೊಂಡೆನೆಂದು ಹೇಳುತ್ತಾನೆ.

2. ಯೇಸು ಕ್ರಿಸ್ತನೆಂಬುವದು ಆತನ ಸ್ವಭಾವವನ್ನೂ, ಶಿಲುಬೆಗೆ ಹಾಕಲ್ಪಟ್ಟವನೆಂಬುವದು ಆತನು ಶಿಲುಬೆಯ ಮೇಲೆ ಪ್ರಾಣ ವರ್ಪಿಸಿ ಮುಗಿಸಿದ ಪುಣ್ಯಕ್ರಿಯೆಯನ್ನೂ ಕುರಿತದ್ದು. ಪೌಲನ ಪ್ರಸಂಗದ ಮುಖ್ಯ ಅರ್ಥವು ಇದೇ.

3. ೧ನೇ ವಚನದಲ್ಲಿ ನಾನು ಎಂಬ ಶಬ್ದದ ಹಾಗೆ ಈ ವಚನದಲ್ಲಿಯೂ ನಾನು ಎಂಬ ಶಬ್ದವು ದೃಢ ವಾಕ್ಯವಾಗಿದೆ. ಪೌಲನಿಗಿದ್ದ ಬಲಹೀನತ್ವವು ಒಂದು ವೇಳೆ ಶರೀರದ ಬಲಹೀನವಾಗಿರ ಬಹುದು. (ಗಲಾ. ೪. ೧೩. ೨ ಕೊರಿ. ೧೨. ೭.) ಆದಾಗ್ಯೂ ದೇವರು ತನಗೆ ನೇಮಿಸಿದ ಊಳಿಗವನ್ನು ಸರಿಯಾಗಿ ಈಡೇರಿಸ ತಕ್ಕ ಶಕ್ತಿ ತನಗೆ ಇಲ್ಲವೆಂಬ ಗ್ರಹಿಕೆ ಅವನಿಗೆ ಉಂಟಾಗಿತ್ತೆಂದು ಇದರಿಂದ ತೋರುತ್ತದೆ. (ಅಪೊ. ಕ್ರಿ. ೧೮. ೫—೧೧. ವಚನಗಳ ವ್ಯಾಖ್ಯಾನದಲ್ಲಿ ನೋಡ ಬೇಕು.)

4. ಆ ಕಾಲದಲ್ಲಿ ಚಾತುರ್ಯವುಳ್ಳ ಇಚ್ಚಕದ ವಾಕ್ಯಕ್ಕೆ ಕೊರಿಂಥ್ಯರ ವಾಕ್ಯವೆಂದು ಹೇಳುವರು. ಅಂಥಾ ನಯವಚನಗಳಿಂದ ಪೌಲನು ಸುವಾರ್ತೆಯನ್ನು ಪ್ರಸಂಗಿಸಲಿಲ್ಲ.

5. ಅಪೊಸ್ತಲರು ವಾಕ್ಚಾತುರ್ಯವಿಲ್ಲದೆ ಯಥಾರ್ಥವಾಗಿ ಪ್ರಸಂಗಿಸಿದ ವಚನಗಳು ದಿವ್ಯ ಸತ್ಯವೆಂದು, ಕೇಳಿದವರ ಮನಸ್ಸಿನಲ್ಲಿ ಪರಿಶುದ್ಧಾತ್ಮನು ಗ್ರಹಿಸ ಮಾಡಿದನು. (೧ ಥೆಸ್ಸ. ೧. ೫.) ಆದದರಿಂದ ಆ ಸತ್ಯವನ್ನು ಅನುಸರಿಸಿದವರ ವಿಶ್ವಾಸಕ್ಕೆ ಮನುಷ್ಯರ ಜ್ಞಾನವಲ್ಲ, ದೇವರ ಬಲವೇ ಆಧಾರವಾಗಿರುತ್ತದೆ.

6. ಪೌಲನು ತಾನು ಹೇಳಿದ ವಿಷಯವನ್ನು ಬೇರೊಂದು ಬಗೆಯಾಗಿ ಹೇಳುತ್ತಾನೆ. ಕೆಲವರಿಗೆ ಹುಚ್ಚುತನವಾಗಿ ತೋರಿದ್ದು, ದೇವಭಕ್ತಿಯಲ್ಲಿ ಶೇರಿದವರಿಗೆ ದಿವ್ಯಜ್ಞಾನವಾಗಿ ತೋರುವದು. ಅಂಥವರಿಗೆ ಪೌಲನು ಅದನ್ನು ಸಂಪೂರ್ಣವಾಗಿ ಬೋಧಿಸಿದನು. (೩. ೧.)

7. ಈ ಲೋಕದ ಪ್ರಭುಗಳು ಎಂಬುವದು, ೧. ೨೬. ವಚನದಲ್ಲಿ ಹೇಳಲ್ಪಟ್ಟ ಜ್ಞಾನಿಗಳು, ಬಲವಂತರು, ಕುಲೀನರು ಮುಂತಾದವರನ್ನು ಕುರಿತದ್ದು.

8. ದೇವರ ಮರ್ಮದ ಹಾಗೆ ಅನೇಕ ಕಾಲಗಳಿಂದ ಮರೆಯಾಗಿದ್ದ ಜ್ಞಾನವನ್ನೇ ಮಾತಾಡುತ್ತೇವೆ. (ಎಫೆ. ೩. ೩—೬.) ಅದು ನಮ್ಮನ್ನು ಮಹಿಮೆಯಲ್ಲಿ ಹೆಚ್ಚಿಸುವದಾಗಿದ್ದರೂ ಅನೇಕರಿಗೆ ಪ್ರಕಟವಾಗದೆ ಇರುತ್ತದೆ. (ಅಪೊ. ಕ್ರಿ. ೩. ೧೭. ವಚನದ ವ್ಯಾಖ್ಯಾನ ನೋಡ ಬೇಕು.) ಅವರು ಹೀಗೆ ಅಜ್ಞಾನದಿಂದಲೇ ಮಹಿಮೆಯ ಕರ್ತನಾಗಿಯೂ, ಮಹಿಮೆಯನ್ನು ಕೊಡುವವನಾಗಿಯೂ ಇರುವ ಕ್ರಿಸ್ತನನ್ನು ಮಹಾ ಹೀನವಾದ ಶಿಲುಬೆಯ ಮರಣಕ್ಕೆ ಒಪ್ಪಿಸಿದರು. (ಯೋಹಾ. ೧೭. ೧—೫. ವಚನಗಳ ವ್ಯಾಖ್ಯಾನ ನೋಡ ಬೇಕು.)

9. ಇಲ್ಲಿ ಯೆಶಾ. ೫೨. ೧೫; ೬೪. ೪; ೬೫. ೧೭. ಈ ವಚನಗಳ ಅರ್ಥವನ್ನು ಹೇಳಿ ಇದೆ. ದೇವರು ತನ್ನ ಜನರಿಗೆ ದಯವಾಗಿ ಸಿದ್ಧ ಮಾಡಿರುವ ಮೇಲಾದ ಭಾಗ್ಯವನ್ನು ಯಾರೂ ತಿಳಿಯಲಾರರು. ಅದು ಅವರ ಮನಸ್ಸಿಗೆ ತೋರಲಾರದು. ದೇವರ ರಹಸ್ಯಗಳನ್ನು ತಿಳಿದಿರುವ ಪರಿಶುದ್ಧಾತ್ಮನು ಮಾತ್ರ ಅದನ್ನು ತಿಳಿಸ ಬಲ್ಲನು. (೧೦, ೧೧. ವ.) ಆ ಆತ್ಮನ ಕೃಪೆಯನ್ನೂ ಬೋಧನೆಯನ್ನೂ ಹೊಂದಿದ ಶಿಷ್ಯರು ಮಾತ್ರ ಅದನ್ನು ತಿಳುಕೊಂಡು ಮತ್ತೊಬ್ಬರಿಗೆ ತಿಳಿಸ ತಕ್ಕವರಾಗಿದ್ಧಾರೆ.

೧೧ ಹ್ಯಾಗಂದರೆ, ಮನುಷ್ಯನವುಗಳನ್ನು ಅವನಲ್ಲಿರುವ [1]ಮನುಷ್ಯಾತ್ಮವೇ ಹೊರ್ತು, ಮನುಷ್ಯರಲ್ಲಿ ಯಾವನು
ತಿಳಿಯುತ್ತಾನೆ? ಹಾಗೆಯೇ ದೇವರವುಗಳನ್ನು ದೇವಾತ್ಮವೇ ಹೊರ್ತು, ಯಾವನಾದರೂ ತಿಳಿಯನು.
೧೨ ಆದರೆ ನಾವು ದೇವರಿಂದ ನಮಗೆ [2]ದಯ ಮಾಡಲ್ಪಟ್ಟವುಗಳನ್ನು ತಿಳಿಯುವ ಹಾಗೆ, ಲೋಕದ ಆತ್ಮವ
೧೩ ನ್ನಲ್ಲ, ದೇವರಿಂದಾದ ಆತ್ಮವನ್ನು ಹೊಂದಿದ್ದೇವೆ. ಮತ್ತು ಇವುಗಳನ್ನು ಮನುಷ್ಯನ ಜ್ಞಾನವು ಬೋಧಿಸಿದ
ವಾಕ್ಯಗಳಿಂದಲ್ಲ, ಪರಿಶುದ್ಧಾತ್ಮವು ಬೋಧಿಸಿದವುಗಳಿಂದಲೇ, ಆತ್ಮದವುಗಳನ್ನು ಆತ್ಮದವುಗಳಿಗೆ [3]ಹೋಲಿಸಿ
೧೪ ಹೇಳುತ್ತೇವೆ. ಆದರೆ [4]ಪ್ರಾಣಭಾವದ ಮನುಷ್ಯನು ದೇವರ ಆತ್ಮದವುಗಳನ್ನು ಗ್ರಹಿಸನು; ಯಾಕಂದರೆ
ಅವನಿಗೆ ಹುಚ್ಚುತನವಾಗಿವೆ. ಮತ್ತು ಅವು ಆತ್ಮದ ಪ್ರಕಾರ ವಿಚಾರಿಸಲ್ಪಡುವ ಕಾರಣ, ಅವುಗಳನ್ನು ಅರಿ
೧೫ ಯಲಾರನು. ಆದರೆ ಆತ್ಮಭಾವದವನು ಎಲ್ಲಾ [5]ವಿಚಾರಿಸುತ್ತಾನೆ, ತಾನೇ ಯಾರಿಂದಲೂ ವಿಚಾರಿಸಲ್ಪಡನು.
೧೬ ಯಾಕಂದರೆ ಅವನನ್ನು ಉಪದೇಶಿಸುವ ಹಾಗೆ, ಕರ್ತನ ಮನಸ್ಸನ್ನು ಅರಿತವನ್ಯಾರು? (ಯೆಶಾ. ೪೦. ೧೩.)
ಆದರೆ ನಮಗೆ ಕ್ರಿಸ್ತನ ಮನಸ್ಸು ಉಂಟು.

ಸಭೆಯೊಳಗಿದ್ದ ಭೇದಗಳು; ಬೋಧಕೋದ್ಯೋಗದ ಘನವು.

3. ಮತ್ತು ನಾನು, ಸಹೋದರರೇ, ನಿಮಗೆ ಆತ್ಮಭಾವದವರಿಗೆಂದು ಮಾತಾಡಲಾರದೆ, [6]ಮಾಂಸಭಾವದ
೨ ವರಿಗೆಂದು, ಕ್ರಿಸ್ತನಲ್ಲಿರುವ ಎಳೆ ಕೂಸುಗಳಿಗೆಂದು ಮಾತಾಡಿದೆನು. [7]ಹಾಲು ನಿಮಗೆ ಕುಡಿಸಿದೆನು,
ಆಹಾರ ಕೊಡಲಿಲ್ಲ; ಯಾಕಂದರೆ ಆಗ ನಿಮಗೆ ಆಗದೆ ಇತ್ತು; ಮತ್ತು ಈಗ ಇನ್ನೂ ಆಗದು;
೩ ಯಾಕಂದರೆ ಇನ್ನು ಮಾಂಸಭಾವದವರಾಗಿದ್ದೀರಿ. ಹ್ಯಾಗಂದರೆ, ನಿಮ್ಮಲ್ಲಿ ಹೊಟ್ಟೆಕಿಚ್ಚೂ, ವಾಗ್ವಾದವೂ,

1. ಮನುಷ್ಯನಲ್ಲಿರುವ ಅವನ ಆತ್ಮವೇ ಹೊರ್ತು ಮನುಷ್ಯನಲ್ಲಿ ಒಬ್ಬನಾದರೂ ಮನುಷ್ಯನವುಗಳನ್ನು ತಿಳಿಯ ಕೂಡದ ಪ್ರಕಾರ, ದೇವರ ಆತ್ಮನೇ ಹೊರ್ತು ಬೇರೆ ಯಾರೂ ದೇವರ ರಹಸ್ಯಗಳನ್ನು ತಿಳಿಯ ಕೂಡದು. ಒಬ್ಬನ ಆಲೋಚನೆ ಮತ್ತೊಬ್ಬನು ತಿಳಿಯ ಕೂಡದಾದರೆ, ದೇವರ ಆಲೋಚನೆ ಯಾರಿಗೆ ತಿಳಿಯುವದು? ಅವುಗಳನ್ನು ತಿಳಿಯ ತಕ್ಕವನು ದೇವರಾಗಿರ ಬೇಕು. (ಯೋಬ. ೧೧. ೭. ಯೆಶಾ. ೪೦. ೨೮.) ದೇವರ ಅಗಾಧವಾದವುಗಳನ್ನು ತಿಳಿದಿರುವ ಪರಿಶುದ್ಧಾತ್ಮನು ದೇವರೆಂದು ಇದರಿಂದ ತಿಳಿಯ ಬಹುದು.

2. ದೇವರಿಂದ ದಯ ಮಾಡಲ್ಪಟ್ಟವುಗಳು ಜ್ಞಾನವೂ ಮಹಿಮೆಯೂ ಎಂಬ ಬೊಕ್ಕಸಗಳೇ. (೯. ವ.)

3. ಆತ್ಮನಿಂದ ಬಂದ ಸತ್ಯ ಬೋಧನೆಗಳನ್ನು ಆತ್ಮನಿಗೆ ತಕ್ಕ ಮಾತುಗಳ ಸಂಗಡ ಸಮ್ಮಂಧ ಪಡಿಸಿ ನೋಡ ಬೇಕು. ಅಪೊಸ್ತಲರು ಹೇಳಿದ ಮಾತುಗಳು ಅವರು ಬೋಧಿಸಿದವುಗಳು ಮನುಷ್ಯ ಜ್ಞಾನವಾದವುಗಳಾಗಿರದೆ ದೇವರ ಆತ್ಮನವುಗಳಾಗಿದ್ದವು.

4. ದೇವಾತ್ಮನಿಂದ ಪುನರ್ಜನ್ಮವಾಗದೆ ಇರುವ ಸ್ವಾಭಾವಿಕ ಮನುಷ್ಯನು ತನ್ನ ದುಃಸ್ವಭಾವದ ಹಾಗೆ ನಡಿಯುವನು. ಅಂಥವನಿಗೂ ಪರಿಶುದ್ಧಾತ್ಮನಿಂದ ಆತ್ಮದ ಜೀವ ಹೊಂದಿದ ಆತ್ಮಭಾವದ ಮನುಷ್ಯನಿಗೂ, ಬೆಳಕಿಗೂ ಕತ್ತಲೆಗೂ ಇರುವ ಪ್ರಕಾರ, ದೊಡ್ಡ ವ್ಯತ್ಯಾಸವಿರುತ್ತದೆ. ಸ್ವಾಭಾವಿಕ ಮನುಷ್ಯನು ಆತ್ಮದವುಗಳನ್ನು ಲೋಕಭಾವದ ಪ್ರಕಾರ ವಿಚಾರಿಸಿ ನಿರ್ಣಯಿಸುವದರಿಂದ ಅವು ಅವನಿಗೆ ಹುಚ್ಚುತನವಾಗಿ ತೋರುವವು. ಅವುಗಳ ಸರಿಯಾದ ಸ್ವಭಾವವೂ ಮಹಿಮೆಯೂ ಅವನಿಗೆ ಸ್ಪಷ್ಟವಾಗಿ ತಿಳಿಯಲಾರದು.

5. ಪರಿಶುದ್ಧಾತ್ಮನ ಕೃಪೆ ಹೊಂದದವನು ತನ್ನ ಆತ್ಮರಕ್ಷಣೆಗೆ ತಕ್ಕ ವಿಶೇಷಗಳನ್ನು ಸರಿಯಾಗಿ ನಿಧಾನಿಸಿ ತಿಳುಕೊಳ್ಳಲಾರನು. ಅಂಥವನು ಕ್ರಿಸ್ತನ ದಾಸರ ಕಾರ್ಯಗಳನ್ನು ತಕ್ಕ ಹಾಗೆ ನಿಧಾನಿಸಿ ಗ್ರಹಿಸಲಾರನು. ಕ್ರಿಸ್ತನ ಆತ್ಮನನ್ನು ಹೊಂದಿದವರು ಅದನ್ನು ಹೊಂದಿದ ಬೇರೊಬ್ಬರ ಕಾರ್ಯಗಳನ್ನು ತಕ್ಕ ಹಾಗೆ ನಿಧಾನಿಸಿ ತಿಳಿಯ ತಕ್ಕವರಾಗಿದ್ದಾರೆ. (ಯೆಶಾ. ೪೦. ೧೩.) ಕ್ರಿಸ್ತನ ಮನಸ್ಸನ್ನು ಒಬ್ಬನೂ ತಿಳಿಯ ಕೂಡದ ಪ್ರಕಾರ, ಆತನ ಮನಸ್ಸು ಹೊಂದಿದ ಆತನ ದಾಸರನ್ನು ಸಹ ಸ್ವಾಭಾವಿಕ ಮನುಷ್ಯನು ತಿಳಿಯಲಾರನು.

6. (ರೋಮಾ. ೭. ೧೪. ವಚನದ ವ್ಯಾಖ್ಯಾನ ನೋಡ ಬೇಕು.) ಪೌಲನು ಕೊರಿಂಥದಲ್ಲಿದ್ದಾಗ ಕ್ರಿಸ್ತಮಾರ್ಗದ ತಿಳುವಿಕೆಯಲ್ಲಿಯೂ ಆತ್ಮದ ವಿಷಯಗಳಲ್ಲಿಯೂ ಸಭೆಯವರು ಕೂಸುಗಳ ಹಾಗೆಯೂ, ಆತ್ಮನ ಕೃಪೆಯನ್ನು ಹೊಂದದೆ ಇರುವ ಮಾಂಸಭಾವದವರ ಹಾಗೆಯೂ ಇದ್ದದರಿಂದ, ಅವರ ಸ್ಥಿತಿಗೆ ತಕ್ಕದ್ದಾಗಿ ಅವರಿಗೆ ಸುವಾರ್ತೆಯ ಸತ್ಯಗಳನ್ನು ಬೋಧಿಸಿದನು. ಆದರೆ ಅವನು ಮನುಷ್ಯಜ್ಞಾನದ ಪ್ರಕಾರ ಬೋಧಿಸದೆ, ದೇವರ ಜ್ಞಾನವನ್ನು ಸಹ ಪೂರ್ಣವಾಗಿ ತಿಳಿಸಲಿಲ್ಲ. ಅದನ್ನು ಗ್ರಹಿಸ ಶಕ್ತಿ ಇಲ್ಲದವರಾಗಿದ್ದದ್ದೇ ಅದಕ್ಕೆ ಕಾರಣವು. (೨ನೇ ೩ನೇ ವಚನಗಳು. ಇಬ್ರಿ. ೫. ೧೧—೧೪.)

7. ಕೂಸುಗಳಿಗೆ ಘಟ್ಟಿಯಾದ ಆಹಾರವಲ್ಲ, ಹಾಲು ತಕ್ಕದ್ದಾಗಿರುವ ಪ್ರಕಾರ, ಜ್ಞಾನದಲ್ಲಿ ಬೆಳಿಯದೆ ಮಕ್ಕಳ ಹಾಗಿದ್ದ ಕೊರಿಂಥ್ಯರಿಗೆ ಕ್ರಿಸ್ತಮಾರ್ಗದ ಆಳವಾದ ಬೋಧನೆಗಳಲ್ಲ, ಎಲ್ಲರಿಗೂ ತಿಳಿಯ ತಕ್ಕ ಬೋಧನೆಗಳು ಅವರಿಗೆ ತಕ್ಕವುಗಳಾಗಿದ್ದವು. ಅವರು ತಿಳುವಳಿಕೆ ಮುಂತಾದ ವರಗಳಲ್ಲಿ ಶೇರಿದವರಾಗಿದ್ದರೂ (೧. ೪—೮.) ಪ್ರೀತಿಯಲ್ಲಿ ಬಹಳ ಕೊರತೆಯುಳ್ಳವರಾಗಿದ್ದರು. (೧೩. ೧—೩.)



ಭೇದಗಳೂ ಉಂಟಾಗಿರಲಾಗಿ, ಮಾಂಸಭಾವದವರಾಗಿದ್ದೀರಲ್ಲವೋ? [1]ಮನುಷ್ಯರೀತಿಯಾಗಿ ನಡಿಯುತ್ತೀ
೪ ರಲ್ಲವೋ? ಹ್ಯಾಗಂದರೆ, ಒಬ್ಬನು, ನಾನು ಪೌಲನವನು, ಬೇರೊಬ್ಬನು, ನಾನು [2]ಅಪೊಲ್ಲೋಸನವನು
ಎಂದು ಹೇಳುವಾಗ, ಮಾಂಸಭಾವದವರಾಗಿದ್ದೀರಲ್ಲವೋ?
೫ ಹಾಗಾದರೆ, ಕರ್ತನು ಒಬ್ಬೊಬ್ಬನಿಗೆ ಕೊಟ್ಟ ಹಾಗೆ ನೀವು ವಿಶ್ವಾಸಿಸಿದ್ದಕ್ಕೆ ಕಾರಣವಾದ [3]ಸೇವಕರಲ್ಲದೆ,
೬ ಪೌಲನು ಯಾರು? ಅಪೊಲ್ಲೋಸನು ಯಾರು? ನಾನು ನೆಟ್ಟೆನು, [4]ಅಪೊಲ್ಲೋಸನು ನೀರು ಹಾಕಿದನು;
೭ ಆದರೆ ದೇವರು ಬೆಳಿಸಿದನು. ಆದದರಿಂದ ನೆಡುವವನಾದರೂ, ನೀರು ಹಾಕುವವನಾದರೂ, ಏನೂ ಇಲ್ಲ;
೮ ಆದರೆ ಬೆಳಿಸುವ ದೇವರೇ. ನೆಡುವವನೂ, ನೀರು ಹಾಕುವವನೂ ಒಂದೇ; ಆದರೆ ಅವನವನು ಸ್ವಂತ
೯ ಕಷ್ಟದ ಪ್ರಕಾರ ಸ್ವಂತ ಕೂಲಿ ತಕ್ಕೊಳ್ಳುವನು. ಯಾಕಂದರೆ ನಾವು [5]ದೇವರ ಜತೆಕೆಲಸದವರಾಗಿದ್ದೇವೆ;
ನೀವು ದೇವರ ಆರಂಬವೂ, [6]ದೇವರ ಕಟ್ಟುವಿಕೆಯೂ ಆಗಿದ್ದೀರಿ.
೧೦ ನನಗೆ ಕೊಡಲ್ಪಟ್ಟ ದೇವರ ಕೃಪೆಯ ಪ್ರಕಾರ, ನಾನು ಬುದ್ಧಿಯುಳ್ಳ [7]ಶಿಲ್ಪಿಯಾಗಿ ಅಸ್ತಿವಾರ ಹಾಕಿದ್ದೇನೆ;
ಮತ್ತೊಬ್ಬನು ಮೇಲೆ ಕಟ್ಟುತ್ತಾನೆ. ಆದರೆ ಒಬ್ಬೊಬ್ಬನು ಹ್ಯಾಗೆ ಮೇಲೆ ಕಟ್ಟುತ್ತಾನೋ, ನೋಡಿ ಕೊಳ್ಳಲಿ.
೧೧ ಯಾಕಂದರೆ ಯೇಸು ಕ್ರಿಸ್ತನಾಗಿರುವ ಹಾಕಲ್ಪಟ್ಟ ಅಸ್ತಿವಾರವನ್ನಲ್ಲದೆ, ಮತ್ತೊಂದನ್ನು ಯಾವನೂ
೧೨ ಹಾಕಲಾರನು. ಮತ್ತು ಯಾವನಾದರೂ [8]ಈ ಅಸ್ತಿವಾರದ ಮೇಲೆ ಚಿನ್ನ, ಬೆಳ್ಳಿ, ಬೆಲೆಯುಳ್ಳ ಕಲ್ಲುಗ
೧೩ ಳನ್ನೂ, ಕಟ್ಟಿಗೆ, ಹುಲ್ಲು, ಕೂಳೆಗಳನ್ನೂ ಕಟ್ಟಿದರೆ, ಅವನವನ ಕೆಲಸ ತೋರಲ್ಪಡುವದು. ಆ ದಿವಸವು

1. ಮನುಷ್ಯರೀತಿಯಾಗಿ ನಡಿಯುವವರೆಂಬುವದು, ಪರಿಶುದ್ಧಾತ್ಮನ ಕೃಪೆಯಿಂದ ಪುನರ್ಜನ್ಮ ಹೊಂದಿ ಪರಿಶುದ್ಧರಾಗಿ ನಡಿಯದವರೆಂಬ ಅರ್ಥವು.

2. ಅವರು ಮನುಷ್ಯರೀತಿಯಾಗಿಯೂ ಮಾಂಸಭಾವದವರಾಗಿಯೂ ನಡೆದರೆಂಬುವದಕ್ಕೆ ಅವರೊಳಗಿದ್ದ ಭೇದಗಳೂ ವಾಗ್ವಾದಗಳೂ ದೃಷ್ಟಾಂತವಾಗಿದ್ದವು. ಪೌಲನ ಕಕ್ಷಿ ಅಪೊಲ್ಲೋಸನ ಕಕ್ಷಿ ಎಂಬ ಕೆಲವು ಕಕ್ಷಿಗಳು ಅವರೊಳಗಿದ್ದವೆಂದು ತೋರುತ್ತದೆ. ಕೊರಿಂಥದ ಸಭೆಯ ಬೋಧಕರಲ್ಲಿ ಕೆಲವು ಕಕ್ಷಿಗಾರರನ್ನು ಕುರಿತು ಹೀಗೆ ಹೇಳಿರ ಬಹುದು. (೪. ೬. ವಚನದ ವ್ಯಾಖ್ಯಾನ ನೋಡ ಬೇಕು.)

3. ಬೋಧಕರೆಲ್ಲರೂ ದೇವರಿಗೂ ಆತನ ಸಭೆಗೂ ಸೇವಕರಾಗಿದ್ದಾರೆ. ಪರಮ ಯಜಮಾನನು ಅವರಿಗೆ ಕೊಡುವ ಸೇವೆಗೂ ವರಗಳಿಗೂ ತಕ್ಕ ಹಾಗೆ ಅವರಿಗೆ ಕಾರ್ಯಸಿದ್ಧಿಯಾಗುತ್ತದೆ. ಅವರು ಸತ್ಯವನ್ನು ಪ್ರಕಟಿಸುವ ದೇವರ ದಾಸರು. ಅದನ್ನು ಅಂಗೀಕರಿಸುವ ವಿಶ್ವಾಸವು ದೇವರ ಕೃಪೆಯ ವರವಾಗಿದೆ.

4. ಕೊರಿಂಥದಲ್ಲಿ ಸಭೆಯನ್ನು ಸ್ಥಾಪಿಸಿದವನು ಪೌಲನೇ. ಅವನು ಆಸ್ಯದ ಉತ್ತರ ದಿಕ್ಕುಗಳಲ್ಲಿ ಸಂಚರಿಸುವಾಗ ಅಪೊಲ್ಲೋಸನು ಕೊರಿಂಥಕ್ಕೆ ಹೋಗಿ ದಿವ್ಯ ಸತ್ಯವೆಂಬ ನಿರ್ಮಲವಾದ ನೀರಿನಿಂದ ಸಭೆಗೆ ನೀರು ಹಾಕಿದನು. (ಅಪೊ. ಕ್ರಿ. ೧೮. ೨೪—೨೮; ೧೯. ೧.) ಪೈರನ್ನು ನಾಟಿ ನೀರು ಹಾಕಿದರೂ ದೇವರಿಂದಲೇ ಫಲವಾಗ ಬೇಕಾದ ಪ್ರಕಾರ, ಸಭೆಗೆ ಬೋಧಕರಿಂದಲ್ಲ ದೇವರಿಂದಲೇ ಫಲ ಉಂಟಾಗ ಬೇಕು.

5. ಕೆಲವು ವಿಷಯಗಳಲ್ಲಿ ಸೇವಕರೊಳಗೆ ವ್ಯತ್ಯಾಸವಿದ್ದಾಗ್ಯು ಒಬ್ಬನೇ ಯಜಮಾನನ ಕೈಕೆಳಗೆ ಒಂದೇ ಕೆಲಸ ಮಾಡುವದರಿಂದ ಅವರೆಲ್ಲರು ಒಂದಾಗಿದ್ದಾರೆ. ಒಬ್ಬೊಬ್ಬನು ತನ್ನ ಯಥಾರ್ಥತ್ವಕ್ಕೂ ಪ್ರಯಾಸಕ್ಕೂ ತಕ್ಕ ಫಲವನ್ನು ಕಡೆಯಲ್ಲಿ ಪರಮ ಯಜಮಾನನಿಂದ ಹೊಂದುವರು.

6. ಸಭೆಯು ಒಂದು ಆರಂಬಕ್ಕೆ ಸಮಾನವಾಗಿರುವ ಪ್ರಕಾರ ಒಂದು ಮಾಳಿಗೆಗೂ ಸಮಾನವಾಗಿದೆ. ಅದರಲ್ಲಿ ಹಲವರ ಬೋಧನೆ ಉಂಟಾಗಿದ್ದಾಗ್ಯೂ ಅದೆಲ್ಲಾ ವಿಶ್ವಾಸಕ್ಕೆ ಅಸ್ತಿವಾರವಾಗಿರುವ ಯೇಸು ಕ್ರಿಸ್ತನ ಸತ್ಯಕ್ಕೆ ಅನುಸರಣೆಯಾದದ್ದಾಗಿರ ಬೇಕು. ಹಾಗಿಲ್ಲದೆ ಇದ್ದರೆ, ಸಭೆ ಎಂಬುವ ಮಾಳಿಗೆ ಕಟ್ಟಲ್ಪಡಲಾರದು. (ಎಫೆ. ೨. ೨೦—೨೨. ೧ಪೇತ್ರ. ೨. ೫.)

7. ದೇವರ ಕೃಪೆಯಿಂದ ಶ್ರೇಷ್ಠ ಶಿಲ್ಪಾಚಾರಿಯಾಗಿದ್ದ ಪೌಲನು ಯೇಸು ಕ್ರಿಸ್ತನೆಂಬ ಒಂದೇ ಸ್ಥಿರವಾದ ಅಸ್ತಿವಾರದ ಮೇಲೆ ಕಟ್ಟುವವನಾಗಿದ್ದನು. (೧೧. ವ.) ಅದು ದೇವರಿಂದ ಹಾಕಲ್ಪಟ್ಟ ಅಸ್ತಿವಾರವಾಗಿತ್ತು. (ಯೆಶಾ. ೨೮. ೧೬. ರೋಮಾ. ೯. ೩೩.) ಪೌಲನು ಕೊರಿಂಥದಲ್ಲಿ ಹಾಕಿದ ಆ ಅಸ್ತಿವಾರದ ಮೇಲೆ ಅಪೊಲ್ಲೋಸನು ಮೊದಲಾದ ಬೋಧಕರು ಸಭೆ ಎಂಬ ಮಾಳಿಗೆಯನ್ನು ಕಟ್ಟಿದರು.

8. ಕ್ರಿಸ್ತನ ಸಭೆಗೂ ಭಕ್ತರ ವಿಶ್ವಾಸಕ್ಕೂ ಕ್ರಿಸ್ತನನ್ನು ಕುರಿತ ಸತ್ಯೋಪದೇಶವೇ ನಿತ್ಯವಾದ ಅಸ್ತಿವಾರವು. (೧೧. ವ.) ಒಬ್ಬನು ಸಭೆಗೆ ಬೋಧಿಸುವದರಲ್ಲಿಯೂ ಜನರಿಗೆ ಬೋಧಿಸುವದರಲ್ಲಿಯೂ ಈ ಅಸ್ತಿವಾರದ ಮೇಲೆ ಸತ್ಯವೇದದ ಶುದ್ಧ ಉಪದೇಶಗಳಿಂದ ಕಟ್ಟುವವನಾಗಿದ್ದರೆ, ಅವನು ಕಟ್ಟುವ ಮಾಳಿಗೆ ನವರತ್ನ ಖಚಿತವಾದಂಥ, ಚಿನ್ನ ಬೆಳ್ಳಿ ಮುಂತಾದ ಲೋಹಗಳಿಂದ ಅಲಂಕರಿಸಲ್ಪಟ್ಟಿರುವಂಥ ಮಂದಿರದ ಹಾಗೆ ಪ್ರಕಾಶಿಸುವದು. ಹಾಗೆ ಮಾಡದೆ ಅಬದ್ಧವಾದ ಉಪದೇಶಗಳನ್ನು ಕಲ್ಪಿಸಿ ಅಯುಕ್ತ ಆಚಾರಗಳನ್ನು ಅನುಸರಿಸಿ ನಡೆದರೆ, ಕಟ್ಟಿಗೆ ಹುಲ್ಲು ಕೂಳೆ ಮುಂತಾದ ಅಲ್ಪ ವಸ್ತುಗಳಿಂದ ಕಟ್ಟಲ್ಪಟ್ಟ ಮಂದಿರಕ್ಕೆ ಸಮಾನವಾಗಿರುವದು. ಆ ಕಟ್ಟುವಿಕೆಯು ಬೆಂಕಿಯಿಂದ ಬಹು ಲೇಸಾಗಿ ನಾಶವಾಗುವದು.

ಅದನ್ನು ಪ್ರಕಟ ಮಾಡುವದು. ಹ್ಯಾಗಂದರೆ, [1]ಬೆಂಕಿಯಿಂದ ಪ್ರತ್ಯಕ್ಷವಾಗುವದು. ಮತ್ತು ಅವನವನ
೧೪ ಕೆಲಸ ಎಂಥಾದ್ದೋ, ಬೆಂಕಿ ಶೋಧಿಸುವದು. ಮೇಲೆ ಕಟ್ಟಿದ ಒಬ್ಬನ ಕೆಲಸ ನಿಂತರೆ, [2]ಪ್ರತಿಫಲ ತಕ್ಕೊ
೧೫ ಳ್ಳುವನು. ಒಬ್ಬನ ಕೆಲಸ ಸುಟ್ಟು ಹೋದರೆ, ನಷ್ಟ ಪಡುವನು; ತಾನೇ ರಕ್ಷಿಸಲ್ಪಡುವನು; ಆದರೆ [3]ಬೆಂಕಿ
ಯಿಂದಾದ ಹಾಗೆ.
೧೬ ನೀವು ದೇವರ ಮಂದಿರವಾಗಿದ್ದೀರೆಂದೂ, ದೇವರ ಆತ್ಮವು ನಿಮ್ಮಲ್ಲಿ ವಾಸ ಮಾಡುತ್ತದೆಂದೂ [4]ಅರಿಯರಾ?
೧೭ ಯಾವನಾದರೂ ದೇವರ ಮಂದಿರವನ್ನು [5]ಕೆಡಿಸಿದರೆ, ಅವನನ್ನು ದೇವರು ಕೆಡಿಸುವನು; ಯಾಕಂದರೆ ದೇ
ವರ ಮಂದಿರ ಪರಿಶುದ್ಧವಾದದ್ದು; ಆ [6]ಮಂದಿರವು ನೀವೇ.
೧೮ ಯಾವನಾದರೂ ತನ್ನನ್ನು ಮೋಸಗೊಳಿಸದೆ ಇರಲಿ. ಯಾವನಾದರೂ ಈ ಲೋಕದಲ್ಲಿ ಜ್ಞಾನಿ ಎಂದು
೧೯ ನಿಮ್ಮಲ್ಲಿ ಕಾಣಿಸಿದರೆ, ಜ್ಞಾನಿಯಾಗುವ ಹಾಗೆ [7]ಹುಚ್ಚನಾಗಲಿ. ಯಾಕಂದರೆ ಈ ಲೋಕದ ಜ್ಞಾನವು
ದೇವರ ಮುಂದೆ ಹುಚ್ಚುತನವಾಗಿದೆ. ಹ್ಯಾಗಂದರೆ, ಜ್ಞಾನಿಗಳನ್ನು ಅವರ [8]ತಂತ್ರದಲ್ಲಿಯೇ ಹಿಡಿಯುವನು;
೨೦ (ಯೋಬ. ೫. ೧೩.) ಮತ್ತು, ಜ್ಞಾನಿಗಳ ಯೋಚನೆಗಳು ವ್ಯರ್ಥವಾಗಿವೆ ಎಂದು, ಕರ್ತನು ತಿಳಿಯು
ತ್ತಾನೆ ಎಂಬದಾಗಿ (ಕೀರ್ತ. ೯೪. ೧೧.) ಬರೆದದೆ.
೨೧ ಆದ ಕಾರಣ ಯಾವನಾದರೂ ಮನುಷ್ಯರಲ್ಲಿ ಹೆಚ್ಚಳ ಪಡದೆ ಇರಲಿ. ಯಾಕಂದರೆ [9]ಎಲ್ಲಾ ನಿಮ್ಮದು,
೨೨ ಪೌಲನಾಗಲಿ, ಅಪೊಲ್ಲೋಸನಾಗಲಿ, ಕೇಫನಾಗಲಿ, ಲೋಕವಾಗಲಿ, ಜೀವವಾಗಲಿ, ಮರಣವಾಗಲಿ, ಇರು
೨೩ ವವುಗಳಾಗಲಿ, ಬರುವವುಗಳಾಗಲಿ, ಎಲ್ಲಾ ನಿಮ್ಮದೇ. ನೀವು ಕ್ರಿಸ್ತನವರು, ಕ್ರಿಸ್ತನು ದೇವರವನು.

1. ವಿಶೇಷವಾದ ಒಂದೊಂದು ದೇವರ ಪ್ರತ್ಯಕ್ಷತೆಯು ಒಂದು
ಮುಖ್ಯ ಶೋಧನೆಯ ಕಾಲವಾಗಿದೆ. (ಮಲಕಿ. ೩. ೧—೩.
ಮತ್ತಾ. ೩. ೧೧, ೧೨. ವಚನಗಳ ವ್ಯಾಖ್ಯಾನ ನೋಡ ಬೇಕು.)
ಲೋಕಕ್ಕೆ ನ್ಯಾಯತೀರಿಸುವದಕ್ಕೆ ಕ್ರಿಸ್ತನು ಎರಡನೇ ಸಾರಿ ಪ್ರತ್ಯ
ಕ್ಷವಾಗುವ ಕಾಲವು ಬೇರೆ ಎಲ್ಲಾ ಕಾಲಗಳಿಗಿಂತ ಮುಖ್ಯವಾದ
ಶೋಧನೆಕಾಲವು. (೨ಥೆಸ್ಸ. ೧. ೭—೯.)

2. ಕ್ರಿಸ್ತನ ಮಾರ್ಗದ ಸತ್ಯೋಪದೇಶಗಳನ್ನು ಸರಿಯಾಗಿ
ಯೂ ಯಥಾರ್ಥವಾಗಿಯೂ ಬೋಧಿಸುವವನಿಗೆ ತಕ್ಕ ಫಲವು
ದೊರಕದೆ ಇರಲಾರದು.

3. ಸರಿಯಾದ ಅಸ್ತಿವಾರದ ಮೇಲೆ ಸರಿಯಾಗಿ ಕಟ್ಟಿದ ಬೋ
ಧಕನು ಫಲವನ್ನು ಹೊಂದುವನು. ಆದರೆ ಲೋಕಜ್ಞಾನವಾದ
ಕಟ್ಟಿಗೆ ಹುಲ್ಲು ಕೂಳೆ ಮುಂತಾದವುಗಳನ್ನು ಕೂಡಿಸಿ ಕಟ್ಟಿದ್ದರೆ,
ಅವನಿಗೆ ಕಡೆಯಲ್ಲಿ ನಷ್ಟ ಉಂಟಾಗುವದು. ಆ ಹುಲ್ಲಿನ ಮನೆ
ಯನ್ನು ಕಟ್ಟಿದ ಅವನು ಮಹಾ ಪ್ರಯಾಸದಿಂದ ತಪ್ಪಿಸಿ ಕೊಂಡ
ರೂ, ಬೆಂಕಿ ಹತ್ತಿ ಉರಿಯುವ ದಿವಸದಂತಿರುವ ನ್ಯಾಯತೀರ್ವಿ
ಕೆಯ ದಿವಸದಲ್ಲಿ ಅವನ ಕೆಲಸ ಶುದ್ಧವಾಗಿ ನಾಶವಾಗುವದು.
ಬೆಂಕಿ ಎಂಬುವದು ಒಂದು ಉಪಮಾನದ ಮಾತು. (ಆಮೋಸ.
೪. ೧೧.) ಇದರಿಂದ ಉತ್ತರಿಸುವ ಸ್ಥಳ ಉಂಟೆಂಬ ಬೋಧನೆಗೆ
ಎಷ್ಟು ಮಾತ್ರವೂ ಆಧಾರವಿಲ್ಲ.

4. ದೇವರ ಮಂದಿರವಾದ ಸಭೆಯು ಪರಿಶುದ್ಧವಾಗಿರುವದ
ರಿಂದ, ಅದನ್ನು ತಮ್ಮ ತಪ್ಪಾದ ಬೋಧನೆಯಿಂದಲೂ, ಅಪವಿತ್ರ
ವಾದ ನಡತೆಯಿಂದಲೂ, ಕೆಡಿಸುವ ಜನರಿಗೂ ಬೋಧಕರಿಗೂ
ಕೇಡು ಬರುವದೆಂದು ಪೌಲನು ಹೇಳುತ್ತಾನೆ. ಈ ವಿಷಯಗ
ಳನ್ನು ೫ನೇ, ೬ನೇ ಸಂಧಿಗಳಲ್ಲಿ ವಿವರವಾಗಿ ತೋರಿಸಿ ಇದೆ.

5. ಒಬ್ಬೊಬ್ಬ ಭಕ್ತನೂ ಪರಿಶುದ್ಧನಾಗಿರುವ ಪ್ರಕಾರ,
(೬. ೧೯.) ಅನೇಕ ಭಕ್ತರು ಕೂಡಿದ ಸಭೆಯು ಸಹ ಪರಿಶುದ್ಧ
ವಾಗಿರುತ್ತದೆ. (ಎಫೆ. ೨. ೨೦—೨೨.) ಪರಿಶುದ್ಧಾತ್ಮನು ಅದ
ರಲ್ಲಿ ವಾಸ ಮಾಡುತ್ತಾನೆ. (ಯೋಹಾ. ೧೪. ೧೬, ೧೭.) ಒಬ್ಬನು
ಅಶುದ್ಧ ನಡತೆಯಿಂದ ದೇವರ ಮಂದಿರವಾದ ಸಭೆಯನ್ನು ಕೆಡಿ
ಸಿದರೆ, ದೇವರು ಅವನನ್ನು ಕೆಡಿಸುವನು.

6. ದೇವರ ಮಂದಿರವು ಪರಿಶುದ್ಧವಾಗಿರುವ ಪ್ರಕಾರ ಅದಕ್ಕೆ
ಸೇರಿದವರೆಲ್ಲರೂ ಪರಿಶುದ್ಧರಾಗಿದ್ದಾರೆಂದು ಇದರಿಂದ ತೋರು
ತ್ತದೆ.

7. ಆ ಕಾಲದಲ್ಲಿದ್ದ ಕಳ್ಳ ಗುರುಗಳು ತಾವು ಜ್ಞಾನಿಗಳೆಂದು
ಹೆಚ್ಚಳ ಪಟ್ಟರು. ಲೋಕಕ್ಕೆ ಮೆಚ್ಚಿಕೆಯಾಗಿದ್ದ ಆ ಜ್ಞಾನವು ದೇ
ವರ ದೃಷ್ಟಿಯಲ್ಲಿ ಹುಚ್ಚುತನವಾಗಿತ್ತು. ನಿಜವಾಗಿ ಜ್ಞಾನಿಗಳಾಗ
ಬೇಕಾದರೆ, ಕೂಸುಗಳ ಹಾಗೆಯೂ, (ಮತ್ತಾ. ೧೮. ೩.) ಹುಚ್ಚ
ರ ಹಾಗೆಯೂ ಇದ್ದು, ಸುವಾರ್ತೆಯ ಸತ್ಯಗಳನ್ನು ಯುಕ್ತವಾಗಿ
ಗ್ರಹಿಸಿ, ಯಥಾರ್ಥವಾಗಿ ನಡಿಯ ಬೇಕು. ಹೀಗೆ ನಡಿಯುವವ
ರನ್ನು ಲೋಕವು ಹುಚ್ಚರೆಂದು ಹೇಳುವದು.

8. ದೇವರು ಲೋಕಜ್ಞಾನವನ್ನು ಹ್ಯಾಗೆ ಎಣಿಸುತ್ತಾನೆಂದೂ,
ಲೋಕಜ್ಞಾನಿಗಳನ್ನು ಹ್ಯಾಗೆ ನಡಿಸುತ್ತಾನೆಂದೂ ಹಳೇ ಒಡಂಬ
ಡಿಕೆಯಲ್ಲಿ ಚನ್ನಾಗಿ ಹೇಳಲ್ಪಟ್ಟದೆ. ದೇವರು ಜ್ಞಾನಿಗಳನ್ನು ಹಿಡಿ
ಯುವದಕ್ಕೆ ಅವರ ತಂತ್ರವನ್ನೇ ಒಂದು ಬಲೆಯಾಗ ಮಾಡುವ
ನಾದರೆ, ಲೋಕಜ್ಞಾನವು ಆತನ ದೃಷ್ಟಿಯಲ್ಲಿ ಹುಚ್ಚುತನವಾಗಿದೆ
ಎಂಬುವದಕ್ಕೆ ಸಂದೇಹವಿಲ್ಲ.

9. ಒಂದಕ್ಕೊಂದು ವ್ಯತ್ಯಾಸವಾಗಿರುವ ಮನುಷ್ಯರೂ ವಸ್ತು
ಗಳೂ ಸಭೆಯ ಹುದುವಾದ ಆಸ್ತಿಯಾಗಿದೆ. ದೇವರ ಊಳಿಗ
ದವರು ಸಭೆಗೆ ಸ್ವಂತವಾದವರು. ಲೋಕವು ದೇವಭಕ್ತರು ಅನು
ಭವಿಸುವ ಸ್ಥಳವು. ಅವರ ಜೀವವು ಕ್ರಿಸ್ತನೇ. ಅವರ ಮರಣವು
ಅವರಿಗೆ ಆದಾಯವು. ವರ್ತಮಾನ ಕಾಲದ ಕಾರ್ಯಗಳೆಲ್ಲಾ
ಅವರ ಮೇಲಿಗೆ ಹೇತುವೆಯಾಗಿರುವವು. ಭವಿಷ್ಯತ್ಕಾರ್ಯಗ
ಳೆಲ್ಲಾ ಅವರಿಗೆ ಪೂರ್ಣ ಮಹಿಮೆಯಾದವುಗಳು. ಅವರು ಕ್ರಿಸ್ತ
ನಿಗೆ ಸ್ವಂತವಾದವರಾದರೆ, ಎಲ್ಲಾ ಅವರಿಗೆ ಸ್ವಂತವೇ. ಕ್ರಿಸ್ತನು



4. ಕ್ರಿಸ್ತನ ಊಳಿಗದವರೆಂದೂ, ದೇವರ [1]ಮರ್ಮಗಳ ಉಗ್ರಾಣದವರೆಂದೂ, ಹೀಗೆ ಮನುಷ್ಯನು ನಮ್ಮನ್ನು
೨ ಎಣಿಸಲಿ. ಇದಲ್ಲದೆ [2]ಉಗ್ರಾಣದವರಲ್ಲಿ, ಒಬ್ಬೊಬ್ಬನು ನಂಬಿಕೆಯುಳ್ಳವನಾಗಿರ ಬೇಕೆಂದು, ನೋಡುತ್ತಾರೆ.
೩ [3]ಆದರೆ ನಿಮ್ಮಿಂದಲಾದರೂ ಮನುಷ್ಯ [4]ದಿವಸದಿಂದಲಾದರೂ ವಿಚಾರಿಸಲ್ಪಡುವದು ನನಗೆ ಬಹು ಸ್ವಲ್ಪವಾ
೪ ಗಿದೆ. ಅದಲ್ಲದೆ ನನ್ನನ್ನು ನಾನೇ ವಿಚಾರಿಸಿ ಕೊಳ್ಳೆನು. ಯಾಕಂದರೆ ನನ್ನ ವಿಷಯ ನಾನೇನೂ [5]ಅರಿಯೆ;
ಆದಾಗ್ಯೂ ಇದರಿಂದ ನಾನು ನೀತಿನಿರ್ಣಯ ಪಟ್ಟವನಲ್ಲ, ನನ್ನನ್ನು ವಿಚಾರಿಸುವವನು ಕರ್ತನೇ.
೫ ಆದ ಕಾರಣ, ಕರ್ತನು ಬರುವ ಮಟ್ಟಿಗೂ, ಸಮಯಕ್ಕೆ ಮುಂಚೆ ಏನೂ ನಿರ್ಣಯಿಸ ಬೇಡಿರಿ. ಅವನೇ
[6]ಅಂಧಕಾರದ ರಹಸ್ಯಗಳನ್ನು ಬೆಳಕಿಗೆ ತಂದು, ಹೃದಯಗಳ ಆಲೋಚನೆಗಳನ್ನು ಬೈಲು ಪಡಿಸುವನು; ಆಗಲೇ
ಒಬ್ಬೊಬ್ಬನಿಗೆ, ದೇವರಿಂದ ಹೊಗಳಿಕೆ ಉಂಟಾಗುವದು.
೬ ಮತ್ತು, ಸಹೋದರರೇ, ಒಬ್ಬನ ಮೇಲೊಬ್ಬನು [7]ಮತ್ತೊಬ್ಬನ ವಿಷಯ ಉಬ್ಬಿ ಕೊಳ್ಳದ ಹಾಗೆ, [8]ಬರೆದದ್ದ
ಕ್ಕಿಂತ ಹೆಚ್ಚಾಗಿ ಮನುಷ್ಯರನ್ನು ಎಣಿಸದಿರ ನಮ್ಮಲ್ಲಿ ಕಲಿತು ಕೊಳ್ಳುವ ಹಾಗೆ, ನಿಮಗೋಸ್ಕರ ಇವುಗ
೭ ಳನ್ನು ನನಗೂ ಅಪೊಲ್ಲೋಸನಿಗೂ [9]ಸಾಮ್ಯ ಮಾಡಿದ್ದೇನೆ. ಯಾಕಂದರೆ ನಿನ್ನನ್ನು ವಿಶೇಷ ಮಾಡುವವ
ನ್ಯಾರು? ಹೊಂದದ್ದು ನಿನಗೇನದೆ? ಆದರೆ ಹೊಂದಿದ್ದರೆ, ಹೊಂದದೆ ಇದ್ದ ಹಾಗೆ ಹೆಚ್ಚಳ ಪಡುವದೇನು?

ಸಹ ದೇವವಸ್ತುವಿನ ನಿತ್ಯತ್ವದ ಪ್ರಕಾರ ದೇವರವನು. ಆದದ
ರಿಂದ ಈ ವರಗಳನ್ನೆಲ್ಲಾ ಸ್ವಂತ ಉಪಯೋಗಕ್ಕಾದರೂ ಹೆಚ್ಚಳ
ಕ್ಕಾದರೂ ಉಪಯೋಗಿಸದೆ, ಕ್ರಿಸ್ತನ ಮಹಿಮೆಗಾಗಿಯೇ ಪ್ರ
ಯೋಗಿಸುವವರಾಗಿರ ಬೇಕು.

1. ಪೌಲನು, ಅಪೊಲ್ಲೋಸನು, ಕೇಫನು ಮೊದಲಾದ ದೇವರ
ದಾಸರು ಸಭೆಗೆ ಸ್ವಂತವಾದವರು ಎಂದು ಮುಂಚಿನ ಸಂಧಿಯಲ್ಲಿ
ಹೇಳಿ ಇದೆ. ಈ ವಚನದಲ್ಲಿ ಅವರ ಸರಿಯಾದ ಅಂತಸ್ತನ್ನು
ಹೇಳಿ ಇದೆ. ಅವರು ಕ್ರಿಸ್ತನ ಸೇವಕರಾಗಿಯೂ, ದೇವರ ಮರ್ಮ
ಗಳ ಉಗ್ರಾಣಿಕರಾಗಿಯೂ ಇರುವವರೇ ಹೊರ್ತು, ಮನೆಗೆ
ಯಜಮಾನರಲ್ಲ. ಆದಾಗ್ಯೂ ಸೇವಕರು ಅಂದರೆ, ಕರ್ತನಾದ
ಕ್ರಿಸ್ತನಿಗೆ ಸೇವಕರಾಗಿಯೂ, ಉಗ್ರಾಣಿಕರು ಅಂದರೆ, ದೇವರ
ಮರ್ಮಗಳಿಗೆ ಉಗ್ರಾಣಿಕರಾಗಿಯೂ ಇದ್ದಾರೆ. ಮರ್ಮಗಳು
ಎಂಬುವದನ್ನು ಕುರಿತು (ಮತ್ತಾ. ೧೩. ೧೧. ವಚನದ ವ್ಯಾಖ್ಯಾ
ನ ನೋಡ ಬೇಕು.) ಇವು ಸುವಾರ್ತೆಯಲ್ಲಿ ಕೃಪೆಯುಳ್ಳ ದೇ
ವರು ಪ್ರಕಟ ಮಾಡಿದ ಸತ್ಯಗಳನ್ನು ಕುರಿತೇ ಹೊರ್ತು, ಸ್ನಾನ
ರಾತ್ರಿಭೋಜನದ ಆಚರಣೆಗಳನ್ನು ಕುರಿತದ್ದಲ್ಲ. ೧ನೇ ಸಂಧಿ
ಯಲ್ಲಿ ಪೌಲನು ತಾನು ಸ್ನಾನ ಕೊಡುವದಕ್ಕಲ್ಲ, ಸುವಾರ್ತೆ
ಯನ್ನು ಪ್ರಸಂಗಿಸುವದಕ್ಕೆ ಕಳುಹಿಸಲ್ಪಟ್ಟೆನೆಂದು ಹೇಳಿರುವದ
ರಿಂದ, ದೇವರ ಮರ್ಮಗಳೆಂಬುವದು ಕ್ರಿಸ್ತಮಾರ್ಗದ ಸತ್ಯೋ
ಪದೇಶಗಳೇ.

2. ಉಗ್ರಾಣಿಕರನ್ನು ಕುರಿತು, ಮತ್ತೊಬ್ಬರು ಮೇಲೆ ಹೇಳಿದ
ಪ್ರಕಾರ ಎಣಿಸ ಬೇಕು. ಆದರೆ ಉಗ್ರಾಣಿಕರು ಯಥಾರ್ಥವಾಗಿ
ನಡಿಯ ತಕ್ಕದ್ದು. ಉಗ್ರಾಣಿಕನಾದ ಯೋಸೆಫನು ಹ್ಯಾಗೆ ನಂ
ಬಿಗಸ್ತನಾಗಿದ್ದನೋ, ಹಾಗೆಯೇ ದೇವರ ಊಳಿಗದವರೆಲ್ಲರೂ
ನಂಬಿಗಸ್ತರಾಗಿರ ಬೇಕು.

3. ೩—೫. ವಚನಗಳಲ್ಲಿ ದೇವರ ಊಳಿಗದವರನ್ನು ಕುರಿತು
ಚನ್ನಾಗಿ ಯೋಚಿಸದೆ, ಹೊಗಳಿಕೆಯಾದರೂ ನಿಂದೆಯಾದರೂ
ಮಾಡುವದು ಸರಿಯಲ್ಲವೆಂದು ಹೇಳಿ ಇದೆ.

4. ಕರ್ತನ ದಿವಸವನ್ನು ಕುರಿತು ೩. ೧೩ಲ್ಲಿ ಹೇಳಿ ಇದೆ.
ಇದರ ತರುವಾಯ ಬರುವ ೫ನೇ ವಚನದಲ್ಲಿಯೂ ಅದನ್ನು
ಕುರಿತು ಹೇಳಿ ಇದೆ. ಆ ದಿವಸವನ್ನು ವ್ಯತ್ಯಾಸ ಮಾಡುವದಕ್ಕೆ
ಇದು ಮನುಷ್ಯದಿವಸವೆಂದು ಹೇಳಲ್ಪಟ್ಟದೆ.

5. ಪೌಲನು ತನ್ನ ಉಗ್ರಾಣಿಕನ ಕೆಲಸವನ್ನು ನಂಬಿಕೆಯಾಗಿ
ಮಾಡಿದನು. (ಅಪೊ. ಕ್ರಿ. ೨೦. ೨೬, ೨೭.) ಆದಾಗ್ಯೂ ಆ ನಂ
ಬಿಗೆಯನ್ನು ಕುರಿತು ಅವನಾಗಲಿ ಮತ್ತೊಬ್ಬರಾಗಲಿ ತೀರ್ಪು
ಹೇಳುವದು ಸರಿಯಲ್ಲ. ಸರ್ವಸಾಕ್ಷಿಯಾದ ಸಾಕ್ಷಾತ್ ದೇವರಾ
ಗಿರುವ ಕ್ರಿಸ್ತನೇ ತೀರ್ಪು ಹೇಳ ಬೇಕು. ಆದದರಿಂದ ಆತನು
ತೀರ್ಪು ಹೇಳುವದಕ್ಕೆ ತಾಳ್ಮೆಯಿಂದ ಕಾದಿರ ಬೇಕೇ ಹೊರ್ತು,
ನಾವೇ ತೀರಿಸುವದು ಸರಿಯಲ್ಲ ಅನ್ನುತ್ತಾನೆ. (೫. ವ.) ದೇವ
ರು ಮಾಡುವ ತೀರ್ಪಿಗೆ ಕಾದಿರುವ ಊಳಿಗದವನು ಮನುಷ್ಯರ
ತೀರ್ಪಿಗೆ ಭಯ ಪಡನು.

6. ಈಗ ಮರೆಯಾಗಿರುವ ಸತ್ಕ್ರಿಯೆ ದುಷ್ಕ್ರಿಯೆಗಳು ಆ
ಕಾಲದಲ್ಲಿ ಪ್ರತ್ಯಕ್ಷವಾಗಿ ತೋರ ಬರುವವು. ಆ ದಿವಸದಲ್ಲಿ ದೇ
ವರಿಂದ ಹೊಗಳಿಕೆ ಹೊಂದುವವನೇ ಭಾಗ್ಯವಂತನು.

7. ಒಬ್ಬ ಬೋಧಕನಿಗಿಂತ ಇನ್ನೊಬ್ಬ ಬೋಧಕನು ಶ್ರೇಷ್ಠ
ನೆಂದು ಹೆಚ್ಚಳ ಪಡ ಕೂಡದು. ಬೇರೊಬ್ಬರಿಗಿಂತ ನೀವು ಶ್ರೇಷ್ಠ
ರಾದರೆ, ಅದಕ್ಕಾಗಿ ಗರ್ವ ಪಡದೆ, ಇಂಥಾ ಶ್ರೇಷ್ಠತ್ವವನ್ನು ನಿಮ
ಗೆ ಅನುಗ್ರಹಿಸಿದ ದೇವರಿಗೆ ಕೃತಜ್ಞತೆಯುಳ್ಳವರಾಗಿರ ಬೇಕು
ಅನ್ನುತ್ತಾನೆ. (೭. ವ.)

8. ಸತ್ಯವೇದದಲ್ಲಿ ಹೇಳಿರುವ ಪ್ರಮಾಣದಿಂದಲೇ ಒಬ್ಬೊ
ಬ್ಬನೂ ತನ್ನ ತನ್ನ ನಡತೆಗಳನ್ನು ತೂಗಿ ನೋಡಿ ಕೊಳ್ಳ ಬೇಕು.
೧. ೧೯, ೩೧; ೩. ೧೯. ವಚನಗಳಲ್ಲಿ ಆ ಪ್ರಮಾಣದ ರೀತಿಯ
ನ್ನು ತೋರಿಸಿ ಇದೆ.

9. ಪೌಲನು ಹೇಳಿದ ಸಂಗತಿಗಳು ಎಲ್ಲಾ ಬೋಧಕರಿಗೂ
ಅನುಸರಣೆಯಾದವುಗಳಾದಾಗ್ಯೂ, ಮತ್ತೊಬ್ಬರಿಗೆ ವ್ಯಸನವುಂ
ಟಾಗದಂತೆ ತನ್ನನ್ನೂ ಅಪೊಲ್ಲೋಸನನ್ನೂ ಕುರಿತು ದೃಷ್ಟಾಂತ
ಪಡಿಸಿ ಮಾತಾಡುತ್ತಾನೆ.

ಕಕ್ಷಿಗಾರರ ಹೆಚ್ಚಳವನ್ನೂ ಅಪೊಸ್ತಲರ ತಾಳ್ಮೆಯನ್ನೂ ತೋರಿಸಿ ನ್ಯಾಯ ಹೇಳಿದ್ದು.

೮ [1]ಈಗ ತೃಪ್ತಿ ಪಟ್ಟದ್ದೀರಿ, ಈಗ ಐಶ್ವರ್ಯವಂತರಾದಿರಿ, [2]ನಾವಿಲ್ಲದೆ ಧೊರೆತನ ಮಾಡಿದಿರಿ. ಧೊರೆತನ
ಮಾಡಿದರೆ, [3]ಎಷ್ಟೋ ಒಳ್ಳೇದು! ಆಗ ನಾವು ಸಹ ನಿಮ್ಮ ಸಂಗಡ ಧೊರೆತನ ಮಾಡುತ್ತಿರುವೆವು.
೯ ಯಾಕಂದರೆ ದೇವರು ಅಪೊಸ್ತಲರಾದ ನಮ್ಮನ್ನು ಮರಣಕ್ಕೆ ಗುರಿಯಾದವರ ಪ್ರಕಾರ [4]ಕಡೆಯವರಾಗಿ
ತೋರ ಮಾಡಿದ್ದಾನೆಂದೂ, ಲೋಕಕ್ಕೂ ದೂತರಿಗೂ ಮನುಷ್ಯರಿಗೂ ನೋಟ ಮಾಡಲ್ಪಟ್ಟಿದ್ದೇವೆಂದೂ,
೧೦ ನೆನಸುತ್ತೇನೆ. ನಾವು ಕ್ರಿಸ್ತನ ನಿಮಿತ್ತ ಹುಚ್ಚರು, ನೀವು ಕ್ರಿಸ್ತನಲ್ಲಿ ವಿವೇಕಿಗಳು; ನಾವು ಬಲಹೀನರು,
೧೧ ನೀವು ಶಕ್ತರು; ನೀವು ಘನವುಳ್ಳವರು, ನಾವು ಮಾನಹೀನರು. ಇದೇ ಘಳಿಗೆಯ ಮಟ್ಟಿಗೂ ಹಶಿವೆಯುಳ್ಳ
ವರಾಗಿಯೂ, ದಾಹವುಳ್ಳವರಾಗಿಯೂ, ಬೆತ್ತಲೆಯವರಾಗಿಯೂ, ಗುದ್ದಲ್ಪಡುವವರಾಗಿಯೂ, ನೆಲೆ ಇಲ್ಲದ
೧೨ ವರಾಗಿಯೂ, [5]ಸ್ವಂತ ಕೈಗಳಿಂದ ಕೆಲಸ ಮಾಡಿ, ಕಷ್ಟ ಪಡುವವರಾಗಿಯೂ ಇದ್ದೇವೆ. [6]ನಿಂದೆ ಪಡುವವ
೧೩ ರಾಗಿ, ಆಶೀರ್ವದಿಸುತ್ತೇವೆ; ಹಿಂಸೆ ಪಡುವವರಾಗಿ, ತಾಳಿ ಕೊಳ್ಳುತ್ತೇವೆ. ದೂಷಣೆ ಪಡುವವರಾಗಿ, ಬೇಡಿ
ಕೊಳ್ಳುತ್ತೇವೆ. ಲೋಕದ [7]ಕಲ್ಮಷವಾಗಿಯೂ, ಎಲ್ಲಾದರ ಕಸವಾಗಿಯೂ ಈ ವರಿಗೂ ಮಾಡಲ್ಪಟ್ಟಿದ್ದೇವೆ.
೧೪ ನಿಮ್ಮನ್ನು ನಾಚಿಕೆ ಪಡಿಸುವದಕ್ಕೆ ಇವುಗಳನ್ನು ಬರೆಯದೆ, ನನ್ನ ಪ್ರಿಯ ಮಕ್ಕಳಿಗೆಂದು ಬುದ್ಧಿ ಹೇಳುತ್ತೇನೆ.
೧೫ ಯಾಕಂದರೆ ಕ್ರಿಸ್ತನಲ್ಲಿ ನಿಮಗೆ ಉಪಾಧ್ಯರು ಸಾವಿರಾರು ಇದ್ದರೂ ತಂದೆಗಳು ಅನೇಕರಿಲ್ಲ. ಹ್ಯಾಗಂದರೆ,
೧೬ ನಾನೇ ಸುವಾರ್ತೆಯ ಮೂಲವಾಗಿ ಕ್ರಿಸ್ತ ಯೇಸುವಿನಿಂದ ನಿಮ್ಮನ್ನು ಪಡೆದೆನು. ಆದ ಕಾರಣ [8]ನನ್ನನ್ನು
ಅನುಸರಿಸುವವರಾಗಿರೆಂದು, ನಿಮ್ಮನ್ನು ಬೇಡಿ ಕೊಳ್ಳುತ್ತೇನೆ.
೧೭ [9]ಇದರ ನಿಮಿತ್ತ ಕರ್ತನಲ್ಲಿ ನಂಬಿಕೆಯುಳ್ಳ ನನ್ನ ಪ್ರಿಯ ಮಗನಾದ ತಿಮೊಥೆಯನನ್ನು ನಿಮ್ಮ ಬಳಿಗೆ ಕಳು
ಹಿಸಿದ್ದೇನೆ. ಅವನು ಎಲ್ಲೆಲ್ಲಿಯೂ [10]ಎಲ್ಲಾ ಸಭೆಗಳಲ್ಲಿಯೂ, ನಾನು ಬೋಧಿಸುವ ಪ್ರಕಾರವೇ, ಕ್ರಿಸ್ತನಲ್ಲಿ
ರುವ ನನ್ನ ಮಾರ್ಗಗಳನ್ನು ನಿಮಗೆ ಜ್ಞಾಪಕ ಮಾಡುವನು.

1. ಕೊರಿಂಥದ ಸಭೆಯವರಿಗೆ ಜ್ಞಾನತಂದೆಯಾಗಿದ್ದ ಪೌಲನು, ಅವರಲ್ಲಿ ಉಬ್ಬಿದ ಮನಸ್ಸುಳ್ಳವರು ದೀನತ್ವ ಹೊಂದುವದಕ್ಕೆ ಹಾಸ್ಯವೆಂಬ ಚಬುಕಿನಿಂದ ಅವರನ್ನು ಹೊಡಿಯುತ್ತಾನೆ. (೮—೧೩. ವ.) ತನ್ನ ಹಾಗೆಯೂ ತನ್ನನ್ನು ಅನುಸರಿಸುವ ಒಳ್ಳೇ ಮಕ್ಕಳ ಹಾಗೆಯೂ ನಡಿಯ ಬೇಕೆಂದು ಅವರನ್ನು ಪ್ರೇರೇಪಿಸಿ, ತಾನು ಶೀಘ್ರವಾಗಿ ಅವರ ಬಳಿಗೆ ಬರುವಾಗ ಅವರ ನಡತೆಗೆ ತಕ್ಕದ್ದಾಗಿ, ಶಾಂತದಿಂದಲಾದರೂ ಖಂಡನೆಯಿಂದಲಾದರೂ ಅವರನ್ನು ನಡಿಸ ಬೇಕಾಗಿದೆ ಎಂದು ಅವರನ್ನು ಎಚ್ಚರಿಸುತ್ತಾನೆ. (೧೪—೨೧. ವ.)

2. ನಿಮಗೆ ಬೋಧನೆ ಮಾಡಿದ ನಮಗೆ, ನೀವು ಕಡೇ ದಿವಸದಲ್ಲಿ ಸಂತೋಷದ ಕಿರೀಟವಾಗಿರುವಿರೆಂದು ನಾವು ನಂಬಿರಲಾಗಿ, ನೀವೇ ನಮಗಿಂತ ಮುಂಚೆ ಕಿರೀಟಾಧಿಪತಿಗಳಾಗಿ, ಸ್ವಇಚ್ಛೆಯಾಗಿದ್ದು ಆಳಿಕೆ ಮಾಡುವಂತೆ ಸಂಭವಿಸಿತಲ್ಲಾ? ಅನ್ನುತ್ತಾನೆ.

3. ನೀವು ನಿಜವಾಗಿಯೇ ಅರಸುಗಳಾಗಿ ಆಳುವವರಾಗಿದ್ದರೆ, ನಿಮಗುಂಟಾಗಿರುವ ಮಹಿಮೆಯಲ್ಲಿ ನಮಗೂ ಭಾಗವುಂಟಲ್ಲಾ? ಅನ್ನುತ್ತಾನೆ.

4. ನೀವು ಇಷ್ಟು ದೊಡ್ಡವರಾಗಿರಲು ಅಪೊಸ್ತಲರಾದ ನಾವು ತಗ್ಗಿಸಲ್ಪಟ್ಟವರಾಗಿಯೂ ಕಡೆಯಾದವರಾಗಿಯೂ ಇದ್ದೇವೆ. ಮರಣದ ತೀರ್ಪು ಹೊಂದಿದವರು ರಂಗಸ್ಥಳದಲ್ಲಿ ಎಲ್ಲರಿಗೂ ವಿನೋದವಾಗಿ ತೋರುವ ಪ್ರಕಾರ, ನಾವು ಸಹ, ಪರಲೋಕದ ದೂತರಿಗೂ ಭೂಲೋಕದ ಮನುಷ್ಯರಿಗೂ ವಿನೋದಕ್ಕಾಗಿ ಇಡಲ್ಪಟ್ಟಿದ್ದೇವೆ. ಅವರು ನಮ್ಮನ್ನು ಹುಚ್ಚರಾಗಿಯೂ, ನಿಮ್ಮನ್ನು ಜ್ಞಾನಿಗಳಾಗಿಯೂ, ನಮ್ಮನ್ನು ಬಲಹೀನರಾಗಿಯೂ, ನಿಮ್ಮನ್ನು ಬಲಶಾಲಿಗಳಾಗಿಯೂ ಎಣಿಸುತ್ತಾರೆ. (೧೦. ವ.)

5. ೯. ೧—೧೮. ಅಪೊ. ಕ್ರಿ. ೧೮. ೩; ೨೦. ೩೪. ವಚನಗಳ ವ್ಯಾಖ್ಯಾನಗಳನ್ನು ನೋಡ ಬೇಕು.

6. ನಮಗೆ ಉಂಟಾಗುವ ಉಪದ್ರವನ್ನು ನಾವು ತಾಳ್ಮೆಯಿಂದ ಸಹಿಸಿ ಕೊಂಡು, ನಮ್ಮ ಕರ್ತನ ಅಪ್ಪಣೆಯ ಪ್ರಕಾರ ನಮ್ಮನ್ನು ಉಪದ್ರ ಪಡಿಸುವವರನ್ನು ಆಶೀರ್ವದಿಸುತ್ತೇವೆ.

7. ಅವರು ಹೊಂದಿದ ನಿಂದೆಯೂ ಉಪದ್ರವೂ ಎಷ್ಟು ಅಧಿಕವಾದದ್ದೆಂದು ಇದರಿಂದ ತಿಳಿಯ ಬರುತ್ತದೆ. ಬಿಸಾಡಲ್ಪಡುವ ಕಸದ ಹಾಗೆಯೂ, ತೊಳಿದು ಬಿಡಲ್ಪಡುವ ಮೈಲಿಗೆಯ ಹಾಗೆಯೂ ಇದ್ದರು. (ಗೋಳಾ. ೩. ೪೫.)

8. ಮೇಲೆ ಹೇಳಿದ ವಚನಗಳಲ್ಲಿ ಅವರ ಸ್ಥಿತಿಯನ್ನೂ ಅಪೊಸ್ತಲರ ಸ್ಥಿತಿಯನ್ನೂ ಹೇಳಿ ತೋರಿಸಿ, ಅವರ ತಪ್ಪುಗಳನ್ನು ತೋರಿಸಿ ಖಂಡಿಸಿ ಇದ್ದದರಿಂದ ಅವರ ಮನಸ್ಸಿಗೆ ವ್ಯಥೆಯಾಗಿ ಹಿಂಜರಿದು ಹೋಗದ ಹಾಗೆ, ತಂದೆಯು ಮಕ್ಕಳ ಬಳಿಯಲ್ಲಿ ಮಾತಾಡುವ ಪ್ರಕಾರ ಅವರ ಬಳಿಯಲ್ಲಿ ಪ್ರೀತಿಯಾಗಿ ಮಾತಾಡುತ್ತಾನೆ. ನನ್ನನ್ನು ಅನುಸರಿಸುವವರಾಗಿರಿ ಎಂಬುವದಕ್ಕೆ ನನ್ನ ಹಾಗೆ ಆಗಿರಿ ಎಂಬ ಅರ್ಥವು. ತಂದೆಯ ಹಾಗೆ ಮಕ್ಕಳು ನಡಿಯ ತಕ್ಕದ್ದೇ.

9. ನೀವು ನನ್ನಂತೆ ಆಗುವದಕ್ಕೆ ನಿಮಗೆ ತಕ್ಕ ಹಾಗೆ ಬೋಧಿಸಲು, ನಿಮಗೂ ನನಗೂ ಸಮ್ಮಂಧವುಳ್ಳವನೂ, ಆ ಸಮ್ಮಂಧಕ್ಕೆ ತಕ್ಕ ಕೆಲಸಗಳನ್ನು ಸರಿಯಾಗಿ ಈಡೇರಿಸುವವನೂ ಆಗಿರುವ ತಿಮೊಥೆಯನನ್ನು ನಿಮ್ಮ ಬಳಿಗೆ ಕಳುಹಿಸಿ ಇದ್ದೇನೆ, ಎಂಬ ತಾತ್ಪರ್ಯವು.

10. ಅಪೊಸ್ತಲನಾದ ಪೌಲನು ಎಲ್ಲಾ ಸಭೆಗಳಲ್ಲಿಯೂ ಒಂದೇ ವಿಧವಾದ ಸತ್ಯೋಪದೇಶಗಳನ್ನು ಬೋಧಿಸಿದನೇ ಹೊರ್ತು, ಕೆಲವರು ಹೇಳಿದ ಪ್ರಕಾರ ಒಂದೊಂದು ಸಭೆಗೆ ಒಂದೊಂದು ವಿಧವಾಗಿ ಬೋಧಿಸಲಿಲ್ಲವೆಂದು ಇದರಿಂದ ಪ್ರತ್ಯಕ್ಷವಾಗಿ ತೋರುತ್ತದೆ.



೧೮,೧೯ ನಾನು [1]ನಿಮ್ಮ ಬಳಿಗೆ ಬರುವದಿಲ್ಲವೆಂದು, ಕೆಲವರು ಉಬ್ಬಿ ಕೊಂಡಿದ್ದಾರೆ. ಆದರೂ ಕರ್ತನ ಚಿತ್ತ
ವಾದರೆ, ಬೇಗ ನಿಮ್ಮ ಬಳಿಗೆ ಬಂದು, ಉಬ್ಬಿ ಕೊಂಡವರ [2]ವಾಕ್ಯವನ್ನಲ್ಲ, ಬಲವನ್ನೇ ತಿಳಿಯುವೆನು.
೨೦,೨೧ ಯಾಕಂದರೆ ದೇವರ ರಾಜ್ಯವು ವಾಕ್ಯದಲ್ಲಿ ಅಲ್ಲ, ಬಲದಲ್ಲಿಯೇ ಅದೆ. ಏನು ಬೇಕು? ಬೆತ್ತದಿಂದ
ನಿಮ್ಮ ಬಳಿಗೆ ಬರಲೋ? ಪ್ರೀತಿಯಿಂದಲೂ ಸಾಧುವಾದ ಆತ್ಮದಿಂದಲೂ ಬರಲೋ?

ಮಹಾ ಪಾಪ ಮಾಡಿದ ಒಬ್ಬನ ಅಪರಾಧವನ್ನು ಖಂಡಿಸಿದ್ದು; ಪ್ರಬಲ ದುರ್ಮಾರ್ಗರನ್ನು ತಳ್ಳುವಂತೆ ಆಜ್ಞಾಪಿಸಿದ್ದು.

5. [3]ನಿಮ್ಮಲ್ಲಿ ಜಾರತ್ವವದೆ ಎಂದು ಸುದ್ದಿ [4]ಬಹಳ ಉಂಟು. ಏನಂದರೆ, ಒಬ್ಬನು ತನ್ನ ತಂದೆಯ [5]ಹೆಂಡತಿ
೨ ಯನ್ನು ಇಟ್ಟು ಕೊಳ್ಳುವದು. ಇಂಥ ಜಾರತ್ವಕ್ಕೆ ಜನಾಂಗಗಳಲ್ಲಿಯೂ ಹೆಸರು ಇಲ್ಲ. ಆದರೆ ನೀವು,
ಇಂಥ ಕೆಲಸ ಮಾಡಿದವನು ನಿಮ್ಮಲ್ಲಿಂದ ತಳ್ಳಲ್ಪಡುವ ಹಾಗೆ, ಎಷ್ಟು ಮಾತ್ರ ದುಃಖ ಪಡದೆ, [6]ಉಬ್ಬಿ ಕೊಂ
ಡವರಾಗಿದ್ದೀರಿ.
೩ ನಾನಾದರೆ, ಶರೀರದಿಂದ ದೂರವಾಗಿ, ಆತ್ಮದಿಂದ ಸಮೀಪವಾಗಿ ಇದ್ದು, ಈಗಲೇ ಸಮೀಪವಾಗಿದ್ದ
೪ ಪ್ರಕಾರ, [7]ಈ ಕೆಲಸ ಹಾಗೆ ಮಾಡಿದವನಿಗೆ ನ್ಯಾಯ ತೀರಿಸಿದ್ದೇನೆ. ನೀವೂ ನನ್ನ ಆತ್ಮವೂ ನಮ್ಮ ಕರ್ತ
೫ ನಾದ ಯೇಸು ಕ್ರಿಸ್ತನ ಬಲದ ಸಂಗಡ ಕೂಡಿ ಬಂದಿರುವಾಗ, ಕರ್ತನಾದ ಯೇಸುವಿನ ದಿವಸದಲ್ಲಿ ಆತ್ಮವು
ರಕ್ಷಿಸಲ್ಪಡುವ ಹಾಗೆ, ಮಾಂಸದ ನಾಶಕ್ಕಾಗಿ ನಮ್ಮ ಕರ್ತನಾದ ಯೇಸು ಕ್ರಿಸ್ತನ ಹೆಸರಿನಲ್ಲಿ ಇಂಥವನನ್ನು
[8]ಸೈತಾನನಿಗೆ ಒಪ್ಪಿಸ ಬೇಕು.

1. ನಾನು ನಿಮ್ಮ ಬಳಿಗೆ ಬರ ಮನಸ್ಸಿಲ್ಲದ್ದರಿಂದ ತಿಮೊಥೆಯನನ್ನು ಕಳುಹಿಸಿದ್ದೇನೆಂದು ಕೆಲವರು ನೆನಸಿ ಕೊಂಡು ಉಬ್ಬಿ ಕೊಳ್ಳುತ್ತಾರೆ. ನಾನು ದೇವರ ಸಹಾಯದಿಂದ ನಿಮ್ಮ ಬಳಿಗೆ ಬರ ನಿಶ್ಚಯಿಸಿ ಕೊಂಡಿದ್ದೇನೆ, ಅನ್ನುತ್ತಾನೆ. ಅವನು ತಾನು ಕೋರಿದ ಪ್ರಕಾರ ಕೊರಿಂಥ್ಯರಿಗೆ ಎರಡನೇ ಪತ್ರಿಕೆಯನ್ನು ಬರೆದ ತರುವಾಯ ಕೆಲವು ದಿವಸಗಳ ಮೇಲೆ ಕೊರಿಂಥಕ್ಕೆ ಹೋದನು. (ಅಪೊ. ಕ್ರಿ. ೨೦. ೧—೪.)

2. ಮನುಷ್ಯನ ಹೃದಯದಲ್ಲಿ ಸ್ಥಾಪಿಸಲ್ಪಟ್ಟಿರುವ ದೇವರ ಆಳಿಕೆಯಾದ ನಿಜ ಭಕ್ತಿಯು ಬಹಳ ಮಾತುಗಳಲ್ಲಿ ಅಲ್ಲ ಸತ್ಕ್ರಿಯೆಗಳುಳ್ಳದ್ದಾಗಿರುವದರಿಂದ, ಗರ್ವಿಷ್ಠರ ಸ್ವಭಾವವನ್ನು ಅವರ ಮಾತುಗಳಿಂದ ಅಲ್ಲ, ದೇವರಿಗೋಸ್ಕರ ಅವರು ಮಾಡುವ ಕ್ರಿಯೆಗಳಿಂದ ತಿಳಿಯುವೆನೆಂದು ಹೇಳುತ್ತಾನೆ. ಕ್ರಿಯೆಗಳಿಲ್ಲದೆ ವ್ಯರ್ಥ ಮಾತುಗಳಾಡುವವರಿಗೆ ಅಪೊಸ್ತಲ ಅಧಿಕಾರ ಹೊಂದಿದವರಿಂದ ದಂಡನೆ ಬರುವದು. ದೇವರಿಗೆ ತಕ್ಕ ಕ್ರಿಯೆಗಳನ್ನು ಮಾಡಿದವರಿಗೆ ಪ್ರೀತಿ ಎಂಬ ಆಶೀರ್ವಾದ ಉಂಟಾಗುವದು.

3. ಕೊರಿಂಥದ ಸಭೆಯಲ್ಲಿದ್ದ ಅಪರಾಧಿಗಳನ್ನು ಖಂಡನೆ ದಂಡನೆಗಳಿಂದ ನಡಿಸುವಂತೆ ತನ್ನ ತೀರ್ಪನ್ನು ಪೌಲನು ಹೇಳಿದ ಮೇಲೆ (೪. ೧೮—೨೧.) ಅವರಲ್ಲಿ ವಾವಿ ತಪ್ಪಿದ ಪಾಪವನ್ನು ಮಾಡಿದ ಒಬ್ಬ ಪ್ರಬಲ ದುಷ್ಟನನ್ನು ಕುರಿತು ಬರೆಯುತ್ತಾನೆ. (೫. ೧.) ಅವರು ಅದನ್ನು ಕುರಿತು ಚಿಂತೆ ಇಲ್ಲದೆ ಇದ್ದದರಿಂದ ಅವರನ್ನು ಖಂಡಿಸಿ, ಆ ಅಪರಾಧಿಯನ್ನು ತಳ್ಳಿ ಬಿಡ ಬೇಕೆಂದು ಆಜ್ಞಾಪಿಸಿ, (೨—೫. ವ.) ಪರಿಶುದ್ಧ ಹಬ್ಬದ ಹಾಗಿರುವ ತಮ್ಮ ಪರಿಶುದ್ಧ ನಡತೆಯನ್ನು ಕೆಡಿಸುವ ಹುಳಿ ಹಿಟ್ಟಾದ ಪಾಪವನ್ನು ಸಂಪೂರ್ಣವಾಗಿ ನಿವರ್ತಿಸ ಬೇಕೆಂದು ಆಜ್ಞಾಪಿಸುತ್ತಾನೆ. (೬—೮. ವ.) ಆದಾಗ್ಯೂ ಹೊರಗಿರುವವರನ್ನು ದೇವರು ನ್ಯಾಯ ತೀರಿಸುವನು. ಆದದರಿಂದ ಸಭೆಯಲ್ಲಿ ದುರ್ಜನರ ಸಹವಾಸ ಇರ ಬಾರದೆಂದು, ತಾನು ಮೇಲೆ ಹೇಳಿದ ಕಟ್ಟಳೆಯಿಂದ, ಲೌಕಿಕ ವಿಷಯಗಳಲ್ಲಿ ಲೋಕದವರ ಸಂಗಡ ಸಹವಾಸ ಮಾಡುವದನ್ನು ತಾನು ಅಭ್ಯಂತರಿಸಿದೆನೆಂದು ಅವರು ಎಣಿಸ ಬಾರದೆಂಬದಾಗಿ ಎಚ್ಚರಿಸುತ್ತಾನೆ. (೯—೧೩. ವ.)

.4 ಕೊರಿಂಥದ ಸಭೆಯ ಸ್ಥಿತಿಯು ಕ್ಲೋವೆಯವರಿಂದ ಪೌಲನಿಗೆ ತಿಳಿದಿದ್ದಾಗ್ಯೂ, ಅವರೊಳಗಿದ್ದ ವ್ಯಭಿಚಾರಪಾಪವು ಎಲ್ಲರಿಗೂ ಪ್ರಕಟವಾಗಿ ತಿಳಿದ ಸಂಗತಿಯಾಗಿತ್ತು.

5. ಇವನು ತನ್ನ ತಂದೆ ಜೀವದಿಂದಿರುವಾಗಲೇ (೨ಕೊರಿ. ೭. ೧೨.) ಅವನ ಹೆಂಡತಿಯನ್ನು ಅಥವಾ ತನ್ನ ಮಲತಾಯಿಯನ್ನು ಇಟ್ಟು ಕೊಂಡ ಮಹಾ ಪಾಪಿಯಾಗಿದ್ದನು. ಸತ್ಯವೇದವನ್ನು ಅರಿಯದ ಅಜ್ಞಾನರಲ್ಲಿ ಸಹ ಇಂಥಾ ವಾವಿ ತಪ್ಪಿದ ಪಾಪವನ್ನು ಕಾಣುವದು ಅರಿದಾಗಿತ್ತು.

6. ಇಂಥಾ ಪಾಪ ಮಾಡಿದವನನ್ನು ಕುರಿತು ಅವರು ದುಃಖ ಪಟ್ಟು, ಅವನನ್ನು ಸಭೆಯಿಂದ ಹೊರಗೆ ತಳ್ಳದೆ ಇದ್ದರು. ಮತ್ತು ತಾವು ಮತ್ತೊಬ್ಬರಿಗಿಂತ ಮೇಲಾದವರೆಂದು ಹೆಚ್ಚಳ ಪಟ್ಟರು. (೬. ವ.)

7. ಶರೀರ ಪ್ರಕಾರ ಪೌಲನು ದೂರವಾಗಿದ್ದರೂ, ಆತ್ಮದ ಪ್ರಕಾರ ಅವರ ಸಂಗಡ ಇರುವವನ ಹಾಗೆ ಕ್ರಿಸ್ತನ ಹೆಸರಿನಿಂದ ಆ ಅಪರಾಧಿಯ ಮೇಲೆ ತೀರ್ಪು ಹೇಳಿ, ಅವನನ್ನು ಸೈತಾನನಿಗೆ ಒಪ್ಪಿಸುತ್ತಾನೆ.

8. ಸಭೆಯು ಪರಿಶುದ್ಧಾತ್ಮನ ಆಳಿಕೆಯೊಳಗೆ ಇರುವದಾಗಿಯೂ, ಲೋಕವು ಅಶುದ್ಧಾತ್ಮವಾದ ಪಿಶಾಚನ ಆಳಿಕೆಯೊಳಗಿರುವದಾಗಿಯೂ ಇರುವದರಿಂದ ಸಭೆಗೆ ಹೊರಗಾದವನು ಸೈತಾನನ ಆಳಿಕೆಗೆ ಶೇರುತ್ತಾನೆ. ಸಭೆಯ ಹೆಸರಿನಿಂದಲೂ ಅಪೊಸ್ತಲನ ಅಧಿಕಾರದಿಂದಲೂ, ಕ್ರಿಸ್ತನ ಬಲದಿಂದಲೂ ಹೀಗೆ ಶಪಿಸಲ್ಪಟ್ಟವನಿಗೆ ದೈವಯತ್ನದಿಂದ ಶರೀರದಲ್ಲಿ ಏನಾದರೊಂದು ವಿಶೇಷ ವ್ಯಾಧಿ ಸಂಭವಿಸಿರುವದು. ಅದರಿಂದ ಪುಠದಿಂದ ಚಿನ್ನದ ಕಲ್ಮಷ ಹೋಗಿ ಶುದ್ಧವಾಗುವ ಪ್ರಕಾರ, ಅವನ ಶರೀರದ ದುರಿಚ್ಛೆಗಳು ನಾಶ

೬ ನಿಮ್ಮ ಹೆಚ್ಚಳ ಒಳ್ಳೇದಲ್ಲ; ಸ್ವಲ್ಪ ಹುಳಿ [1]ಮುದ್ದೆಯನ್ನೆಲ್ಲಾ ಹುಳಿ ಮಾಡುವದೆಂದು ಅರಿಯರಾ?
೭ ಆದ ಕಾರಣ, ನೀವು [2]ಹುಳಿ ಇಲ್ಲದವರಾಗಿರುವ ಪ್ರಕಾರ, ಹೊಸ ಮುದ್ದೆ ಆಗುವದಕ್ಕೆ ಹಳೇ ಹುಳಿಯನ್ನು
ತೆಗೆದು ಹಾಕಿರಿ. ಯಾಕಂದರೆ [3]ಕ್ರಿಸ್ತನಾಗಿರುವ ನಮ್ಮ ಪಸ್ಕವು ನಮಗೋಸ್ಕರ ಕಡಿಯಲ್ಪಟ್ಟದೆ.
೮ ಆದದರಿಂದ ಹಳೇ ಹುಳಿಯಿಂದಲಾದರೂ, ದುರ್ಮಾರ್ಗತನವೂ ಕೆಟ್ಟತನವೂ ಎಂಬ ಹುಳಿಯಿಂದಲಾದರೂ
ಅಲ್ಲ, ನಿಷ್ಕಪಟವೂ ಸತ್ಯವೂ ಎಂಬ ಹುಳಿಯಿಲ್ಲದವುಗಳಿಂದ ಹಬ್ಬವನ್ನು ಆಚರಿಸುವ.
೯,೧೦ ಜಾರರ ಸಂಗಡ ಕೂಡಿ ಕೊಳ್ಳ ಬೇಡಿರೆಂದು [4]ನಿಮಗೆ ಪತ್ರಿಕೆಯಲ್ಲಿ ಬರೆದಿದ್ದೇನೆ. ಆದರೆ [5]ಪೂರ್ಣವಾಗಿ
ಈ ಲೋಕದ ಜಾರರ ಸಂಗಡಲಾದರೂ, ಲೋಭಿಗಳ ಸಂಗಡಲಾದರೂ, ಕೊಳ್ಳೆಗಾರರ ಸಂಗಡಲಾದರೂ,
ವಿಗ್ರಹಾರಾಧಕರ ಸಂಗಡಲಾದರೂ, ಅಂತಲ್ಲ. ಹೀಗಿದ್ದರೆ, ನೀವು ಲೋಕದಿಂದ ಹೊರಟು ಹೋಗ ಬೇಕಾ
೧೧ ಗುವದು. ಆದರೆ ಈಗ, ಸಹೋದರನೆಂದು ಕರೆಯಲ್ಪಡುವವನೊಬ್ಬನು ಜಾರನಾದರೂ, ಲೋಭಿಯಾ
ದರೂ, ವಿಗ್ರಹಾರಾಧಕನಾದರೂ, ಬೈಯುವವನಾದರೂ, ಮದ್ಯಪಾನಿಯಾದರೂ, ಕೊಳ್ಳೆಗಾರನಾದರೂ,
ಆಗಿದ್ದರೆ, ಕೂಡಿ ಕೊಳ್ಳಲೂ, ಇಂಥವನ ಸಂಗಡ ಭೋಜಿಸಲೂ, ಬೇಡಿರೆಂದು ನಿಮಗೆ ಬರೆದಿದ್ದೇನೆ.
೧೨ ಯಾಕಂದರೆ [6]ಹೊರಗಿನವರಿಗೂ ನ್ಯಾಯ ತೀರಿಸುವದು ನನಗೇನು? ಒಳಗಿನವರಿಗೆ ನೀವು ನ್ಯಾಯ ತೀರಿಸು
೧೩ ತ್ತೀರಲ್ಲವೋ? ಹೊರಗಿನವರಿಗೆ ದೇವರು ನ್ಯಾಯ ತೀರಿಸುತ್ತಾನೆ. ಹಾಗಾದರೆ ಆ ದುರ್ಮಾರ್ಗನನ್ನು
ನಿಮ್ಮೊಳಗಿಂದ ತಳ್ಳಿ ಬಿಡಿರಿ.

ವಾಗಿ, ಅವನ ಆತ್ಮ ಶುದ್ಧವಾಗಿ ಮೋಕ್ಷಕ್ಕೆ ತಕ್ಕವನಾಗಿರ ಬಹುದು. (೧ತಿಮೊ. ೧. ೨೦. ಅಪೊ. ಕ್ರಿ. ೫. ೧—೧೦.) ಅಪೊಸ್ತಲರ ಕಾಲದಲ್ಲಿ ಸಭೆಯಲ್ಲಿ ನಡೆಯುತ್ತಿದ್ದ ದಂಡನೆಗಳಿಂದ ಇಂಥಾ ಮೇಲುಗಳುಂಟಾದವೆಂದು ತೋರುತ್ತದೆ.

1. ಇದು ಆ ಕಾಲದಲ್ಲಿ ಬಳಿಕೆಯಾಗಿದ್ದ ಒಂದು ಗಾದೆಯಾಗಿರುವದು. (ಗಲಾ. ೫. ೯. ಮತ್ತಾ. ೧೩. ೩೩.) ಒಳ್ಳೇದರ ಹಾಗೆಯೇ ಕೆಟ್ಟದ್ದು ಸಹ ಎಲ್ಲೆಲ್ಲಿಯೂ ವ್ಯಾಪಿಸುವದೆಂದು ಇದರಿಂದ ತಿಳಿಯ ತಕ್ಕದ್ದು. ಇದು ೧ಕೊರಿ. ೧೫. ೩೩ನೇ ವಚನದ ತಾತ್ಪರ್ಯಕ್ಕೆ ಸರಿಯಾಗಿದೆ. ಒಬ್ಬ ಪಾಪಿಯು ಬಹಳ ಮೇಲನ್ನು ನಾಶನ ಮಾಡುವ ಪ್ರಕಾರ (ಪ್ರಸಂಗಿ. ೯. ೧೮.) ಸ್ವಲ್ಪ ಹುಳಿ ಹಿಟ್ಟನಂತಾದ ಒಂದು ಪಾಪವು ಬಹಳ ಕೇಡನ್ನು ಹುಟ್ಟಿಸುವದು.

2. ನಾವು ಪಾಪವೆಂಬ ಹುಳಿ ಇಲ್ಲದವರೆಂದು ಅನ್ನುವದು ಸಾಲದು. ಹುಳಿ ಇಲ್ಲದವರಾಗಿ ನಡಿಯ ತಕ್ಕದ್ದು. ಯೆಹೂದ್ಯರು ಪಸ್ಕ ಹಬ್ಬದಲ್ಲಿ ತಮ್ಮ ಮನೆಗಳಲ್ಲಿ ಹುಳಿ ಹಿಟ್ಟನ್ನು ತೆಗೆದು ಹಾಕುವ ವಾಡಿಕೆಯನ್ನು ಇಲ್ಲಿ ಉಪಮಾನವಾಗಿ ತೋರಿಸಿ ಇದೆ. (ಹೊರ. ೧೨. ೧೫.) ಪಸ್ಕ ಹಬ್ಬವು ಸಮೀಪವಾಗಿದ್ದ ಕಾಲದಲ್ಲಿ ಈ ಪತ್ರಿಕೆ ಬರೆಯಲ್ಪಟ್ಟಿತೆಂದೂ (೧೬. ೮.) ಅದರಿಂದ ಪೌಲನು ಈ ದೃಷ್ಟಾಂತವನ್ನು ಹೇಳುತ್ತಾನೆಂದೂ ಕೆಲವರು ನೆನಸುತ್ತಾರೆ.

3. ಮುಂಚಿನ ವಚನದಲ್ಲಿ ಹೇಳಿದ ಕಟ್ಟಳೆಗೆ ಈ ವಚನದಲ್ಲಿ ಒಂದು ಮುಖ್ಯ ಕಾರಣ ಹೇಳಿ ಅದೆ. ದುರ್ಮಾರ್ಗರಿಗೆ ಬರುವ ದಂಡನೆಗೆ ನಮ್ಮನ್ನು ತಪ್ಪಿಸುವದಕ್ಕೆ ಕ್ರಿಸ್ತನು ಪಸ್ಕದ ಕುರಿಮರಿಯ ಹಾಗೆ ಹೊಡೆಯಲ್ಪಟ್ಟನು. (ಹೊರ. ೧೨. ಸಂಧಿ. ಯೋಹಾ. ೧. ೨೯. ವಚನದ ವ್ಯಾಖ್ಯಾನ ನೋಡ ಬೇಕು.) ಆದದರಿಂದ ಆತನ ಭಕ್ತರು ಪಾಪವೆಂಬ ಹುಳಿ ಹಿಟ್ಟನ್ನು ತೆಗೆದು ಹಾಕಿ, ಮನೋವಾಕ್ಕಾಯವಾದ ತ್ರಿಕರಣ ಶುದ್ಧಿಯುಳ್ಳವರಾಗಿ ನಡೆದು, ಈ ಪರಿಶುದ್ಧ ಹಬ್ಬವನ್ನು ಎಂದೂ ಆಚರಿಸ ಬೇಕು. ಜೀವದ ರೊಟ್ಟಿಯಾದ ಈ ಆತ್ಮಾಹಾರವನ್ನು ಭೋಜಿಸಿ ಹಬ್ಬವಾಚರಿಸುವವರು ಒಳಗೂ ಹೊರಗೂ ಪರಿಶುದ್ಧರಾಗಿ ಪ್ರಕಾಶಿಸ ಬೇಕು.

4. ಪತ್ರಿಕೆ ಎಂಬುವದಕ್ಕೆ ಮೂಲಭಾಷೆಯಲ್ಲಿ ಈ ಪತ್ರಿಕೆ ಎಂದು ಒಂದು ವಿಶೇಷವಾದ ಪತ್ರಿಕೆಯನ್ನು ಸೂಚಿಸುತ್ತದೆ. ಪತ್ರಿಕೆ ಎಂಬುವದು ಈ ಪತ್ರಿಕೆಯ ಮೊದಲನೇ ಭಾಗವನ್ನಾದರೂ, ಇದಕ್ಕೆ ಮುಂಚೆ ಬರಿಯಲ್ಪಟ್ಟ ಬೇರೆ ಪತ್ರಿಕೆಯನ್ನಾದರೂ ಸೂಚಿಸುತ್ತದೆ. ಆ ಪತ್ರಿಕೆ ಈಗ ಇಲ್ಲ. ಅದು ಇಲ್ಲದ್ದರಿಂದ ದೋಷವೇನೂ ಇಲ್ಲ. ಅಪೊಸ್ತಲರ ಪ್ರಸಂಗಗಳೂ ಸಂಭಾಷಣೆಗಳೂ ಅನೇಕವು ಇಲ್ಲದಿರುವ ಪ್ರಕಾರ ಪತ್ರಿಕೆಗಳಲ್ಲಿ ಒಂದೆರಡು ಇಲ್ಲದಿದ್ದರೂ ಕೊರತೆ ಇಲ್ಲ.

5. ಲೌಕಿಕ ವಿಷಯಗಳಲ್ಲಿ ಒಂದಾನೊಂದು ವೇಳೆ ದುರ್ಮಾರ್ಗರ ಸಂಗಡ ಸನ್ಮಾರ್ಗರು ಕಲೆತು ಸಹವಾಸ ಮಾಡ ಬೇಕಾಗಿರುವದರಿಂದ ಅದನ್ನು ಕುರಿತು ಪೌಲನು ಬರೆಯದೆ ಅವರ ಸಂಗಡ ಅನ್ಯೋನ್ಯ ಐಕ್ಯವಾಗಿರ ಕೂಡದೆಂದು ಮಾತ್ರ ಬರೆದನು. (೧೧. ವ.)

6. ಕ್ರಿಸ್ತನ ಹೆಸರನ್ನು ಧರಿಸಿ ಕೊಂಡಿರುವ ಭಕ್ತರನ್ನು ಯಾವ ಪ್ರಕಾರ ನಡಿಸ ಬೇಕೆಂಬುವದನ್ನು ಮಾತ್ರ ಇದರಲ್ಲಿ ಹೇಳಿ ಇದೆ. ಸಭೆಗೆ ಹೊರಗಿರುವ ಭಕ್ತಿಹೀನರ ಸಂಗತಿಗಳನ್ನು ತೀರಿಸುವದು ನಮ್ಮ ಕೆಲಸವಲ್ಲ; ಅದು ದೇವರ ಕೆಲಸ. ಸಭೆಯೊಳಗಿರುವವರನ್ನು ಕುರಿತು ತೀರ್ಪು ಮಾಡುವದು ನಮ್ಮ ಕೆಲಸವಾಗಿರುತ್ತದೆ. ಆದದರಿಂದ ಪರಿಶುದ್ಧರಿರುವ ಸಭೆಯಿಂದ ಅಶುದ್ಧವಾದ ಪಾಪ ಮಾಡಿದ ಪಾತಕನನ್ನು ಹುಳಿ ಹಿಟ್ಟನಂತೆ ನಿವರ್ತಿ ಮಾಡ ಬೇಕೆಂದು ಹೇಳುತ್ತಾನೆ.



ಅಜ್ಞಾನರಾದ ನ್ಯಾಯಾಧಿಪತಿಗಳ ಮುಂದೆ ಕ್ರೈಸ್ತರು ವ್ಯಾಜ್ಯವಾಡುವದು; ಬೇರೆ ಪಾಪಗಳ ಹಾಗೆಯೇ ಅನೀತಿ ಎಂಬ ಪಾಪದಿಂದಲೂ ಪರಮ ಗತಿಯನ್ನು ಕಳಕೊಳ್ಳುವದು.

6. [1]ಮತ್ತೊಬ್ಬನ ಮೇಲೆ ವ್ಯವಹಾರವಿದ್ದರೆ, ಪರಿಶುದ್ಧರ ಮುಂದೆ ಅಲ್ಲ, [2]ಅನೀತಿವಂತರ ಮುಂದೆ ವ್ಯಾಜ್ಯ
೨ ವಾಡುವದಕ್ಕೆ, ನಿಮ್ಮಲ್ಲಿ ಯಾವನಿಗಾದರೂ ಧೈರ್ಯ ಉಂಟೋ? ಪರಿಶುದ್ಧರು [3]ಲೋಕಕ್ಕೆ ನ್ಯಾಯ
ತೀರಿಸುವರೆಂದು ಅರಿಯರಾ? ಹೀಗಿರಲಾಗಿ, ನಿಮ್ಮಿಂದ ಲೋಕಕ್ಕೆ ನ್ಯಾಯ ತೀರಿಸಲ್ಪಟ್ಟರೆ, ಬಹು ಅಲ್ಪ
೩ ವಾದ ತೀರ್ಪುಗಳಿಗೆ ಅಯೋಗ್ಯರಾಗಿದ್ದೀರೋ? ದೂತರಿಗೆ ನ್ಯಾಯ ತೀರಿಸುವೆವೆಂದು ಅರಿಯರಾ?
೪ ಈ ಜೀವದವುಗಳನ್ನು ತೀರಿಸಲಾಗದೋ? ಹೀಗಿರುವದರಿಂದ ಈ ಜೀವದ ವ್ಯಾಜ್ಯಗಳು ನಿಮಗೆ ಇದ್ದರೆ,
೫ ಸಭೆಯಲ್ಲಿ ಅಸಡ್ಡೆ ಮಾಡಲ್ಪಟ್ಟವರನ್ನೇ ಕುಳ್ಳಿರಿಸಿರಿ. ನಿಮ್ಮನ್ನು [4]ನಾಚಿಸುವದಕ್ಕೆ ಹೇಳುತ್ತೇನೆ. ಹಾಗೋ?
ತನ್ನ ಸಹೋದರರಲ್ಲಿ ನ್ಯಾಯ ತೀರಿಸ ಸಾಮರ್ಥ್ಯವುಳ್ಳ ಬುದ್ಧಿವಂತನು ನಿಮ್ಮಲ್ಲಿ ಒಬ್ಬನಾದರೂ ಇಲ್ಲವೋ?
೬ ಆದರೆ ಸಹೋದರನು ಸಹೋದರನ ಸಂಗಡ, ಅವಿಶ್ವಾಸಿಗಳ ಮುಂದೆ ಸಹ, ವ್ಯಾಜ್ಯವಾಡುತ್ತಾನೆ.
೭ ಈಗ [5]ಒಬ್ಬರ ಸಂಗಡಲೊಬ್ಬರಿಗೆ ವ್ಯಾಜ್ಯಗಳು ಇರುವದು ನಿಮಗೆ ಶುದ್ಧ ತಪ್ಪಾಯಿತು. ಅದಕ್ಕಿಂತ
೮ [6]ಅನ್ಯಾಯ ಪಡುವದು ಒಳ್ಳೇದಲ್ಲವೋ? ಅದಕ್ಕಿಂತ ಅಪಹಾರ ಪಡುವದು ಒಳ್ಳೇದಲ್ಲವೋ? ಆದರೆ ನೀವೇ
ಅನ್ಯಾಯ ಮಾಡುತ್ತೀರಿ, ಅಪಹರಿಸುತ್ತೀರಿ; ಸಹೋದರರಿಗೆ ಸಹ ಹೀಗೆ ಮಾಡುತ್ತೀರಿ.
೯ ಏನು! [7]ಅನ್ಯಾಯಸ್ಥರು ದೇವರ ರಾಜ್ಯವನ್ನು ಬಾಧ್ಯವಾಗಿ ಹೊಂದುವದಿಲ್ಲವೆಂದು ಅರಿಯರಾ? ಮೋಸ
ಹೋಗ ಬೇಡಿರಿ; ಜಾರರಾದರೂ, ವಿಗ್ರಹಾರಾಧಕರಾದರೂ, ವ್ಯಭಿಚಾರಿಗಳಾದರೂ, ಪುರುಷಸಂಗಮ
೧೦ ಪಡುವವರಾದರೂ, ಮಾಡುವವರಾದರೂ, ಕಳ್ಳರಾದರೂ, [8]ಲೋಭಿಗಳಾದರೂ, ಮದ್ಯಪಾನಿಗಳಾದರೂ,

1. ಸಭೆಗೂ ಲೋಕಕ್ಕೂ ಇರುವ ವ್ಯತ್ಯಾಸವನ್ನು ೫ನೇ ಸಂಧಿಯ ಕಡೆಯಲ್ಲಿ ತೋರಿಸಿ, ತರುವಾಯ ಪೌಲನು ಲೋಕಕ್ಕೂ ದೇವದೂತರಿಗೂ ತೀರ್ಪು ಹೇಳ ತಕ್ಕ ಸಭೆಯವರ ಬಳಿಯಲ್ಲಿ ತಮ್ಮ ವ್ಯಾಜ್ಯ ಹೇಳಿ ಕೊಳ್ಳದೆ, ಲೋಕದ ನ್ಯಾಯಾಧಿಪತಿಗಳ ಬಳಿಗೆ ಹೋಗುವದು ಸರಿ ಅಲ್ಲ, ಅನ್ನುತ್ತಾನೆ. (೬. ೧—೬.) ದೇವಭಕ್ತರಿಗೆ ಸ್ವಲ್ಪವಾದರೂ ಸರಿ ಬೀಳದಂಥ, ಸ್ವಪ್ರಯೋಜನವನ್ನು ಆಶಿಸುವ ಪಾಪವು ಅವರೊಳಗಿದ್ದದ್ದೇ ಅದಕ್ಕೆ ಕಾರಣವೆಂದು ಹೇಳಿ, (೬—೧೧. ವ.) ಕ್ರಿಸ್ತನ ಮಾರ್ಗವು ಬೋಧಿಸುವ ಸ್ವಾಧೀನವನ್ನು ಘನಹೀನ ಪಡಿಸಿ, ದೇವರ ಮಂದಿರವಾಗಿರುವ ಶರೀರವನ್ನು ಅಶುದ್ಧವಾದ ಪಾಪದಿಂದ ಅಪವಿತ್ರ ಮಾಡುವದು ಮಹಾ ಅಕ್ರಮವೆಂದು ಹೇಳುತ್ತಾನೆ. (೧೨—೨೦. ವ.)

2. ತಮ್ಮ ವ್ಯಾಜ್ಯಗಳನ್ನು ಸಭೆಯಲ್ಲಿರುವ ಪರಿಶುದ್ಧ ಸಹೋದರರಿಗೆ ಹೇಳಿ ಕೊಳ್ಳದೆ, ಅಗಾಗ್ಯೆ ಅನೀತಿವಂತರಾದ ಅಜ್ಞಾನ ನ್ಯಾಯಾಧಿಪತಿಗಳಿಗೆ ಹೇಳಿ ಕೊಳ್ಳುವದು ಕ್ರೈಸ್ತರ ಲಕ್ಷಣಕ್ಕೆ ವಿರೋಧವಾದ ಅಪರಾಧವಾಗುತ್ತದೆ. (೨. ವ.) ಇದು ದೇವದೂತರಿಗೂ ಅಧಿಕಾರಗಳಿಗೂ ಬಲಗಳಿಗೂ ಸರ್ವಾಧಿಪತಿಯಾದ ಕ್ರಿಸ್ತನ ಸ್ವಭಾವಕ್ಕೂ ಕಟ್ಟಳೆಗೂ ಸರಿ ಬೀಳದಂಥ ಪಾಪವು. (೩. ವ. ೧ ಪೇತ್ರ. ೩. ೨೨.)

3. ಕ್ರಿಸ್ತನೇ ಸರ್ವಲೋಕದ ನ್ಯಾಯಾಧಿಪತಿಯಾಗಿದ್ದಾನೆ; ಆತನ ದಾಸರು ಸಿಂಹಾಸನದಲ್ಲಿ ಕುಳಿತಿರುವ ಆತನ ಸಂಗಡ ಇದ್ದು, ದುಷ್ಟ ಮನುಷ್ಯರಿಗೂ ದೂತರಿಗೂ ನ್ಯಾಯ ತೀರಿಸುವರು. (೩. ವ. ಪ್ರಕಟ. ೪. ೪.) ಹೀಗಿರುವದರಿಂದ ಸಭೆಯಲ್ಲಿ ಚಿಕ್ಕ ಅಂತಸ್ತುಳ್ಳವರು (೪. ವ.) ತಮ್ಮೊಳಗಿರುವ ಅಲ್ಪ ವ್ಯಾಜ್ಯಗಳನ್ನು ಸುಲಭವಾಗಿ ತೀರಿಸ ಬಹುದು.

4. ಸಭೆಯಲ್ಲಿರುವ ಸಹೋದರರೊಳಗೆ ಸಂಭವಿಸುವ ವ್ಯಾಜ್ಯಗಳನ್ನು ತೀರಿಸುವದಕ್ಕೆ ಅವರಲ್ಲಿ ಒಬ್ಬನಾದರೂ ಇಲ್ಲದೆ ಇದ್ದದ್ದು ಅವರಿಗೆ ಮಾನವನ್ನಲ್ಲ, ನಾಚಿಕೆಯನ್ನು ಉಂಟು ಮಾಡ ತಕ್ಕದ್ದೇ. (೧೫. ೩೪.)

5. ಕ್ರೈಸ್ತರಲ್ಲಿ ಒಬ್ಬರಿಗೊಬ್ಬರು ವಿರೋಧವಾಗಿ ವ್ಯಾಜ್ಯವಾಡುವದೇ ದೊಡ್ಡ ತಪ್ಪು. ಅವರು ಸ್ವಂತ ಲಾಭ ಹುಡುಕುವವರಾಗಿಯೂ ಅನೀತಿಯುಳ್ಳವರಾಗಿಯೂ ಇದ್ದದ್ದೇ ಅದಕ್ಕೆ ಕಾರಣವಾಗಿತ್ತು. ದೇವರ ರಾಜ್ಯದಲ್ಲಿ ಪ್ರವೇಶಿಸುವದಕ್ಕೆ ತಡೆಯಾಗಿರುವ ಪಾಪಗಳ ಲೆಖ್ಖದಲ್ಲಿ ಇವುಗಳನ್ನು ಸಹ ಶೇರಿಸ ಬಹುದು. (೯ನೇ ೧೦ನೇ ವಚನ. ೫. ೧೧.)

6. ಕರ್ತನ ಕಟ್ಟಳೆಯ ಪ್ರಕಾರ ಅನ್ಯಾಯವನ್ನು ಸಹಿಸಿ ಕೊಳ್ಳುವದೇ ಉತ್ತಮ. (ಮತ್ತಾ. ೫. ೩೮—೪೦.) ಹಾಗೆ ಸಹಿಸಿ ಕೊಳ್ಳ ಮನಸ್ಸಿಲ್ಲದವರು ಸಭೆಯ ಮುಖ್ಯಸ್ಥರಿಗೆ ಹೇಳಿ ಕೊಳ್ಳ ಬೇಕೇ ಹೊರ್ತು, ಲೋಕದ ನ್ಯಾಯಾಧಿಪತಿಗಳ ಬಳಿಯಲ್ಲಿ ಹೇಳ ಕೂಡದು.

7. ಅವರೊಳಗೆ ಅನ್ಯಾಯವನ್ನು ತಾಳಿ ಕೊಳ್ಳುವ ಸದ್ಗುಣವು ಇಲ್ಲದೆ ಇತ್ತು. ಮತ್ತು ಸಹೋದರರಿಗೆ ಅನ್ಯಾಯ ಮಾಡುವ ದುರ್ಗುಣವು ಇತ್ತು. ಅಶುದ್ಧವಾದದ್ದು ಯಾವದಾದರೂ ದೇವರ ರಾಜ್ಯದಲ್ಲಿ ಪ್ರವೇಶಿಸ ಕೂಡದು. ಆದದರಿಂದ ಅನ್ಯಾಯವಂತರು ದೇವರ ರಾಜ್ಯವನ್ನು ಸ್ವತಂತ್ರಿಸಿ ಕೊಳ್ಳುವದು ಅಸಾಧ್ಯವಾಗಿದೆ.

8. ಲೋಭಿಗಳು ಅಂದರೆ, ಸತ್ಕಾರ್ಯಗಳಿಗೂ, ಕುಟುಂಬ ಸಂರಕ್ಷಣೆಗೂ, ತಕ್ಕ ಹಾಗೆ ವ್ರಯ ಮಾಡದೆ, ದ್ರವ್ಯದ ಮೇಲೆ ಅತ್ಯಾಶೆಯುಳ್ಳವರಾಗಿ ಅದನ್ನು ಸಂಪಾದಿಸಿ ಕೂಡಿಸಿ ಇಡುವದರಲ್ಲಿ ಬಹಳ ಚಿಂತೆ ಪಡುವವರು. ಇಂಥವರನ್ನು ಅಪೊಸ್ತಲನು ಮಹಾ ಪಾತಕರ ಸಂಗಡ ಗಣನೆ ಮಾಡುತ್ತಾನೆ. (೫. ೧೦, ೧೧. ಕೊಲೊ. ೩. ೫.)

೧೧ ಬೈಯುವವರಾದರೂ, ಕೊಳ್ಳೆಗಾರರಾದರೂ, ದೇವರ ರಾಜ್ಯವನ್ನು ಬಾಧ್ಯವಾಗಿ ಹೊಂದರು. ಮತ್ತು
ಕೆಲವರು ಇಂಥವರಾಗಿದ್ದಿರಿ; ಆದರೆ [1]ತೊಳೆಯಲ್ಪಟ್ಟಿದ್ಧೀರಿ; ಆದರೆ ಪರಿಶುದ್ಧ ಮಾಡಲ್ಪಟ್ಟಿದ್ಧೀರಿ; ಆದರೆ
ನೀತಿನಿರ್ಣಯ ಪಟ್ಟಿದ್ಧೀರಿ; ಕರ್ತನಾದ ಯೇಸುವಿನ ನಾಮದಿಂದಲೂ ನಮ್ಮ ದೇವರ ಆತ್ಮದಿಂದಲೂ ತಾನೇ.

ಕ್ರಿಸ್ತಮಾರ್ಗದ ಸ್ವಾಧೀನವನ್ನು ಅಲಕ್ಷ್ಯ ಮಾಡಿ ನಡಿಯುವದನ್ನು ಖಂಡಿಸಿದ್ದು.

೧೨ [2]ಎಲ್ಲಕ್ಕೂ ನನಗೆ ಅಧಿಕಾರ ಉಂಟು; ಆದರೆ ಎಲ್ಲಾ ಪ್ರಯೋಜನವಾಗುವದಿಲ್ಲ. ಎಲ್ಲಕ್ಕೂ ನನಗೆ ಅಧಿ
೧೩ ಕಾರ ಉಂಟು; ಆದರೆ ನಾನು ಒಂದಕ್ಕಾದರೂ [3]ಅಧೀನವಾಗೆನು. ಆಹಾರಗಳು ಹೊಟ್ಟೆಗೆ, ಹೊಟ್ಟೆಯು
ಆಹಾರಗಳಿಗೆ. ಆದರೆ ದೇವರು ಅದನ್ನೂ ಅವುಗಳನ್ನೂ ಲಯ ಮಾಡುವನು. ಮತ್ತು ಶರೀರವು [4]ಜಾರತ್ವ
೧೪ ಕ್ಕಲ್ಲ, ಕರ್ತನಿಗೆ; ಮತ್ತು ಕರ್ತನು ಶರೀರಕ್ಕೆ. ಇದಲ್ಲದೆ ದೇವರು ಕರ್ತನನ್ನು ಎಬ್ಬಿಸಿದನು; ನಮ್ಮನ್ನು
೧೫ ಸಹ ತನ್ನ ಬಲದಿಂದ ಎಬ್ಬಿಸುವನು. ನಿಮ್ಮ ಶರೀರಗಳು ಕ್ರಿಸ್ತನ ಅಂಗಗಳಾಗಿವೆ ಎಂದು, ಅರಿಯರಾ? ಹೀಗಿ
ರಲಾಗಿ, ಕ್ರಿಸ್ತನ ಅಂಗಗಳನ್ನು ತೆಗೆದು ಕೊಂಡು, ಜಾರೆಯ ಅಂಗಗಳಾಗ ಮಾಡಲೋ? ಆಗದು.
೧೬ ಏನು! ಜಾರೆಯ ಸಂಗಡ ಕೂಡುವವನು ಒಂದೇ ಶರೀರವಾಗಿದ್ದಾನೆಂದು, ಅರಿಯರಾ? ಯಾಕಂದರೆ ಅವ
೧೭ ರಿಬ್ಬರು ಒಂದೇ ಮಾಂಸವಾಗಿರುವರೆಂದು ಹೇಳುತ್ತಾನೆ. (ಉತ್ಪ. ೨. ೨೪.) ಆದರೆ ಕರ್ತನ ಸಂಗಡ
೧೮ ಕೂಡುವವನು [5]ಒಂದೇ ಆತ್ಮವಾಗಿದ್ದಾನೆ. ಜಾರತ್ವ ಬಿಟ್ಟು ಓಡಿ ಹೋಗಿರಿ. ಮನುಷ್ಯನು ಮಾಡುವ
ಎಲ್ಲಾ ಪಾಪವು ಶರೀರಕ್ಕೆ ಹೊರಗಾಗಿದೆ; ಆದರೆ ಜಾರತ್ವ ಮಾಡುವವನು ತನ್ನ ಶರೀರಕ್ಕೆ ಪಾಪ ಮಾಡುತ್ತಾನೆ.
೧೯ ಏನು! [6]ನಿಮ್ಮ ಶರೀರವು ದೇವರಿಂದುಂಟಾದ ನಿಮ್ಮೊಳಗಿರುವ ಪರಿಶುದ್ಧಾತ್ಮದ ಮಂದಿರವಾಗಿದೆ ಎಂದೂ,

1. ಮೇಲೆ ಹೇಳಿದ ಅಶುದ್ಧತ್ವಗಳು ನಿವರ್ತಿಯಾಗುವಂತೆ ತೊಳೆಯಲ್ಪಟ್ಟವರೇ ಕ್ರೈಸ್ತರು. ಅವರು ಪರಿಶುದ್ಧಾತ್ಮನಿಂದ ಪರಿಶುದ್ಧ ಮಾಡಲ್ಪಟ್ಟವರು. (ತೀತ. ೩. ೫, ೬.) ಕ್ರಿಸ್ತನ ಹೆಸರಿನಿಂದ ಜೀವವನ್ನು ಹೊಂದುವ ಹಾಗೆ, ಅವರು ಭಕ್ತಿವಿಶ್ವಾಸದಿಂದ ಆತನನ್ನು ಹೊಂದಿ ಕೊಂಡಾಗ ಪರಿಶುದ್ಧ ಮಾಡಲ್ಪಟ್ಟರು. (ಯೋಹಾ. ೨೦. ೩೧.) ಕ್ರಿಸ್ತನ ಪರಿಶುದ್ಧ ರಕ್ತವಾದ ಪುಣ್ಯತೀರ್ಥದಿಂದ ತೊಳೆಯಲ್ಪಟ್ಟು, ಆತನ ಆತ್ಮನಿಂದ ಪರಿಶುದ್ಧರಾದವರು. ಅಶುದ್ಧವಾದಂಥ, ದೇವರಿಗೆ ಅಸಹ್ಯವಾದಂಥ ಪಾಪಗಳನ್ನು ಮಾಡಿದರೆ, ದೇವರ ರಾಜ್ಯದಲ್ಲಿ ಶೇರ ಕೂಡದು.

2. ಎಲ್ಲಕ್ಕೂ ನನಗೆ ಅಧಿಕಾರ ಉಂಟು, ಎಂಬ ಮಾತು ಎದಿರಿಯ ಮಾತಾಗಿರ ಬಹುದು. ಇಲ್ಲದಿದ್ದರೆ, ಕ್ರಿಸ್ತನ ಮಾರ್ಗದ ಸ್ವಾಧೀನದ ಪ್ರಕಾರ ದೇವರ ವರಗಳನ್ನೆಲ್ಲಾ ಹೊಂದಿ ಅನುಭವಿಸುತ್ತೇನೆಂದು ಪೌಲನು ಹೇಳುವ ನ್ಯಾಯವಾಗಿರ ಬಹುದು. (೧೦. ೨೩.) ಈ ಸ್ವಾಧೀನವನ್ನು ಕೊರಿಂಥದ ಸಭೆಯವರಲ್ಲಿ ಕೆಲವರು ಅಲಕ್ಷ್ಯ ಮಾಡಿ, ತಮ್ಮ ಶರೀರದ ಇಚ್ಛೆಗಳ ಪ್ರಕಾರ ಧಾರಾಳವಾಗಿ ನಡಿಯುತ್ತಾ ಬಂದರು. ಅದರಿಂದ ಪೌಲನು ಇಂಥಾ ಶ್ಲಾಘ್ಯವು ಕ್ರೈಸ್ತರಿಗೆ ಉಂಟಾಗಿದ್ದಾಗ್ಯೂ, ಅದನ್ನು ತಕ್ಕವುಗಳಲ್ಲಿಯೂ ಗೌರವವಾದ ವಿಷಯಗಳಲ್ಲಿಯೂ ಉಪಯೋಗಿಸ ತಕ್ಕದ್ದೇ ಹೊರ್ತು, ಪಾಪದ ಕೆಲಸಗಳಿಗೆ ಉಪಯೋಗಿಸ ಕೂಡದೆಂದು ಹೇಳುತ್ತಾನೆ. ತಕ್ಕವುಗಳು ಯಾವವೆಂದು, ೮—೧೦ನೇ ಸಂಧಿಗಳಲ್ಲಿ ವಿವರಿಸಿ ಇದೆ. ೧೨—೨೦. ವಚನಗಳಲ್ಲಿ ಪಾಪಕ್ಕೆ ಹೇತುವೆಯಾದ ಕಾರ್ಯಗಳು ಯಾವವೆಂದೂ, ಅವುಗಳನ್ನು ಮಾಡುವವರಿಗೆ ದೊಡ್ಡ ಶಿಕ್ಷೆ ಬರುವದೆಂದೂ ಹೇಳಿ ಇದೆ.

3. ಅನುಭೋಗಕ್ಕೆ ತಕ್ಕ ಕಾರ್ಯಗಳಾಗಿದ್ದಾಗ್ಯೂ ಅವು ನಮ್ಮನ್ನು ಆಳುವಂತೆ ಸ್ಥಳ ಕೊಡ ಬಾರದು. ಹಾಗೆ ಸ್ಥಳ ಕೊಟ್ಟರೆ, ಅವು ನಮ್ಮನ್ನು ಆಳುವವುಗಳಾಗಿಯೂ, ನಾವು ಅವುಗಳಿಗೆ ದಾಸರಾಗಿಯೂ ಇರುವೆವು. ಅದರಿಂದ ಕ್ರಿಸ್ತಮಾರ್ಗದ ಸ್ವಾಧೀನವೂ ಶ್ಲಾಘ್ಯವೂ ಕೆಟ್ಟು ಹೋಗುವವು.

4. ಹೊಟ್ಟೆಯ ಹಶಿವೆಯನ್ನು ಭೋಜನದಿಂದ ತೀರಿಸುವ ಪ್ರಕಾರ ಶರೀರದ ಬೇರೆ ಇಚ್ಛೆಗಳನ್ನು ತೀರಿಸುವದು ಅವಶ್ಯವೆಂದು ಕೊರಿಂಥದ ಸಭೆಯವರಲ್ಲಿ ಕೆಲವರು ಹೇಳಿರುವರು. ಪೌಲನು ಈ ತಪ್ಪಾದ ಯೋಚನೆಯನ್ನು ಖಂಡಿಸುತ್ತಾನೆ. ಭೋಜನವು ನಾಶವಾಗಿ ಹೋಗುವದು. (ಯೋಹಾ. ೬. ೨೭.) ಹಶಿವೆಯಾಗುವ ಹೊಟ್ಟೆಯು ಸಹ ನಾಶವಾಗುವದು. ಆದದರಿಂದ ಮೋಕ್ಷರಾಜ್ಯದಲ್ಲಿ ಹಶಿವೆ ಇರಲಾರದು. (ಪ್ರಕಟ. ೭. ೧೬.) ಶರೀರವು ನಾಶವಾಗದು. ಅದು ಮಣ್ಣಿನಲ್ಲಿ ಕೊಳೆತು ನಾಶವಾದಾಗ್ಯೂ ತಿರಿಗಿ ಜೀವದಿಂದ ಏಳುವದು. ದೇವರ ಹೋಲಿಕೆಯಾಗಿಯೂ, ವಿನೋದವಿಚಿತ್ರವಾಗಿಯೂ ರೂಪಿಸಲ್ಪಟ್ಟ ಶರೀರವು ಜಾರತ್ವಕ್ಕಲ್ಲ, ಕರ್ತನಿಗೆ ಸ್ವಂತವಾದದ್ದು. ಜಾರತ್ವವು ಮೊದಲು, ಶರೀರವನ್ನು ಘನಹೀನ ಪಡಿಸಿ ತಗ್ಗಿಸುವದರಿಂದಲೂ, ಎರಡನೇದು, ರಕ್ಷಕನು ತನ್ನ ಮಹಾ ಪುಣ್ಯದಿಂದ ಸಂಪಾದಿಸಿದ ಈ ದ್ರವ್ಯವನ್ನು ಅಪಹರಿಸುವದರಿಂದಲೂ, ಮೂರನೇದು, ಪರಿಶುದ್ಧಾತ್ಮನು ವಾಸ ಮಾಡುವ ಮಂದಿರವನ್ನು ಹೊಲೆ ಮಾಡುವದರಿಂದಲೂ, ಬೇರೆ ಎಲ್ಲಾ ಪಾಪಗಳಿಗಿಂತ ಈ ಪಾಪವು ಮಹಾ ಕೆಟ್ಟದ್ದೆಂದು ತಿಳಿಯ ಬೇಕು.

5. ಆತ್ಮದ ಪ್ರಕಾರ ಕರ್ತನ ಸಂಗಡ ಒಂದಾಗಿ ಜೋಡಿಸಲ್ಪಟ್ಟಿರುವವನು ಶರೀರದ ಪ್ರಕಾರ ಜಾರೆಯ ಸಂಗಡ ಒಂದಾಗಿ ಜೋಡಿಸಲ್ಪಟ್ಟಿರುವದು ಹ್ಯಾಗೆ? ಆದದರಿಂದ ಬೇರೆ ಪಾಪಗಳನ್ನು ಎದುರಿಗೆ ನಿಂತು ಎದುರಿಸ ಬೇಕಾದಾಗ್ಯೂ, ಜಾರತ್ವಕ್ಕೆ ತೊಲಗಿ ಓಡ ಬೇಕು. ಸಂಸೋನನು ದೆಲೀಲಳ ಸಂಗಡ ಆಟವಾಡಿದ ಪ್ರಕಾರ ನಾವು ಈ ಪಾಪದ ಸಂಗಡ ಆಟವಾಡದೆ ಅದನ್ನು ಬಿಟ್ಟು ಓಡಿ ಹೋಗ ಬೇಕು. (ಸಾಮ. ೪. ೧೪, ೧೫.)

6. ಶರೀರವು ಆತ್ಮಕ್ಕೆ ವಾಸಸ್ಥಾನವಾಗಿರುವ ಪ್ರಕಾರ, ದೇವರ ಕೃಪೆಯಿಂದ ನೂತನ ಮಾಡಲ್ಪಟ್ಟ ಆತ್ಮವು ದೇವರ ಆತ್ಮನು ವಾಸ ಮಾಡುವ ಪರಿಶುದ್ಧ ಸ್ಥಳವಾಗಿರುತ್ತದೆ.



೨೦ ನೀವು ನಿಮ್ಮ ಸ್ವಂತವಾದವರಲ್ಲವೆಂದೂ, ಅರಿಯರಾ? ಯಾಕಂದರೆ [1]ಬೆಲೆಯಿಂದ ಕೊಳ್ಳಲ್ಪಟ್ಟಿದ್ಧೀರಿ; ಆದ
ಕಾರಣ, ದೇವರವುಗಳಾಗಿರುವ ನಿಮ್ಮ ಶರೀರದಿಂದಲೂ ನಿಮ್ಮ ಆತ್ಮದಿಂದಲೂ [2]ದೇವರನ್ನು ಮಹಿಮೆ ಪಡಿಸಿರಿ.

ಮದುವೆ ಮುಂತಾದ ವಿಷಯಗಳನ್ನು ಕುರಿತು ಉಂಟಾದ ಪ್ರಶ್ನೆಗಳಿಗೆ ಉತ್ತರ.

7. ಮತ್ತು ನೀವು ನನಗೆ [3]ಬರೆದವುಗಳ ವಿಷಯವಾಗಿ, [4]ಸ್ತ್ರೀಯನ್ನು ಮುಟ್ಟದೆ ಇರುವದು ಮನುಷ್ಯನಿಗೆ
೨ ಒಳ್ಳೇದು. ಆದಾಗ್ಯೂ, [5]ಜಾರತ್ವಗಳ ನಿಮಿತ್ತ ಒಬ್ಬೊಬ್ಬನಿಗೆ ಸ್ವಂತ ಹೆಂಡತಿಯು ಇರಲಿ; ಒಬ್ಬೊಬ್ಬಳಿಗೆ
೩ [6]ಸ್ವಂತ ಗಂಡನು ಇರಲಿ. ಹೆಂಡತಿಗೆ ಗಂಡನು ತಕ್ಕ ಸ್ನೇಹವನ್ನು ಸಲ್ಲಿಸಲಿ; ಹಾಗೆಯೇ ಹೆಂಡತಿಯೂ ಗಂಡನಿಗೆ.
೪ ಹೆಂಡತಿಯು ತನ್ನ ಶರೀರಕ್ಕೆ ಸ್ವತಂತ್ರಳಲ್ಲ, ಗಂಡನೇ. ಹಾಗೆಯೇ ಗಂಡನು ತನ್ನ ಶರೀರಕ್ಕೆ ಸ್ವತಂತ್ರನಲ್ಲ,
೫ ಹೆಂಡತಿಯೇ. [7]ಉಪವಾಸ ಪ್ರಾರ್ಥನೆಗಳಿಗೋಸ್ಕರ ನಿಮಗೆ ಸಾವಕಾಶವಾಗುವ ಹಾಗೆ, ಸ್ವಲ್ಪ ಕಾಲ
ಒಡಂಬಡಿಕೆಯಿಂದಲೇ ಹೊರ್ತು, ಒಬ್ಬರಿಗೊಬ್ಬರು ಅಪಹಾರ ಮಾಡ ಬೇಡಿರಿ; ಮತ್ತು ಸೈತಾನನು ನಿಮ್ಮ
೬ ಅಸಂಯಮದಿಂದ ನಿಮ್ಮನ್ನು ಶೋಧಿಸದ ಹಾಗೆ, ತಿರಿಗಿ ಏಕವಾಗಿ ಕೂಡಿ ಬನ್ನಿ. ಆದರೆ ಇದನ್ನು [8]ಆಲೋ
೭ ಚನೆಯ ಪ್ರಕಾರ ಹೇಳುತ್ತೇನೆ, ಆಜ್ಞೆಯ ಪ್ರಕಾರವಲ್ಲ. ಯಾಕಂದರೆ, ಎಲ್ಲಾ ಮನುಷ್ಯರು [9]ನನ್ನ ಹಾಗೆ
ಯೇ ಇರ ಇಚ್ಛೈಸುತ್ತೇನೆ. ಆದರೆ, ಒಬ್ಬೊಬ್ಬನು ಸ್ವಂತ ವರವನ್ನು ದೇವರಿಂದ ಹೊಂದಿದ್ದಾನೆ; ಒಬ್ಬನು
ಹೀಗೆ, ಒಬ್ಬನು ಹಾಗೆ.

1. ಕ್ರಿಸ್ತನು ತನ್ನ ಜೀವವನ್ನು ಕ್ರಯವಾಗಿ ಕೊಟ್ಟು ನಿಮ್ಮನ್ನು ಕೊಂಡು ಕೊಂಡಿದ್ದಾನೆ. (೧ಪೇತ್ರ. ೧. ೧೮—೧೯.) ಆದದರಿಂದ ನಿಮ್ಮ ಶರೀರವನ್ನು ಪರಿಶುದ್ಧ ಬಲಿಯಾಗಿ ಆತನಿಗೆ ಸಮರ್ಪಿಸಿ ಆತನನ್ನು ಮಹಿಮೆ ಪಡಿಸ ಬೇಕು. (ರೋಮಾ. ೧೨. ೧.) ಎಂದು ಹೇಳುತ್ತಾನೆ.

2. ದೇವಾಲಯವು ದೇವಾರಾಧನೆಗೋಸ್ಕರ ಪ್ರತಿಷ್ಠೆ ಮಾಡಲ್ಪಟ್ಟಿರುವ ಪ್ರಕಾರ, ಉತ್ತಮ ಭಕ್ತರ ಜೀವವು ದೇವರ ಮಹಿಮೆಗೋಸ್ಕರ ಪ್ರತಿಷ್ಠೆ ಮಾಡಲ್ಪಟ್ಟಿರ ಬೇಕು. ಈ ವಾಕ್ಯವನ್ನು ಕ್ರೈಸ್ತರೆಲ್ಲರೂ ತಮ್ಮ ನಡತೆಗೆ ಪ್ರಮಾಣವಾಗಿಟ್ಟು ಕೊಂಡು ನಡಿಯುವವರಾದರೆ, ಎಷ್ಟೋ ಮಹಿಮೆಯಾಗಿರುವದು.

3. ಕೊರಿಂಥದ ಸಭೆಯವರು ನಾನಾ ವಿಷಯಗಳನ್ನು ಕುರಿತು ಪೌಲನ ಅಭಿಪ್ರಾಯವನ್ನು ತಿಳಿದು ಕೊಳ್ಳುವದಕ್ಕೆ ಆತನಿಗೆ ಬರೆದು ಕೇಳಿ ಕೊಂಡರು. ಮದುವೆ ಇಲ್ಲದವರು ಹಾಗೆಯೇ ಇರ ಬಹುದೋ? ಎಂದೂ, ಮದುವೆ ಮಾಡಿ ಕೊಂಡವರಲ್ಲಿ ಒಬ್ಬನು ಅವಿಶ್ವಾಸಿಯಾಗಿದ್ದರೆ ಅಗಲಿ ಇರ ಬಹುದೋ? ಎಂದೂ ಕೇಳಿದ್ದರು. (೧—೨೪. ವ.) ಮತ್ತು ವಿವಾಹವಿಲ್ಲದ ಕನ್ನಿಕೆಗಳನ್ನು ಆ ಕಾಲದ ಉಪದ್ರದ ನಿಮಿತ್ತ ತಂದೆತಾಯಿಗಳು ಮದುವೆ ಮಾಡಿ ಕೊಡದೆ ಇರ ಬಹುದೋ? ಎಂದೂ, (೨೫—೩೮. ವ.) ಪುರುಷನನ್ನು ಕಳಕೊಂಡ ವಿಧವೆಗಳು ಮಾಡ ತಕ್ಕದೇನೆಂದೂ (೩೯, ೪೦. ವ.) ಕೇಳಿದರೆಂಬದಾಗಿ ತೋರುತ್ತದೆ.

4. ವಿವಾಹಸಮ್ಮಂಧವು ಮನುಷ್ಯರ ಸ್ವಭಾವಕ್ಕೆ ತಕ್ಕ ದೇವರ ನೇಮಕವಾಗಿರುವದರಿಂದ, ಅದನ್ನು ಕುರಿತು ಸತ್ಯವೇದದಲ್ಲೆಲ್ಲಾ ಮೆಚ್ಚಿಕೆಯಾಗಿದೆ. ಅದರಿಂದ ಮನುಷ್ಯರಿಗೆ ಮೇಲೂ ಭಾಗ್ಯವೂ ಉಂಟಾಗಿರುವದೆಂಬುವದಕ್ಕೆ ಸಂದೇಹವಿಲ್ಲ. ಪೌಲನು ಸಹ ಮದುವೆಯು ಮಹಾ ಘನವುಳ್ಳದ್ದೆಂದೂ, ಮದುವೆಯನ್ನು ಅಡ್ಡಿ ಮಾಡುವದು ಅಬದ್ಧ ಮಾರ್ಗದ ಲಕ್ಷಣವೆಂದೂ ಹೇಳುತ್ತಾನೆ. (೧ತಿಮೊ. ೪. ೧—೩.) ಆ ಕಾಲದಲ್ಲಿ ಕೊರಿಂಥದ ಸಭೆಯಲ್ಲಿದ್ದ ಕ್ರೈಸ್ತರಿಗೆ ಅಧಿಕ ಉಪದ್ರ ಉಂಟಾಗಿದ್ದದರಿಂದ ಅದಕ್ಕೆ ಲೇಸಾಗಿರುವ ಉದ್ದಿಶ್ಯ ಮದುವೆ ಮಾಡದೆ ಇರುವದು ಒಳ್ಳೇದೆಂದು ಹೇಳುತ್ತಾನೆ ಹೊರ್ತು, ಎಲ್ಲಾ ಕಾಲಗಳಲ್ಲಿಯೂ ಹಾಗೆಯೇ ನಡಿಯ ಬೇಕೆಂದು ಹೇಳುವದಿಲ್ಲ. (೨೬. ವ.)

5. ಜಾರತ್ವವೆಂಬ ಪಾಪವು ಸಾಧಾರಣವಾಗಿ ನಡಿಯುತ್ತಾ ಇದ್ದರೆ ಅದಕ್ಕೆ ತೊಲಗಿ, ಸಂಸಾರಕ್ರಮದಲ್ಲಿ ಪರಿಶುದ್ಧವಾಗಿ ನಡಿಯುವದಕ್ಕೆ ಮದುವೆ ಮಾಡಿ ಕೊಳ್ಳ ತಕ್ಕದ್ದು ಅವಶ್ಯವು.

6. ಹಲವು ಮಂದಿ ಸ್ತ್ರೀಯರನ್ನು ಮದುವೆ ಮಾಡಿ ಕೊಳ್ಳುವ ವಾಡಿಕೆಯು ದೇವರ ಕಟ್ಟಳೆಗೆ ವಿರೋಧವಾದದ್ದೆಂದು ಇದರಿಂದ ತಿಳಿಯ ಬೇಕು. (ಮಲಕಿ. ೨. ೧೪—೧೬.)

7. ಮದುವೆ ಮಾಡಿ ಕೊಂಡ ಗಂಡನೂ ಹೆಂಡತಿಯೂ ಯಾವಾಗಲೂ ಒಂದಾಗಿದ್ದು ತಮ್ಮ ಸುಖ ದುಃಖಗಳಿಗೆ ಹೇತುವೆಯಾಗಿ ಅವರು ಒಪ್ಪಿ ಕೊಂಡ ಕೆಲಸಗಳನ್ನು ಜಾಗ್ರತೆಯಿಂದ ಮಾಡುತ್ತಾ ಬರ ಬೇಕು. ಆತ್ಮಪ್ರಯೋಜನಕ್ಕಾಗಿ ಪ್ರಾರ್ಥನೆ ಉಪವಾಸ ಮುಂತಾದ ಸತ್ಕ್ರಿಯೆಗಳನ್ನು ತಡೆ ಇಲ್ಲದೆ ಈಡೇರಿಸುವದಕ್ಕೆ ಸ್ವಲ್ಪ ಕಾಲ ಅಗಲಿರ ಬಹುದೇ ಹೊರ್ತು, ಮಿಕ್ಕ ಸಮಯಗಳಲ್ಲಿ ಅಗಲಿ ಇರ ಕೂಡದು. ಅಗಲಿದಾಗ್ಯೂ ಸೈತಾನನ ಶೋಧನೆಗೊಳಪಟ್ಟು ಶರೀರದಿಚ್ಛೆಗಳಿಗೆ ಸ್ಥಳ ಕೊಡದೆ ಇರುವಂತೆ ತಿರಿಗಿ ಕೂಡಿ ಬಾಳ ಬೇಕು. ಇದರಲ್ಲಿ ವಿವಾಹಸಮ್ಮಂಧದ ಶ್ರೇಷ್ಠತ್ವವನ್ನೂ ಸನ್ಯಾಸಮಾರ್ಗದ ವಿಪರೀತವನ್ನೂ ಚನ್ನಾಗಿ ತಿಳಿದು ಕೊಳ್ಳ ಬಹುದು.

8. ಮದುವೆ ಇಲ್ಲದವರೂ ವಿಧವೆಗಳೂ, ಮನಸ್ಸಿದ್ದರೆ, ಮದುವೆ ಮಾಡಿ ಕೊಳ್ಳುವದಕ್ಕೆ ಅಡ್ಡಿ ಇಲ್ಲ; ಮತ್ತು ಮದುವೆ ಮಾಡಿ ಕೊಳ್ಳ ಬೇಕೆಂಬ ಕಡ್ಡಾಯವೂ ಇಲ್ಲ.

9. ಪೌಲನು ವಿವಾಹವಿಲ್ಲದವನಾಗಿ, ಅಥವಾ ಹೆಂಡತಿ ಸತ್ತದರಿಂದ ವಿಧುರನಾಗಿ ಇರ ಬೇಕು. (೯. ೪, ೫.) ಆತನಿಗೆ ಸ್ವಾಭಾವಿಕವಾಗಿಯೂ ದೈವಾನುಗ್ರಹದಿಂದಲೂ ತನ್ನ ಮನಸ್ಸನ್ನು ಕಾಪಾಡಿ ಕೊಳ್ಳುವ ಶಕ್ತಿ ಇತ್ತು. ಮತ್ತೊಬ್ಬರಿಗೆ ಸಹ ಇಂಥಾ ಶಕ್ತಿಯೂ ಅನುಗ್ರಹವೂ ಇದ್ದರೆ, ಆ ಕಾಲದ ಉಪದ್ರಕ್ಕೋಸ್ಕರವೂ,

ಆದರೆ, ಮದುವೆ ಇಲ್ಲದವರಿಗೂ ವಿಧವೆಗಳಿಗೂ, ನನ್ನ ಹಾಗೆಯೇ ಇರುವದು ಅವರಿಗೆ ಒಳ್ಳೇದೆಂದು
೮ ಆದರೆ, ಮದುವೆ ಇಲ್ಲದವರಿಗೂ ವಿಧವೆಗಳಿಗೂ, ನನ್ನ ಹಾಗೆಯೇ ಇರುವದು ಅವರಿಗೆ ಒಳ್ಳೇದೆಂದು
೯ ಹೇಳುತ್ತೇನೆ. ಆದರೆ ಸಂಯತರಲ್ಲದಿದ್ದರೆ, ಮದುವೆ ಮಾಡಿ ಕೊಳ್ಳಲಿ; ಯಾಕಂದರೆ ತಾಪ ಪಡುವದಕ್ಕಿಂತ
೧೦ ಮದುವೆ ಮಾಡಿ ಕೊಳ್ಳುವದು ಉತ್ತಮ. ಮತ್ತು ಮದುವೆ ಮಾಡಿ ಕೊಂಡಿರುವವರಿಗೆ ನಾನಲ್ಲ,
೧೧ ಕರ್ತನು ಆಜ್ಞಾಪಿಸುವದೇನಂದರೆ—ಹೆಂಡತಿ ಗಂಡನನ್ನು [1]ಅಗಲದೆ ಇರಲಿ. ಅಗಲಿದರೂ, ಮದುವೆ ಇಲ್ಲದೆ
ಇರಲಿ; ಇಲ್ಲವೆ ಗಂಡನ ಸಂಗಡ ಅನ್ಯೋನ್ಯವಾಗಲಿ; ಮತ್ತು ಗಂಡನು ಹೆಂಡತಿಯನ್ನು [2]ಬಿಡದೆ ಇರಲಿ.
೧೨ [3]ಮಿಕ್ಕಾದವರಿಗೆ ಕರ್ತನಲ್ಲ, ನಾನೇ ಹೇಳುವದೇನಂದರೆ, ಒಬ್ಬ ಸಹೋದರನಿಗೆ ಅವಿಶ್ವಾಸಿಯಾದ ಹೆಂಡತಿ
ಇರಲಾಗಿ, ಅವಳು ಅವನ ಸಂಗಡ ಒಗತನ ಮಾಡ ಮನಸ್ಸಾಗಿದ್ದರೆ, ಅವಳನ್ನು ಬಿಡದೆ ಇರಲಿ.
೧೩ ಮತ್ತು ಹೆಂಡತಿಗೆ ಅವಿಶ್ವಾಸಿಯಾದ ಗಂಡನು ಇರಲಾಗಿ, ಅವನು ಅವಳ ಸಂಗಡ ಒಗತನ ಮಾಡ ಮನ
೧೪ ಸ್ಸಾಗಿದ್ದರೆ, ಅವನನ್ನು ಬಿಡದೆ ಇರಲಿ. ಯಾಕಂದರೆ ಅವಿಶ್ವಾಸಿಯಾದ ಗಂಡನು ಹೆಂಡತಿಯಿಂದ ಪರಿ
ಶುದ್ಧ ಮಾಡಲ್ಪಟ್ಟಿದ್ದಾನೆ; ಮತ್ತು ಅವಿಶ್ವಾಸಿಯಾದ ಹೆಂಡತಿಯು ಗಂಡನಿಂದ ಪರಿಶುದ್ಧ ಮಾಡಲ್ಪಟ್ಟಿ
೧೫ ದ್ದಾಳೆ; ಇಲ್ಲದಿದ್ದರೆ, ನಿಮ್ಮ ಮಕ್ಕಳು ಅಪವಿತ್ರರಾಗಿರುವರು; ಆದರೆ ಈಗ [4]ಪರಿಶುದ್ಧರಾಗಿದ್ದಾರೆ. ಆದಾಗ್ಯೂ
ಅವಿಶ್ವಾಸಿಯಾದವನು ಅಗಲಿದರೆ, ಅಗಲಲಿ. ಸಹೋದರನಾದರೂ ಸಹೋದರಿಯಾದರೂ ಅಂಥವುಗಳಲ್ಲಿ
೧೬ ಬಂಧಿಸಲ್ಪಟ್ಟವರಲ್ಲ; ಆದರೆ [5]ಸಮಾಧಾನದಲ್ಲಿ ದೇವರು ನಮ್ಮನ್ನು ಕರೆದಿದ್ದಾನೆ. ಯಾಕಂದರೆ, ಹೆಂಡತಿಯೇ,
ಗಂಡನನ್ನು ರಕ್ಷಿಸುವಿ ಏನೋ, ಹ್ಯಾಗೆ ಬಲ್ಲಿ? ಇಲ್ಲವೆ, ಗಂಡನೇ, ಹೆಂಡತಿಯನ್ನು ರಕ್ಷಿಸುವಿ ಏನೋ,
ಹ್ಯಾಗೆ ಬಲ್ಲಿ?
೧೭ ಆದರೆ ದೇವರು ಒಬ್ಬೊಬ್ಬನಿಗೆ ಹ್ಯಾಗೆ ಪಾಲಿಟ್ಟನೋ, ಕರ್ತನು ಒಬ್ಬೊಬ್ಬನನ್ನು ಹ್ಯಾಗೆ ಕರೆದನೋ,
೧೮ ಹಾಗೆಯೇ ನಡೆಯಲಿ; ಮತ್ತು ಹೀಗೆ ಎಲ್ಲಾ ಸಭೆಗಳಲ್ಲಿ ನೇಮಿಸುತ್ತೇನೆ. ಒಬ್ಬನು ಪರಿಛೇದನೆಯುಳ್ಳವ
ನಾಗಿ ಕರೆಯಲ್ಪಟ್ಟನೋ? ಪರಿಛೇದನೆ ಬಿಡದೆ ಇರಲಿ. ಒಬ್ಬನು ಅಪರಿಛೇದನೆಯಲ್ಲಿ ಕರೆಯಲ್ಪಟ್ಟನೋ?
೧೯ ಪರಿಛೇದನೆ ಹೊಂದದೆ ಇರಲಿ. ಪರಿಛೇದನೆ ಏನೂ ಇಲ್ಲ, ಅಪರಿಛೇದನೆಯೂ ಏನೂ ಇಲ್ಲ, ಆದರೆ ದೇವರ
೨೦ ಕಟ್ಟಳೆಗಳನ್ನು ಕೈಕೊಳ್ಳುವದೇ. ಒಬ್ಬೊಬ್ಬನು ಯಾವ ಕರೆಯುವಿಕೆಯಲ್ಲಿ ಕರೆಯಲ್ಪಟ್ಟನೋ, ಅದರ
೨೧ ಲ್ಲಿಯೇ ಇರಲಿ. ದಾಸನಾಗಿ ಕರೆಯಲ್ಪಟ್ಟೆಯೋ? ಚಿಂತೆ ಪಡ ಬೇಡ. ಆದಾಗ್ಯೂ ಸ್ವತಂತ್ರನಾಗ ಬಹು

ಕ್ರಿಸ್ತಮಾರ್ಗದ ವೃದ್ಧಿಗೋಸ್ಕರವೂ, ಅವರು ತನ್ನ ಹಾಗೆ ಇದ್ದರೆ ಉತ್ತಮವೆಂದು ಯೋಚನೆ ಹೇಳುತ್ತಾನೆ. ಆದಾಗ್ಯೂ ಒಬ್ಬೊಬ್ಬನಿಗೂ ಬೇರೆ ಬೇರೆ ಗುಣಗಳೂ ವರಗಳೂ ಉಂಟಾಗಿರುವದರಿಂದ ತನ್ನ ಯೋಚನೆಯ ಹಾಗೆ ಎಲ್ಲರೂ ನಡಿಯುವದು ಅಸಾಧ್ಯವೆಂದು ಹೇಳುತ್ತಾನೆ. (ಮತ್ತಾ. ೧೯. ೧೦—೧೨.)

1. ಮದುವೆಯಾದವರು ಅಗಲ ಬಾರದೆಂದು ಕರ್ತನೇ ಆಜ್ಞಾಪಿಸಿದ್ದಾನೆ. (ಮಾರ್ಕ. ೧೦. ೯—೧೨.)

2. ಗಂಡನು ವ್ಯಭಿಚಾರದ ಅಪರಾಧದ ನಿಮಿತ್ತವೇ ಹೊರ್ತು ಬೇರೆ ಕಾರಣದಿಂದ ಹೆಂಡತಿಯನ್ನು ತಳ್ಳಿ ಬಿಡ ಕೂಡದೆಂದು ಕರ್ತನು ಹೇಳಿದ್ದಾನೆ. (ಮತ್ತಾ. ೫. ೩೨; ೧೯. ೯.) ಈ ಕಾರಣವನ್ನು ಪೌಲನು ಹೇಳದೆ ಇದ್ದಾಗ್ಯೂ, ಇದು ಆತನ ಅಭಿಪ್ರಾಯಕ್ಕೆ ವಿರೋಧವಾದದ್ದಲ್ಲ.

3. ಮಿಕ್ಕಾದವರು ಎಂಬುವದು ಅಜ್ಞಾನರ ಸಂಗಡಲೂ ಯೆಹೂದ್ಯರ ಸಂಗಡಲೂ ವಿವಾಹಸಮ್ಮಂಧದಲ್ಲಿ ಕೇರಿದವರನ್ನು ಸೂಚಿಸುತ್ತದೆ. ಇಂಥವರನ್ನು ಕುರಿತು ಕರ್ತನು ಏನೂ ಕಟ್ಟಳೆ ಕೊಡದೆ ಇದ್ದದರಿಂದ ಪೌಲನು ತನ್ನ ತೀರ್ಪನ್ನು ಹೇಳುತ್ತಾನೆ. (೪೦. ವ.)

4. ಅವಿಶ್ವಾಸಿಯಾದ ಗಂಡನಿಗೂ ಹೆಂಡತಿಗೂ ಮಕ್ಕಳಿಗೂ ಹೇಳಲ್ಪಟ್ಟ ಈ ಪರಿಶುದ್ಧದಿಂದ ಅವರ ಗುಣ ಪಡುವಿಕೆಯ ನಿಶ್ಚಯವನ್ನು ಹೇಳಲಾಗದು. ದೇವರ ನೇಮಕದ ಪ್ರಕಾರ ಮದುವೆಯಾದವರೂ, ಆ ಮದುವೆಯಿಂದುಂಟಾದ ಸಂತಾನವೂ, ದೇವರ ಸೇವೆಗೆ ಪ್ರತಿಷ್ಠೆ ಮಾಡಲ್ಪಟ್ಟವರಾಗಿರುವದರಿಂದ, ಅವರು ಹೀಗೆ ಪರಿಶುದ್ಧರಾಗಿದ್ದಾರೆ. ದೇವಭಕ್ತರು ಭಕ್ತಿಹೀನರನ್ನು ಬೋಧಿಸಿ ಅವರನ್ನು ಗುಣ ಪಡಿಸುವರು. ಇನ್ನು ಮೇಲೆ ಮದುವೆ ಮಾಡುವವರನ್ನು ಕುರಿತಲ್ಲ, ಮದುವೆಯಾದವರನ್ನು ಕುರಿತೇ ಪೌಲನು ಹೀಗೆ ಹೇಳುತ್ತಾನೆ. ಮೊದಲು ಮದುವೆ ಮಾಡುವ ಭಕ್ತರು ಒಂದೇ ನೊಗದಲ್ಲಿ ಅವಿಶ್ವಾಸಿಗಳ ಸಂಗಡ ಜೋಡಿಸಲ್ಪಡದೆ ಇರ ಬೇಕು.

5. ವಿವಾಹದ ಸಮ್ಮಂಧವು ಬಿಚ್ಚಲ್ಪಡ ಕೂಡದ್ದಾಗಿದ್ದರೂ ಗಂಡ ಹೆಂಡರಾದ ಇಬ್ಬರಲ್ಲಿ ಒಬ್ಬರು ಅಜ್ಞಾನಿಯಾಗಿಯೂ ಅವಿಶ್ವಾಸಿಯಾಗಿಯೂ ಇದ್ದು, ಆ ಸಮ್ಮಂಧವನ್ನು ಬಿಟ್ಟು ಅಗಲಿ ಹೋಗ ಮನಸ್ಸಾದರೆ, ಅಂಥವರನ್ನು ಬಲಾತ್ಕಾರ ಮಾಡುವದರಿಂದ ಅಸಮಾಧಾನ ಉಂಟಾಗುವದೇ ಹೊರ್ತು ಹೊಂದಿಕೆಯಾಗುವದಿಲ್ಲ. ಸಮಾಧಾನವಿಲ್ಲದ ವಿಷಯದಲ್ಲಿ ಅವಿಶ್ವಾಸಿಯಾದ ಪುರುಷನನ್ನಾಗಲಿ ಸ್ತ್ರೀಯನ್ನಾಗಲಿ ಗುಣ ಪಡಿಸುವದು ಅಸಾಧ್ಯವು. (೧೬. ವ.)



೨೨ ದಾದರೆ, [1]ಅದೇ ಉತ್ತಮವೆಂದು, ಬಳಸಿಕೋ. ಯಾಕಂದರೆ ದಾಸನಾಗಿ ಕರ್ತನಿಂದ ಕರೆಯಲ್ಪಟ್ಟವನು
ಕರ್ತನ ಸ್ವತಂತ್ರನಾಗಿದ್ದಾನೆ; ಅದೇ ಪ್ರಕಾರ ಸ್ವತಂತ್ರನಾಗಿ ಕರೆಯಲ್ಪಟ್ಟವನು ಕ್ರಿಸ್ತನ ದಾಸನಾಗಿದ್ದಾನೆ.
೨೩, ೨೪ ಬೆಲೆಯಿಂದ ಕೊಳ್ಳಲ್ಪಟ್ಟಿದ್ದೀರಿ; ಮನುಷ್ಯರ ದಾಸರಾಗ ಬೇಡಿರಿ. ಸಹೋದರರೇ, ಒಬ್ಬೊಬ್ಬನು
ಯಾವದರಲ್ಲಿ ಕರೆಯಲ್ಪಟ್ಟನೋ, ಅದರಲ್ಲಿಯೇ ದೇವರ ಸಂಗಡ ಇರಲಿ.
೨೫ ಮತ್ತು ಕನ್ನಿಕೆಯರನ್ನು ಕುರಿತು ಕರ್ತನಿಂದ ಅಪ್ಪಣೆ ಹೊಂದಲಿಲ್ಲ; ಆದರೆ [2]ನಂಬಿಕೆಯುಳ್ಳವನಾಗಿರ ಕರ್ತ
೨೬ ನಿಂದ ಕರುಣೆಯನ್ನು ಹೊಂದಿದವನಾಗಿ ಆಲೋಚನೆ ಹೇಳುತ್ತೇನೆ. ಆದ ಕಾರಣ, [3]ಈಗಿನ ಇಕ್ಕಟ್ಟಿಗೋ
ಸ್ಕರ ಇದು ಒಳ್ಳೇದಾಗಿದೆ ಎಂದು, ನೆನಸುತ್ತೇನೆ; ಏನಂದರೆ, ಹಾಗೆಯೇ ಇರುವದು ಮನುಷ್ಯನಿಗೆ ಒಳ್ಳೇದು.
೨೭ ಹೆಂಡತಿಗೆ ಬಂಧಿಸಲ್ಪಟ್ಟಿದ್ದೀಯೋ? ಬಿಡುಗಡೆಯನ್ನು ಹುಡುಕ ಬೇಡ. ಹೆಂಡತಿಯಿಂದ ಬಿಡುಗಡೆಯಾಗಿ
೨೮ ದ್ದೀಯೋ? ಹೆಂಡತಿಯನ್ನು ಹುಡುಕ ಬೇಡ. ಆದಾಗ್ಯೂ ಮದುವೆ ಮಾಡಿ ಕೊಂಡರೆ, ನಿನಗೆ ಪಾಪ
ವಿಲ್ಲ; ಮತ್ತು ಕನ್ನಿಕೆಯು ಮದುವೆ ಮಾಡಿ ಕೊಂಡರೆ, ಅವಳಿಗೆ ಪಾಪವಿಲ್ಲ. ಆದರೆ ಇಂಥವರಿಗೆ ಮಾಂಸ
ದಲ್ಲಿ ಉಪದ್ರವಾಗುವದು; ಆದರೆ ನಾನು [4]ನಿಮ್ಮನ್ನು ಕನಿಕರಿಸುತ್ತೇನೆ.
೨೯ ಆದರೆ, ಸಹೋದರರೇ, ಇದನ್ನು ಹೇಳುತ್ತೇನೆ, ಏನಂದರೆ—[5]ಸಮಯವು ಅಡಕವಾಗಿದೆ; ಇನ್ನು ಮೇಲೆ
೩೦ ಹೆಂಡತಿಯುಳ್ಳವರು ಇಲ್ಲದವರ ಹಾಗೆಯೂ, ಅಳುವವರು ಅಳದವರ ಹಾಗೆಯೂ, ಸಂತೋಷ ಪಡುವವರು
೩೧ ಸಂತೋಷ ಪಡದವರ ಹಾಗೆಯೂ, ಕೊಂಡು ಕೊಳ್ಳುವವರು ಉಂಟಾದವರಲ್ಲದ ಹಾಗೆಯೂ, ಈ ಲೋಕ
ವನ್ನು ಅನುಭವಿಸುವವರು [6]ದುರನುಭವ ಮಾಡದವರ ಹಾಗೆಯೂ ಇರಲಿ; ಯಾಕಂದರೆ ಈ ಲೋಕದ
[7]ಆಕಾರವು ಜರಿಗಿ ಹೋಗುವದು.
೩೨ ಆದರೆ ನೀವು ಚಿಂತೆ ಇಲ್ಲದವರಾಗಿರ ಇಚ್ಛೈಸುತ್ತೇನೆ. ಮದುವೆ ಇಲ್ಲದವನು ಕರ್ತನನ್ನು ಹ್ಯಾಗೆ ಮೆಚ್ಚಿ
೩೩ ಸುವನೆಂದು, ಕರ್ತನವುಗಳನ್ನು ಚಿಂತಿಸುತ್ತಾನೆ. ಮದುವೆಯಾದವನು ಹೆಂಡತಿಯನ್ನು ಹ್ಯಾಗೆ ಮೆಚ್ಚಿಸು
೩೪ ವನೆಂದು ಲೋಕದವುಗಳನ್ನು ಚಿಂತಿಸುತ್ತಾನೆ. ಹೆಂಡತಿಗೂ ಕನ್ನಿಕೆಗೂ ಹೆಚ್ಚುಕಡಿಮೆ ಉಂಟು. ಮದುವೆ
ಇಲ್ಲದವಳು ಶರೀರದಲ್ಲಿಯೂ ಆತ್ಮದಲ್ಲಿಯೂ ಪರಿಶುದ್ಧಳಾಗಿರುವ ಹಾಗೆ, ಕರ್ತನವುಗಳನ್ನು ಚಿಂತಿಸುತ್ತಾಳೆ.
ಮದುವೆಯಾದವಳು ಗಂಡನನ್ನು ಹ್ಯಾಗೆ ಮೆಚ್ಚಿಸುವಳೆಂದು, ಲೋಕದವುಗಳನ್ನು ಚಿಂತಿಸುತ್ತಾಳೆ.

1. ಕ್ರಿಸ್ತನ ಮಾರ್ಗವನ್ನು ಅನುಸರಿಸುವದಕ್ಕಿಂತ ಮುಂಚೆ ಇದ್ದ ಸ್ಥಿತಿಯಲ್ಲಿಯೇ ಕ್ರೈಸ್ತರು ನಿಲ್ಲ ಬೇಕು. ಪರಿಛೇದನೆ ಹೊಂದಿದವನು ಅದನ್ನು ಹೊಂದದವನಾಗಿಯೂ, ಅದನ್ನು ಹೊಂದದವನು ಹೊಂದ ಬೇಕಾದವನಾಗಿಯೂ, ಸ್ವಾಧೀನನು ದಾಸನಾಗಿಯೂ, ದಾಸನು ಸ್ವಾಧೀನನಾಗಿಯೂ ಇರ ಬೇಕೆಂಬ ಅವಶ್ಯವಿಲ್ಲ. ದಾಸನು ಸ್ವಾಧೀನನಾಗ ತಕ್ಕ ಸಮಯ ಬಂದರೆ, ಸ್ವಾಧೀನನಾಗುವದು ದೋಷವಲ್ಲ. ಕ್ರಿಸ್ತನ ದಿವ್ಯ ರಕ್ತದ ಪುಣ್ಯದಿಂದ ವಿಮೋಚಿಸಲ್ಪಟ್ಟವರು ದಾಸರಾಗಿದ್ದರೂ ಸ್ವಾಧೀನರಾಗಿದ್ದರೂ ತಮ್ಮನ್ನು ಆಳಿ ಕೊಂಡ ಕರ್ತನಿಗೆ ದಾಸರಾಗಿಯೇ ಇದ್ದಾರೆ.

2. ಕನ್ನಿಕೆಯರು ಎಂಬ ಪದಕ್ಕೆ ಮೂಲ ಭಾಷೆಯಲ್ಲಿ ಮದುವೆ ಇಲ್ಲದ ಸ್ತ್ರೀ ಪುರುಷರನ್ನು ಸೂಚಿಸುತ್ತದೆ. (ಪ್ರಕಟ. ೧೪. ೪.) ಆ ಕಾಲದಲ್ಲಿದ್ದ ಉಪದ್ರದ ನಿಮಿತ್ತ ಮದುವೆ ಇಲ್ಲದಿರುವದು ಉತ್ತಮವೆಂಬುವದಕ್ಕೆ ಕರ್ತನ ಕಟ್ಟಳೆ ಇಲ್ಲದಿದ್ದಾಗ್ಯೂ, ಪರಿಶುದ್ಧಾತ್ಮನ ವರವನ್ನು ಹೊಂದಿದ ಪೌಲನ ಆಲೋಚನೆ ನಂಬಿಕೆಯಾದದ್ದೆಂದು ತಿಳಿಯ ಬೇಕು.

3. ಆಗಲಿದ್ದ ಉಪದ್ರವು ಎಂಥಾದ್ದೆಂದು ದಿಟ್ಟವಾಗಿ ತಿಳಿಯಲಿಲ್ಲ. ಆದರೆ ಕ್ರಿಸ್ತನ ಸಭೆಗೆ ಬೇರೆ ಬೇರೆ ಸ್ಥಳಗಳಲ್ಲಿ ಹಿಂಸೆಗಳೂ ಕಷ್ಟಗಳೂ ಉಂಟಾಗಿದ್ದವು. ಆದದರಿಂದ ಕ್ರೈಸ್ತರು ಮದುವೆ ಮಾಡಿ ಕೊಂಡು, ಅದರ ಚಿಂತೆಗಳಿಂದಲೂ ತೊಂದರೆಗಳಿಂದಲೂ ತಮ್ಮ ಮನಸ್ಸನ್ನು ಭಾರ ಪಡಿಸಿ ಕೊಳ್ಳುವದು ಯುಕ್ತವಲ್ಲ.

4. ಮದುವೆ ಮಾಡಿ ಕೊಳ್ಳುವದು ಪಾಪವಲ್ಲ. ಸ್ವಲ್ಪ ಉಪದ್ರ ಮಾತ್ರ ಉಂಟಾಗುವದು. ಅದಕ್ಕೆ ಕ್ರೈಸ್ತರು ತಪ್ಪಿಸಿ ಕೊಳ್ಳ ಬೇಕೆಂಬುವದೇ ಪೌಲನ ತಾತ್ಪರ್ಯವು.

5. ಇನ್ನು ಉಳಿದಿರುವ ಕಾಲವು ಅಥವಾ ನಿಮ್ಮ ಜೀವಕಾಲವು ಕ್ಲುಪ್ತವಾಗಿರುವದರಿಂದ, ಮದುವೆ ಮಾಡಿದರೂ ಮಾಡದಿದ್ದರೂ, ಎಲ್ಲಾ ವೇಷದ ಹಾಗೆಯೂ ಮಾಯದ ಹಾಗೆಯೂ ಇರುವದು. ಆದದರಿಂದ ಈ ಅಲ್ಪ ಕಾರ್ಯಗಳಲ್ಲಿ ಮರುಳಾಗದೆ ಎಲ್ಲಾ ಜಾಗ್ರತೆಯಿಂದ ಕರ್ತನಿಗೆ ಸೇವೆ ಮಾಡುವವರಾಗಿರ ಬೇಕು. (೨೯—೩೧. ವ.)

6. ನೀರ ಬೊಬ್ಬುಳಿಯಂತೆ ನಿಲ್ಲದೆ ಹೋಗುವ ಈ ಲೋಕದ ಸಂತೋಷಗಳು ಸ್ಥಿರವೆಂದೆಣಿಸಿ ಅನುಭವಿಸುವದೇ ದುರನುಭವ. ದೇವರು ನಮಗೆ ತಕ್ಕ ಪ್ರಕಾರ ಅನುಭವಿಸ ಕೊಟ್ಟಿದ್ದಾನೆ ಹೊರ್ತು ದುರನುಭವ ಮಾಡುವದಕ್ಕೆ ಅಲ್ಲ.

7. ನಾಟಕಶಾಲೆಯಲ್ಲಿ ತೋರುವ ಒಂದೊಂದು ವೇಷವು ಶೀಘ್ರವಾಗಿ ಮರೆಯಾಗಿ ಹೋಗುವ ಪ್ರಕಾರ ಈ ಲೋಕವೆಂಬ ನಾಟಕಶಾಲೆಯ ವೇಷಗಳು ಸಹ ಶೀಘ್ರವಾಗಿ ದಾಟಿ ಹೋಗುವವು. ಆದದರಿಂದ ಈ ಲೋಕದ ದ್ರವ್ಯದಲ್ಲಿ ಮನಸ್ಸಿಡದೆ ನಿಜ ದ್ರವ್ಯವಾದ ಪರಲೋಕಭಾಗ್ಯವನ್ನು ಹುಡುಕಿ ನಡಿಯುವ.

೩೫ [1]ನಿಮ್ಮ ಸ್ವಂತ ಪ್ರಯೋಜನಕ್ಕೆ ಇದನ್ನು ಹೇಳುತ್ತೇನೆ; ನಿಮಗೆ ಉರುಲೊಡ್ಡುವದಕ್ಕಲ್ಲ, ಆದರೆ ಕರ್ತನ ವಿಷ
೩೬ ಯವಾದ ಯೋಗ್ಯತೆಯೂ ಚಪಲವಿಲ್ಲದ ಜಾಗ್ರತೆಯೂ ಇವುಗಳಿಗೋಸ್ಕರವೇ. ಆದರೆ ಒಬ್ಬನು ತನ್ನ
ಕನ್ನಿಕೆಯನ್ನು ಕುರಿತು ಹೆಚ್ಚು ಪ್ರಾಯವಾಗುವದು ಅಯುಕ್ತವೆಂದು ನೆನಸಿದರೆ, ಮತ್ತು ಹಾಗೆ ಆಗ ಬೇ
ಕಾದರೆ, ಮನಸ್ಸು ಬಂದ ಹಾಗೆ ಮಾಡಲಿ; ಪಾಪ ಮಾಡನು; ಅವರು ಮದುವೆ ಮಾಡಿ ಕೊಳ್ಳಲಿ.
೩೭ ಆದರೆ ತನ್ನ ಹೃದಯದಲ್ಲಿ ದೃಢವಾಗಿದ್ದು, ಅವಸರವಿಲ್ಲದೆ, [2]ತನ್ನ ಚಿತ್ತಕ್ಕೆ ಸ್ವತಂತ್ರನಾಗಿದ್ದು, ತನ್ನ ಕನ್ನಿಕೆ
ಯನ್ನು ಕೊಡದೆ ಇರುವೆನೆಂದು, ತನ್ನ ಹೃದಯದಲ್ಲಿ ನಿರ್ಣಯಿಸಿ ಕೊಂಡಿರುವವನು ಚನ್ನಾಗಿ ಮಾಡುತ್ತಾನೆ.
೩೮ ಹೀಗಿರಲಾಗಿ, ಮದುವೆ ಮಾಡಿ ಕೊಡುವವನು ಚನ್ನಾಗಿ ಮಾಡುತ್ತಾನೆ; ಆದರೆ ಮದುವೆ ಮಾಡಿ ಕೊಡ
ದವನು ಮತ್ತೂ ಚನ್ನಾಗಿ ಮಾಡುತ್ತಾನೆ.
೩೯ ಹೆಂಡತಿಯು ತನ್ನ ಗಂಡನು ಬದುಕುವಷ್ಟು ಕಾಲ ನ್ಯಾಯದಿಂದ ಬಂಧಿಸಲ್ಪಟ್ಟಿದ್ದಾಳೆ. ಅವಳ ಗಂಡನು
ಸತ್ತಿದ್ದರೆ, ಬೇಕಾದವನನ್ನು ಮದುವೆ ಮಾಡಿ ಕೊಳ್ಳ ಸ್ವತಂತ್ರಳಾಗಿದ್ದಾಳೆ; [3]ಕರ್ತನಲ್ಲಿ ಮಾತ್ರ ಆಗಲಿ.
೪೦ ಆದರೆ ಅವಳು ಹಾಗೆಯೇ ಇರುತ್ತಿದ್ದರೆ, [4]ನನ್ನ ಆಲೋಚನೆಯ ಪ್ರಕಾರ, ಅಧಿಕ [5]ಭಾಗ್ಯವಂತಳಾಗಿದ್ದಾಳೆ.
ಮತ್ತು ನಾನು ಸಹ ದೇವರ ಆತ್ಮವನ್ನು ಹೊಂದಿದ್ದೇನೆಂದು ನೆನಸುತ್ತೇನೆ.

ವಿಗ್ರಹಗಳಿಗೆ ಅರ್ಪಿಸಲ್ಪಟ್ಟವುಗಳನ್ನು ಉಣ್ಣುವದರ ವಿಷಯ ಆಜ್ಞಾಪಿಸಿದ್ದು; ಮತ್ತೊಬ್ಬರ ಮನಸ್ಸಾಕ್ಷಿಗೆ
ನೋವು ಕೊಡದಂತೆ ಎಚ್ಚರಿಸಿದ್ದು.

**8.** [6]ಇದಲ್ಲದೆ ವಿಗ್ರಹಬಲಿಗಳನ್ನು ಕುರಿತು, ಎಲ್ಲರು [7]ತಿಳುವಿಕೆಯುಳ್ಳವರಾಗಿದ್ದೇವೆಂದು ಬಲ್ಲೆವು. ತಿಳುವಿ

1. ಮದುವೆ ಇಲ್ಲದವರು ತಡೆ ಇಲ್ಲದೆ ತಮ್ಮ ಕರ್ತನ ಸೇವೆ ಮಾಡ ಬಹುದು. ಮದುವೆಯಾದವರಿಗೆ ಸಂಸಾರದ ಚಿಂತೆಗಳಿರುವದರಿಂದ ಆ ಸೇವೆಗೆ ಆಟಂಕ ಬರುವದು. ಆದಾಗ್ಯೂ ಪೌಲನು ಅವರಿಗೆ ಇದನ್ನು ಭಾರವಾಗಿ ಹೇಳದೆ ಅವರ ಸ್ಥಿತಿಗೆ ತಕ್ಕ ಒಂದು ಯೋಚನೆಯಾಗಿ ಹೇಳುತ್ತಾನೆ.

2. ತಂದೆ ತನ್ನ ಮಗಳ ಮದುವೆಯನ್ನು ಕುರಿತು ತನ್ನ ಇಷ್ಟದ ಪ್ರಕಾರ ಮಾಡ ಬಹುದು, ಕಡ್ಡಾಯವಿಲ್ಲ. ಈ ವಿಷಯದಲ್ಲಿ ಮಗಳ ಇಷ್ಟವನ್ನು ಕುರಿತು ಏನೂ ಹೇಳಲಿಲ್ಲ. ಅವಳ ಮನಸ್ಸು ತಂದೆಗೆ ತಿಳಿದಿರುವದರಿಂದ ಅದನ್ನು ಕುರಿತು ಏನೂ ಹೇಳಲಿಲ್ಲ.

3. ಕ್ರೈಸ್ತಭಕ್ತನನ್ನೇ ಮದುವೆ ಮಾಡ ಬೇಕೆಂಬುವದು ಪೌಲನ ತಾತ್ಪರ್ಯವು.

4. ಈ ವಿಷಯದಲ್ಲಿ ಪೌಲನ ಅಭಿಪ್ರಾಯವು ಏನೆಂದು ೨೫ನೇ ವಚನದಲ್ಲಿ ತೋರುತ್ತದೆ. ಆತನು ಪರಿಶುದ್ಧಾತ್ಮನ ವರವನ್ನು ಹೊಂದಿದವನಾದದರಿಂದ ಆತನ ಆಲೋಚನೆಯನ್ನು ಎಲ್ಲರೂ ಒಪ್ಪಿ ಕೊಳ್ಳ ತಕ್ಕದ್ದು. (೧ ಥೆಸ್ಸ. ೪. ೮.)

5. ಉಪದ್ರ ಉಂಟಾಗಿದ್ದ ಆ ಕಾಲದಲ್ಲಿ ಮದುವೆ ಮಾಡಿ ಕೊಳ್ಳದವಳು, ಅನೇಕ ಚಿಂತೆಗಳಿಗೂ ಸಂಕಟಗಳಿಗೂ ತೊಲಗಿರುವದರಿಂದ ಭಾಗ್ಯವಂತಳೇ.

6. ವಿಗ್ರಹಗಳಿಗೆ ಅರ್ಪಿಸಲ್ಪಟ್ಟವುಗಳನ್ನು ಉಣ್ಣುವದು ಸರಿಯೋ? ಎಂದು ಕೊರಿಂಥದ ಸಭೆಯವರು ಪೌಲನನ್ನು ಕೇಳಿರುವರು. ಅದಕ್ಕವನು ಈ ಸಂಧಿಯಲ್ಲಿ ಉತ್ತರ ಹೇಳುತ್ತಾನೆ. ದೇವರ ಕಟ್ಟಳೆಗಳನ್ನು ಅತ್ಯಂತ ಭಕ್ತಿಯಿಂದ ಕೈಕೊಳ್ಳುವ ವಿಷಯದಲ್ಲಿ ತಿಳುವಿಕೆಗಿಂತ ಪ್ರೀತಿಯೇ ಪ್ರಧಾನವಾದದ್ದು. (೮. ೧—೩.) ವಿಗ್ರಹವು ಏನೂ ಇಲ್ಲವೆಂದೂ, ಅದಕ್ಕೆ ಅರ್ಪಿಸಲ್ಪಟ್ಟವುಗಳನ್ನು ಉಣ್ಣುವದು ದೋಷವಲ್ಲವೆಂದೂ ಕೆಲವರಿಗೆ ತಿಳಿದಿದ್ದಾಗ್ಯೂ, (೪—೬. ವ.) ಎಲ್ಲರಿಗೂ ಇಂಥಾ ತಿಳುವಿಕೆ ಇಲ್ಲದ್ದರಿಂದ, ಬೇರೆ ಬಲಹೀನ ವಿಶ್ವಾಸಿಗಳ ಮನಸ್ಸಾಕ್ಷಿಗೆ ನೋವು ಉಂಟಾಗದ ಹಾಗೆಯೂ, ಹೀಗೆ ಕ್ರಿಸ್ತನಿಗೆ ವಿರೋಧವಾಗಿ ಪಾಪ ಮಾಡದ ಹಾಗೆಯೂ ಅವುಗಳನ್ನು ಉಣ್ಣದೆ ಇರುವದು ಉತ್ತಮ. (೭—೧೨. ವ.) ಮತ್ತೊಬ್ಬರನ್ನು ಪಾಪದಲ್ಲಿ ಬೀಳಿಸದ ಹಾಗೆ ತಾನು ಎಂದೂ ಬಾಡು ತಿನ್ನುವದಿಲ್ಲವೆಂದೂ, (೧೩. ವ.) ಮತ್ತೊಬ್ಬರ ಮೇಲಿಗಾಗಿ ತಾನು ತನ್ನ ಅಪೊಸ್ತಲತನಕ್ಕೆ ತಕ್ಕ ಸ್ವತಂತ್ರವನ್ನಾದರೂ ಅಲ್ಲಗಳೆದು, ವಿರಕ್ತನಾಗಿಯೂ ಸ್ವಂತ ಜೀವನಕ್ಕೆ ಕೈಕೆಲಸ ಮಾಡುವವನಾಗಿಯೂ ಇರ ನಿರ್ಣಯಿಸಿ ಕೊಂಡಿದ್ದೇನೆಂದೂ ಪೌಲನು ಹೇಳುತ್ತಾನೆ. (೯. ೧—೬.) ಕೆಲಸ ಮಾಡುವ ಮನುಷ್ಯನಿಗೂ ಮೃಗಕ್ಕೂ ಆಹಾರ ಶಿಕ್ಕುವದು ಸಹಜವಾದ ಪ್ರಮಾಣವಾಗಿಯೂ, ಸುವಾರ್ತೆಯನ್ನು ಪ್ರಸಂಗಿಸುವವರಿಗೆ ಅದರ ಬೋಧನೆ ಹೊಂದುವವರಿಂದ ಸಹಾಯ ದೊರಕುವದು ವೇದಪ್ರಮಾಣವಾಗಿಯೂ ಇದ್ದಾಗ್ಯೂ, ಅವುಗಳನ್ನು ಆತನು ಚಿಂತಿಸದೆ, ಈ ವಿಷಯದಲ್ಲಿ ಒಬ್ಬರಿಗೂ ಭಾರವಾಗದಂತೆ ನಡಕೊಂಡನು. ಮತ್ತು ಎಲ್ಲರಿಗೂ ಮೇಲು ಮಾಡುವದಕ್ಕೆ ಅವರವರ ಸ್ಥಿತಿಗೆ ತಕ್ಕ ಹಾಗೆ ನಡಕೊಂಡನು. (೭—೨೩. ವ.) ಅದೇ ಪ್ರಕಾರ ಅವರು ಸಹ ತಮ್ಮ ಸ್ವಂತ ಮೇಲಿಗೆ ತಮ್ಮನ್ನು ಅಲ್ಲಗಳೆದು ನಡಿಯ ಬೇಕೆಂದು ತೋರಿಸುತ್ತಾನೆ. (೨೪—೨೭. ವ.) ಪೂರ್ವಿಕ ಇಸ್ರಾಯೇಲ್ಯರ ನಡತೆಯನ್ನು ತೋರಿಸಿ, ವಿಗ್ರಹಾರಾಧನೆಗೂ ಅಕ್ರಮಕ್ಕೂ ತೊಲಗ ಬೇಕೆಂದು ಹೇಳುತ್ತಾನೆ. (೧೦. ೧—೧೩.) ವಿಗ್ರಹಾರಾಧನೆಯ ಪಾಪಕ್ಕೆ ತೊಲಗ ಬೇಕೆಂದೂ, ಕರ್ತನ ರಾತ್ರಿಭೋಜನವನ್ನು ಅನುಭವಿಸುವವರು ಅಜ್ಞಾನರ ಹಬ್ಬಗಳಲ್ಲಿ ಹ್ಯಾಗಾದರೂ ಕಲತರೆ, ದೇವರ ಕೋಪ ಬರುವದೆಂದೂ, (೧೪—೨೨. ವ.) ವಿಗ್ರಹಗಳಿಗೆ ಅರ್ಪಿಸಲ್ಪಟ್ಟವುಗಳನ್ನು ಉಣ್ಣುವದರಲ್ಲಿ ಮನಸ್ಸಾಕ್ಷಿಯ ಪ್ರಕಾರ ದೋಷವಿಲ್ಲದಿದ್ದಾಗ್ಯೂ, ಮತ್ತೊಬ್ಬರಿಗೆ ಕೇಡಾಗದಂತೆ ಅವುಗಳನ್ನು ಉಣ್ಣದೆ ಇರ ಬೇಕೆಂದು ಹೇಳುತ್ತಾನೆ. (೧೦. ೨೩—೧೧. ೧.)

7. ಈ ವಿಷಯವನ್ನು ನಿರ್ಣಯಿಸುವದಕ್ಕೆ ತಿಳುವಿಕೆ ಮಾತ್ರ ಸಾಕಾದರೆ, ಅದನ್ನು ಸುಲಭವಾಗಿ ತೀರಿಸ ಬಹುದು. ಆದರೆ ಪ್ರೀತಿಯ ಸಂಗಡ ಕೂಡಿರದ ತಿಳುವಿಕೆಯು ಉಬ್ಬಿಸುತ್ತದೆ. ಭಕ್ತಿಸಮ್ಮಂಧವಾದ ವಿಷಯಗಳಲ್ಲಿ ಪ್ರೀತಿಯೇ ಪ್ರಯೋಜನವಾದದ್ದು.



೨ ಕೆಯು ಉಬ್ಬಿಸುತ್ತದೆ, ಆದರೆ ಪ್ರೀತಿಯು ಆತ್ಮವೃದ್ಧಿ ಮಾಡುತ್ತದೆ. ಮತ್ತು ಒಬ್ಬನು ಏನಾದರೂ ತಿಳಿ
೩ ಯುತ್ತೇನೆಂದು ನೆನಸಿದರೆ, ತಿಳಿಯ ತಕ್ಕ ಹಾಗೆ [1]ಇನ್ನೂ ಏನೂ ಅರಿಯನು. ಆದರೆ ದೇವರನ್ನು ಒಬ್ಬನು
೪ ಪ್ರೀತಿ ಮಾಡಿದರೆ, ಇವನು [2]ಅವನಿಂದ ತಿಳಿಯಲ್ಪಟ್ಟಿದ್ದಾನೆ. ಆದ ಕಾರಣ ವಿಗ್ರಹಬಲಿಗಳ ಉಣ್ಣುವ
ದನ್ನು ಕುರಿತು, [3]ವಿಗ್ರಹವು ಲೋಕದಲ್ಲಿ ಏನೂ ಇಲ್ಲವೆಂದೂ, ಒಬ್ಬನೇ ಹೊರ್ತು ಬೇರೆ ದೇವರು ಇಲ್ಲ
೫ ವೆಂದೂ, ಬಲ್ಲೆವು. ಯಾಕಂದರೆ ಆಕಾಶದಲ್ಲಾಗ್ಯದರೂ ಭೂಮಿಯ ಮೇಲಾದರೂ ದೇವರುಗಳೆಂದು ಕರೆ
೬ ಯಲ್ಪಡುವವುಗಳು ಇದ್ದರೂ,—ಅನೇಕ ದೇವರುಗಳೂ ಅನೇಕ ಕರ್ತರೂ ಇದ್ದಾರಲ್ಲ?—ಆದರೆ [4]ನಮಗೆ
ತಂದೆಯಾದ ಒಬ್ಬನೇ ದೇವರು; ಅವನಿಂದ ಸಮಸ್ತವು; ಮತ್ತು ನಾವು ಅವನಿಗೋಸ್ಕರವು. ಇದಲ್ಲದೆ ಯೇಸು
ಕ್ರಿಸ್ತನಾದ ಒಬ್ಬನೇ ಕರ್ತನು; ಅವನ ಮುಖಾಂತರ ಸಮಸ್ತವು; ಮತ್ತು ನಾವು ಅವನ ಮುಖಾಂತರವು.
೭ ಆದರೆ ಆ ತಿಳುವಿಕೆಯು ಎಲ್ಲರಲ್ಲಿ ಇಲ್ಲ; [5]ಕೆಲವರು ವಿಗ್ರಹದ ಭಾವನೆಯಿಂದ ಈ ವರಿಗೂ ವಿಗ್ರಹಬಲಿ
ಎಂದು ಉಣ್ಣುತ್ತಾರೆ; ಹೀಗೆ ಅವರ ಮನಸ್ಸಾಕ್ಷಿಯು ಬಲಹೀನವಾಗಿದ್ದು, ಮಲಿನವಾಗುತ್ತದೆ.
೮ ಆದರೆ ಆಹಾರವು ನಮ್ಮನ್ನು [6]ದೇವರ ಮುಂದೆ ಪ್ರತಿಷ್ಠೆ ಮಾಡುವದಿಲ್ಲ; ಯಾಕಂದರೆ ಉಂಡರೆ, ನಮಗೆ
೯ ಹೆಚ್ಚು ಇಲ್ಲ; ಉಣ್ಣದಿದ್ದರೆ, ಕಡಿಮೆ ಇಲ್ಲ. ಆದರೆ ನಿಮ್ಮ ಅಧಿಕಾರವು ಒಂದು ವೇಳೆ ಬಲಹೀನರಿಗೆ ಎಡ
೧೦ ತಡೆಯಾಗದ ಹಾಗೆ, ನೋಡಿ ಕೊಳ್ಳಿರಿ. ಯಾಕಂದರೆ ತಿಳುವಿಕೆಯುಳ್ಳ ನೀನು ವಿಗ್ರಹಸ್ಥಾನದಲ್ಲಿ ಪಙ್ತಿ
ಯಲ್ಲಿರುವದನ್ನು ಒಬ್ಬನು ನೋಡಿದರೆ, ಬಲಹೀನನಾದಂಥ ಅವನ ಮನಸ್ಸಾಕ್ಷಿಯು ವಿಗ್ರಹಬಲಿಯನ್ನು
೧೧ ಉಣ್ಣುವದಕ್ಕೆ [7]ದೃಢವಾಗುವದಿಲ್ಲವೋ? ಮತ್ತು ಯಾವನಿಗೋಸ್ಕರ ಕ್ರಿಸ್ತನು ಸತ್ತನೋ, ಆ ಬಲಹೀನ
೧೨ ಸಹೋದರನು ನಿನ್ನ ತಿಳುವಿಕೆಯ ನಿಮಿತ್ತ [8]ನಾಶವಾಗಲೋ? ಆದರೆ ಹೀಗೆಯೇ ಸಹೋದರರ ಮೇಲೆ ಪಾಪ

ಪ್ರೀತಿಯ ಸಂಗಡ ಕೂಡಿರದ ತಿಳುವಿಕೆಯನ್ನು ಕುರಿತು ಉಬ್ಬಿಕೊಳ್ಳುವವರಿಗೆ ೨ನೇ ೩ನೇ ವಚನಗಳಲ್ಲಿ ಒಳ್ಳೇ ಬುದ್ಧಿ ಹೇಳಿ ಇದೆ. (೧೩. ಸಂಧಿ.)

1. ತನ್ನ ಪೂರ್ಣ ಹೃದಯದಿಂದ ದೇವರನ್ನೂ, ತನ್ನ ಹಾಗೆ ತನ್ನ ನೆರೆಯವನನ್ನೂ ಪ್ರೀತಿ ಮಾಡಲರಿಯದವನು ಎಲ್ಲಾ ತಿಳುಕೊಂಡವನಂತೆ ಉಬ್ಬಿ ಕೊಂಡಾಗ್ಯೂ, ಏನೂ ಅರಿಯದವನಾಗಿಯೇ ಇದ್ದಾನೆ.

2. ಯಥಾರ್ಥವಾಗಿ ದೇವರನ್ನು ಅರಿತು ಆತನನ್ನು ಪ್ರೀತಿ ಮಾಡುವವನು, ಆತನಿಂದ ಅರಿಯಲ್ಪಟ್ಟು ಪ್ರೀತಿ ಮಾಡಲ್ಪಡುವನು. (ಯೋಹಾ. ೧೪. ೨೧—೨೩. ಗಲಾ. ೪. ೯.)

3. ವಿಗ್ರಹವು ಲೋಕದಲ್ಲಿ ಏನೂ ಇಲ್ಲವೆಂಬುವದು, ಅವುಗಳ ಹೆಸರು ಹೊಂದಿದ್ದ ವಸ್ತುಗಳು ಅಥವ ದೇವತೆಗಳು ಲೋಕದಲ್ಲಿ ಏನೂ ಇಲ್ಲವೆಂಬರ್ಥವಾಗುತ್ತದೆ. ವಿಗ್ರಹಗಳನ್ನು ಪೂಜಿಸುವವರು ದೆವ್ವಗಳನ್ನು ಪೂಜಿಸುತ್ತಾರೆಂದು ೧೦. ೨೦ಲ್ಲಿ ಪೌಲನು ಹೇಳುತ್ತಾನೆ. ಹಾಗೆ ಹೇಳಿದ್ದು ಈ ವಚನದ ತಾತ್ಪರ್ಯಕ್ಕೆ ವಿರೋಧವಲ್ಲ. ವಿಗ್ರಹಗಳ ಮೂಲಕವಾಗಿ ಪೂಜಿಸಿದವುಗಳು ಸುಳ್ಳು ದೇವತೆಗಳೇ ಹೊರ್ತು ನಿಜ ದೇವರಲ್ಲ.

4. ಹಿಂದೂ ಜನರಲ್ಲಿ ಮೂವತ್ತು ಮೂರು ಕೋಟಿ ದೇವತೆಗಳಿರುವ ಪ್ರಕಾರ ಪೂರ್ವಕಾಲದಲ್ಲಿದ್ದ ಗ್ರೇಕರು ರೋಮಾಯರು ಮುಂತಾದವರಲ್ಲಿಯೂ ಅನೇಕ ದೇವರುಗಳೂ ಕರ್ತರೂ ಇದ್ದರು. ಕ್ರೈಸ್ತರಿಗೆ ಸರ್ವಜೀವದಯಾಪರನಾದ ಒಬ್ಬನೇ ದೇವರಿದ್ದಾನೆ. ಆತನು ಆದ್ಯಂತರಹಿತನು. ಅವರಿಗೆ ಯೇಸು ಕ್ರಿಸ್ತನೆಂಬ ಒಬ್ಬನೇ ಕರ್ತನಿದ್ದಾನೆ. ಸೃಷ್ಟಿಗೂ ವಿಮೋಚನೆಗೂ ತಂದೆಯು ಆದಿಕರ್ತನಾಗಿಯೂ, ಕುಮಾರನು ಕಾರಣಕರ್ತನಾಗಿಯೂ ಇದ್ದಾನೆ. (ಕೊಲೊ. ೧. ೧೬.) ಕ್ರಿಸ್ತನು ಸಮಸ್ತವನ್ನು ಆಳುವ ಕರ್ತನು ಅನ್ನುವಾಗ ತಂದೆಯು ಕರ್ತನಲ್ಲವೆಂದು ಅರ್ಥವಾಗದು. ಹಾಗೆಯೇ ತಂದೆಯಾದ ಒಬ್ಬನೇ ದೇವರು ಅನ್ನುವಾಗ ಕುಮಾರನು ದೇವರಲ್ಲವೆಂದು ಅರ್ಥವಾಗದು.

5. ಅಜ್ಞಾನಮಾರ್ಗವನ್ನು ಬಿಟ್ಟು ಕ್ರೈಸ್ತರಾದವರಲ್ಲಿ ಕೆಲವರು ನಿಜವಾದ ಒಬ್ಬನೇ ದೇವರನ್ನು ಆರಾಧಿಸಿದಾಗ್ಯೂ, ವಿಗ್ರಹಗಳು ಸಹ ನಿಜವಾದ ವಸ್ತುಗಳೆಂದು ನಂಬಿದ್ದದರಿಂದ ವಿಗ್ರಹಗಳಿಗೆ ಅರ್ಪಿಸಲ್ಪಟ್ಟವುಗಳನ್ನು ಅವರು ಉಣ್ಣುವಾಗ ಅವುಗಳಿಗೆ ಘನ ಕೊಡುವ ಹಾಗೆ ಎಣಿಸಿದರು. ಆದದರಿಂದ ಇಂಥಾ ಅನಾಚಾರಗಳನ್ನು ನಡಿಸಿದವರ ಮನಸ್ಸಾಕ್ಷಿ ಅಶುಚಿಯಾಯಿತು. (ರೋಮಾ. ೧೪. ೨೨. ವಚನದ ವ್ಯಾಖ್ಯಾನ ನೋಡ ಬೇಕು.)

6. ಆತ್ಮವಿಷಯಗಳಲ್ಲಿ ಭೋಜನದಿಂದ ಏನೂ ಪ್ರಯೋಜನವಿಲ್ಲ. ಅದು ದೇವರ ಸಮ್ಮುಖದಲ್ಲಿ ನಮ್ಮನ್ನು ಒಳ್ಳೆಯವರಾಗಿ ಅಥವಾ ಕೆಟ್ಟವರಾಗಿ ಮಾಡಲಾರದು. ಆದಾಗ್ಯೂ ಬಲಹೀನ ಸಹೋದರರ ಮನಸ್ಸಾಕ್ಷಿಗೆ ಕಳಂಕ ಉಂಟು ಮಾಡಿ ಅವರನ್ನು ಪಾಪಕ್ಕೆ ಒಳಪಡಿಸುವಂತೆ ನಮ್ಮ ಮೇಲಾದ ತಿಳುವಿಕೆ ಸ್ವಾತಂತ್ರ್ಯಗಳಿಂದ ಅದಕ್ಕೆ ಸ್ಥಳ ಕೊಡ ಬಾರದು. (೯—೧೧. ವ.)

7. ದೃಢವಾಗುವದು ಎಂಬುವದಕ್ಕೆ ಅಭಿವೃದ್ಧಿ ಮಾಡುವದೆಂಬ ತಾತ್ಪರ್ಯವು. ಹೀಗೆ ಮತ್ತೊಬ್ಬರು ಕೇಡಿನಲ್ಲಿ ಅಭಿವೃದ್ಧಿಯಾಗುವ ಹಾಗೆ ಮಾಡುವವರಿಗೆ ಭಯಂಕರವಾದ ದಂಡನೆ ಬರುವದಲ್ಲವೋ?

8. ರೋಮಾ. ೧೪. ೧೫, ೧೬, ೨೨. ವಚನಗಳ ವ್ಯಾಖ್ಯಾನಗಳಲ್ಲಿ ನೋಡ ಬೇಕು.

ಮಾಡಿ, ಅವರ ಬಲಹೀನವಾದ ಮನಸ್ಸಾಕ್ಷಿಯನ್ನು [1]ನೋಯಿಸಿ, ಕ್ರಿಸ್ತನ ಮೇಲೆ ಪಾಪ ಮಾಡುತ್ತೀರಿ.
೧೩ ಆದದರಿಂದ [2]ಆಹಾರವು ನನ್ನ ಸಹೋದರನನ್ನು ಆಟಂಕಿಸಿದರೆ, ನನ್ನ ಸಹೋದರನನ್ನು ಆಟಂಕಿಸದ ಹಾಗೆ,
ನಾನು ಎಂದೆಂದಿಗೂ ಬಾಡು ಉಣ್ಣುವದಿಲ್ಲ.

ಕ್ರಿಸ್ತಮಾರ್ಗದ ಬೋಧಕರು ಲೋಕದ ಜೀವನಾರ್ಥಕ್ಕೆ ಪಾತ್ರರಾಗಿರುವದು; ಪೌಲನು ತನ್ನನ್ನು ಬೊಂಕಿ ನಡೆದ ಅವನ ಸುಮಾದ್ರಿಯು.

9. ನಾನು ಅಪೊಸ್ತಲನಲ್ಲವೋ? ಸ್ವತಂತ್ರನಲ್ಲವೋ? ನಮ್ಮ ಕರ್ತನಾದ ಯೇಸು ಕ್ರಿಸ್ತನನ್ನು [3]ಕಂಡವನಲ್ಲವೋ?
೨ ಕರ್ತನಲ್ಲಿ ನನ್ನ ಕೆಲಸವು ನೀವಲ್ಲವೋ? ಬೇರೊಬ್ಬರಿಗೆ ಅಪೊಸ್ತಲನಲ್ಲದಿದ್ದರೆ, ನಿಮಗಾದರೂ ಇದ್ದೇನೆ.
ಯಾಕಂದರೆ ನೀವೇ ಕರ್ತನಲ್ಲಿ ನನ್ನ ಅಪೊಸ್ತಲತನದ [4]ಮುದ್ರೆಯಾಗಿದ್ದೀರಿ.
೩, ೪ ನನ್ನನ್ನು ವಿಚಾರಿಸುವವರಿಗೆ ನನ್ನ ಉತ್ತರವು ಇದೇ— [5]ಉಣ್ಣಲೂ ಕುಡಿಯಲೂ ನಮಗೆ ಅಧಿಕಾರವಿಲ್ಲ
೫ ವೋ? ಸಹೋದರಿಯಾದ ಹೆಂಡತಿಯನ್ನು ಕರಕೊಂಡು ಹೋಗುವದಕ್ಕೆ, [6]ಮಿಕ್ಕಾದ ಅಪೊಸ್ತಲರೂ,
೬ [7]ಕರ್ತನ ಸಹೋದರರೂ, [8]ಕೇಫನೂ, ಇವರ ಹಾಗೆ ನಮಗೆ ಅಧಿಕಾರವಿಲ್ಲವೋ? ಇಲ್ಲವೆ [9]ಕೆಲಸ ಮಾಡ
ದಿರ ನನಗೂ ಬಾರ್ನಬನಿಗೂ ಮಾತ್ರ ಅಧಿಕಾರವಿಲ್ಲವೋ?
೭ ಎಂದಾದರೂ ಸ್ವಂತ ವೆಚ್ಚದಿಂದ ದಂಡುಸೇವೆ ಮಾಡುವವನ್ಯಾರು? ದ್ರಾಕ್ಷೇ ತೋಟ ನೆಟ್ಟು, ಅದರ
ಫಲದಲ್ಲಿ ತಿನ್ನದವನ್ಯಾರು? ಇಲ್ಲವೆ ಮಂದೆ ಮೇಯಿಸಿ, ಮಂದೆಯ ಹಾಲಿನಲ್ಲಿ ಉಣ್ಣದವನ್ಯಾರು?
೮ [10]ಮನುಷ್ಯನ ಪ್ರಕಾರ ಇವುಗಳನ್ನು ಹೇಳುತ್ತೇನೋ? ಇಲ್ಲವೆ ನ್ಯಾಯಪ್ರಮಾಣವು ಸಹ ಇವುಗಳನ್ನು

1. ನೋಯಿಸಿ ಎಂಬುವದಕ್ಕೆ ಹೊಡೆಯುವದೆಂಬ ಅರ್ಥವು. ಒಬ್ಬ ಬಲಹೀನನನ್ನು ಅಥವಾ ರೋಗಿಷ್ಠನನ್ನು ಕ್ರೂರವಾಗಿ ಹೊಡೆದರೆ ಹ್ಯಾಗೋ, ಹಾಗೆ ಬಲಹೀನ ವಿಶ್ವಾಸಿಗಳಿಗೆ ಆಟಂಕ ಉಂಟುಮಾಡುವವರು ಅವರ ಮನಸ್ಸಾಕ್ಷಿ ಹುಣ್ಣಾಗುವಂತೆ ಹೊಡಿಯುವವರಾಗಿದ್ದಾರೆ. ಅವರನ್ನು ಹೊಡಿಯುವವರು ಅವರಿಗಾಗಿ ಪ್ರಾಣ ಕೊಟ್ಟ ಕರ್ತನನ್ನು ಹೊಡಿಯುವವರ ಹಾಗಿದ್ದಾರೆ. (ಜೆಕ. ೨. ೮.)

2. ಆಹಾರವಂದರೆ ಎಲ್ಲಾ ವಿಧದ ಆಹಾರಕ್ಕೂ ಅದೇ ಹೆಸರು. ಆದಾಗ್ಯೂ ಪೌಲನು ಇಲ್ಲಿ ಮಾಂಸಾಹಾರವನ್ನು ಕುರಿತು ಹೇಳುತ್ತಾನೆ. ಈ ಮಾಂಸಾಹಾರವನ್ನು ಅವನು ಪೂರ್ಣವಾಗಿ ಬಿಟ್ಟುಬಿಟ್ಟನೆಂಬುವದಕ್ಕೆ ತಕ್ಕ ದೃಷ್ಟಾಂತವಿಲ್ಲ. ಆದರೆ ಈ ವಿಷಯದಲ್ಲಿ ಅವನ ನಿರ್ಣಯವೇನಂದರೆ, ಮಾಂಸಾಹಾರವು ಬಲಹೀನರಿಗೆ ಆಟಂಕವನ್ನೂ ಕೇಡನ್ನೂ ಉಂಟು ಮಾಡ ತಕ್ಕದ್ದಾಗಿದ್ದರೆ, ಅದನ್ನು ಎಂದಿಗೂ ಮುಟ್ಟುವದಿಲ್ಲವೆಂಬುವದೇ. ಇದು ಎಷ್ಟು ಹಿತಚಿಂತೆ ಎಂದು ಆಲೋಚಿಸಿರಿ.

3. ಪೌಲನು ದಮಸ್ಕಕ್ಕೆ ಹೋಗುವ ದಾರಿಯಲ್ಲಿ ಕರ್ತನು ಅವನಿಗೆ ಕಾಣಿಸಿ ಕೊಂಡನು. (ಅಪೊ. ಕ್ರಿ. ೯. ೧೭.) ಮತ್ತೂ ಕೆಲ ಸಮಯಗಳಲ್ಲಿ ಅವನಿಗೆ ಆದ ದರ್ಶನಗಳನ್ನು ಕುರಿತೂ ಇಲ್ಲಿ ಹೇಳಿರ ಬಹುದು. (ಅಪೊ. ಕ್ರಿ. ೧೮. ೯; ೨೨. ೧೭, ೧೮.)

4. ಅವನ ಬೋಧನೆಯನ್ನು ಕೇಳಿ ಅವರು ಗುಣ ಪಟ್ಟದ್ದರಿಂದ ಅವನ ಅಪೊಸ್ತಲೋದ್ಯೋಗಕ್ಕೆ ಮುದ್ರೆಯಾಗಿದ್ದರು. ಅದರ ವಿಷಯ ಅವನನ್ನು ಕೇಳಿದವರಿಗೆ ಇದೇ ತಕ್ಕ ಉತ್ತರವು. (೩. ವ.)

5. ಸಭೆಯ ಬೋಧಕರಾದ ನಾವು ಸಭೆಯವರ ಖರ್ಚಿನಿಂದ ಉಣ್ಣಲೂ ಕುಡಿಯಲೂ ನಮಗೆ ಅಧಿಕಾರವಿಲ್ಲವೋ? ಎಂಬುವದೇ ಇದರ ತಾತ್ಪರ್ಯವು.

6. ಅಪೊಸ್ತಲರೆಲ್ಲರೂ ಮದುವೆ ಮಾಡಿ ಕೊಳ್ಳಲಿಲ್ಲ. ಆದಾಗ್ಯೂ ಅವರಲ್ಲಿ ಅನೇಕರು ಮದುವೆ ಮಾಡಿ ಕೊಂಡಿದ್ದರೆಂದೂ, ಅವರು ಸುವಾರ್ತೆಯನ್ನು ಪ್ರಸಂಗಿಸುವದಕ್ಕೆ ಮಾಡಿದ ಪ್ರಯಾಣಗಳಲ್ಲಿ ತಮ್ಮ ಸಂಸಾರ ಸಹಿತವಾಗಿ ಹೋದರೆಂದೂ, ಎಲ್ಲರಿಗೂ ಭೋಜನ ಕೊಡ ಬೇಕಾದದ್ದು ಸಭೆಯವರ ಹಂಗು ಎಂದೂ ಇದರಿಂದ ತೋರುತ್ತದೆ.

7. ಮತ್ತಾ. ೧೩. ೫೫. ವಚನದ ವ್ಯಾಖ್ಯಾನದಲ್ಲಿಯೂ, ಯಾಕೋಬನ ಯೂದನ ಪತ್ರಿಕೆಗಳ ಪೀಠಿಕೆಯಲ್ಲಿಯೂ ನೋಡ ಬೇಕು.

8. ಕೇಫನೆಂಬ ಪ್ರತಿನಾಮವುಳ್ಳ ಪೇತ್ರನು ಮದುವೆ ಮಾಡಿಕೊಂಡವನಾಗಿದ್ದನೆಂಬುವದು ಪ್ರಕಟವಾಗಿದೆ. (ಮತ್ತಾ. ೮. ೧೪.) ಅವನ ಹೆಂಡತಿಯು ಸಹ ರಕ್ತಸಾಕ್ಷಿಯಾಗಿ ಸತ್ತಳೆಂದು ಪ್ರಸ್ತಾಪವುಂಟು. ಅದು ನಿಜವಾದರೆ, ಆ ಉತ್ತಮ ಭಕ್ತಳು ಸಹ ತನ್ನ ಗಂಡನ ಹಾಗೆ ಕ್ರಿಸ್ತನ ಮಾರ್ಗವನ್ನು ಪ್ರಸಿದ್ಧಿ ಮಾಡುವದರಲ್ಲಿ ಬಹಳ ಆಸಕ್ತಿಯುಳ್ಳವಳಾಗಿದ್ದಳೆಂದು ಹೇಳ ಬಹುದು.

9. ಕೈಕೆಲಸ ಮಾಡದೆ ಸಭೆಯ ಖರ್ಚಿನಿಂದ ಜೀವನ ಮಾಡುವದಕ್ಕೆ ಬೇರೆ ಅಪೊಸ್ತಲರಿಗೆ ಅಧಿಕಾರ ಇರುವದಾದರೆ, ನಮಗೂ ಆ ಅಧಿಕಾರವು ಇರ ಬೇಕಲ್ಲವೋ? ಎಂದು ಹೇಳಿ, ಆ ಅಧಿಕಾರವನ್ನು ಸ್ಥಾಪಿಸುವದಕ್ಕೆ (೭. ವ.) ದಂಡಿನವರು, ದ್ರಾಕ್ಷೇ ತೋಟದವರು, ಮಂದೆ ಮೇಯಿಸುವವರು ಇವರ ದೃಷ್ಟಾಂತಗಳಲ್ಲಿ ಕಾಣುವ ಸ್ವಾಭಾವಿಕ ಪ್ರಮಾಣವನ್ನೂ, ಹಳೇ ಒಡಂಬಡಿಕೆಯಲ್ಲಿರುವ ವೇದಪ್ರಮಾಣವನ್ನೂ ತೋರಿಸುತ್ತಾನೆ. (೯. ವ.)

10. ಯುದ್ಧ ಮಾಡುವವನಿಗೆ ಸಂಬಳವೂ, ದ್ರಾಕ್ಷೇ ತೋಟ ಮಾಡುವವನಿಗೆ ಅದರ ಫಲವೂ, ಮಂದೆ ಮೇಯಿಸುವವನಿಗೆ ಅದರ ಹಾಲೂ, ದೊರಕುವದು ಮನುಷ್ಯರಲ್ಲಿ ಸಾಧಾರಣ ಪದ್ಧತಿಯಾಗಿದೆ. ಇದು ದೇವರ ಏರ್ಪಾಡೂ ಆತನ ಕಟ್ಟಳೆಯೂ ಆಗಿದೆ.



೯ ಹೇಳುತ್ತದಲ್ಲವೋ? ಯಾಕಂದರೆ ಮೋಶೆಯ ನ್ಯಾಯಪ್ರಮಾಣದಲ್ಲಿ, [1]ಕಣ ತುಳಿಯುವ ಎತ್ತಿನ ಬಾಯಿ
ಕಟ್ಟ ಬೇಡೆಂದು ಬರೆದದೆ. (ದ್ವಿತೀಯ ನ್ಯಾ. ೨೫. ೪.) ಎತ್ತುಗಳಿಗೋಸ್ಕರ ದೇವರು ಚಿಂತೆ ಪಡುತ್ತಾ
೧೦ ನೋ? ಇಲ್ಲವೆ [2]ನಮಗೋಸ್ಕರ ಪೂರ್ಣವಾಗಿ ಹೇಳುತ್ತಾನೋ? ಹೌದು, ನಮಗೋಸ್ಕರ ಬರೆಯಲ್ಪಟ್ಟಿತು;
ಯಾಕಂದರೆ [3]ಉಳುವವನು ನಿರೀಕ್ಷೆಯಾಗಿ ಉಳ ತಕ್ಕದ್ದು; ಮತ್ತು ಕಣ ತುಳಿಸುವವನು ತನ್ನ ನಿರೀಕ್ಷೆಯ
೧೧ ಪಾಲು ಹೊಂದುವ ನಿರೀಕ್ಷೆಯಲ್ಲಿ ತುಳಿಸ ತಕ್ಕದ್ದು. ನಾವು ನಿಮಗೆ [4]ಆತ್ಮದವುಗಳನ್ನು ಬಿತ್ತಿದ್ದರೆ, ನಾವು
೧೨ ನಿಮ್ಮ ಮಾಂಸದವುಗಳನ್ನು ಕೊಯಿದು ಕೊಳ್ಳುವದು ದೊಡ್ಡದೋ? [5]ಬೇರೊಬ್ಬರು ನಿಮ್ಮ ಮೇಲಿರುವ
ಅಧಿಕಾರದಲ್ಲಿ ಪಾಲುಗಾರರಾಗಿದ್ದರೆ, ಹೆಚ್ಚಾಗಿ ನಾವಲ್ಲವೋ? ಆದರೆ ಈ ಅಧಿಕಾರವನ್ನು ಬಳಸಿ ಕೊಳ್ಳಲಿಲ್ಲ.
ಆದರೆ ಕ್ರಿಸ್ತನ ಸುವಾರ್ತೆಗೆ ಏನೂ ಅಡ್ಡಿ ಹಾಕದ ಹಾಗೆ, ಎಲ್ಲಾ ತಾಳಿ ಕೊಳ್ಳುತ್ತೇವೆ.
೧೩ ದೇವಾಲಯದ ಕೆಲಸಗಳನ್ನು ನಡಿಸುವವರು ದೇವಾಲಯದಿಂದ ಉಣ್ಣುತ್ತಾರೆಂದೂ, [6]ಬಲಿಪೀಠದ ಬಳಿ
೧೪ ಯಲ್ಲಿ ಕಾದು ಕೊಳ್ಳುವವರು ಬಲಿಪೀಠದ ಸಂಗಡ ಪಾಲುಗಾರರಾಗಿದ್ದಾರೆಂದೂ, ಅರಿಯರಾ? ಹಾಗೆಯೇ
[7]ಕರ್ತನು ಸುವಾರ್ತೆ ಹೇಳುವವರಿಗೆ ಸುವಾರ್ತೆಯಿಂದ ಬದುಕ ನೇಮಿಸಿದ್ದಾನೆ.
೧೫ ಆದರೆ [8]ನಾನು ಇವುಗಳಲ್ಲಿ ಒಂದನ್ನೂ ಬಳಸಿ ಕೊಳ್ಳಲಿಲ್ಲ; ಮತ್ತು ಹಾಗೆ ನನಗೆ ಆಗ ಬೇಕೆಂದು, ಇವುಗ
ಳನ್ನು ಬರೆಯಲಿಲ್ಲ. ಯಾಕಂದರೆ ಯಾವನಾದರೂ [9]ನನ್ನ ಹೆಚ್ಚಳವನ್ನು ಹೀನ ಮಾಡುವದಕ್ಕಿಂತ ಸಾಯು
೧೬ ವದು ನನಗೆ ಬಹು ಒಳ್ಳೇದು. ಯಾಕಂದರೆ ಸುವಾರ್ತೆ ಪ್ರಸಂಗಿಸಿದರೆ, ನನಗೆ ಹೆಚ್ಚಳವಿಲ್ಲ. ಹ್ಯಾಗಂ
೧೭ ದರೆ ಅದು ನನ್ನ ಮೇಲೆ ಬಿದ್ದ ಭಾರ; ಮತ್ತು ಸುವಾರ್ತೆ ಪ್ರಸಂಗಿಸದಿದ್ದರೆ, ನನಗೆ ಅಯ್ಯೋ! ಯಾಕಂದರೆ
ಇದನ್ನು ಮನಸ್ಸುಳ್ಳವನಾಗಿ ಮಾಡಿದರೆ, ನನಗೆ ಬಹುಮಾನ ಉಂಟು; ಮನಸ್ಸಿಲ್ಲದವನಾದರೆ, [10]ಮನೆವಾರ್ತೆ

1. ಮಾತಾಡಲಾರದ ಮೃಗಕ್ಕೆ ಸಹ ಆಹಾರ ದೊರಕುವಂತೆ ಸರ್ವಜೀವದಯಾಪರನಾದ ದೇವರು ಪ್ರಮಾಣ ವಿಧಿಸಿದ್ದಾನೆ. (ದ್ವಿತೀಯ ನ್ಯಾ. ೨೫. ೪.)

2. ಅಲ್ಪಜೀವಿಯಾದ ಎತ್ತಿಗೋಸ್ಕರ ಚಿಂತೆ ಪಡುವ ದೇವರು ಅವುಗಳಿಗಿಂತ ಅಧಿಕವಾದ ಮನುಷ್ಯರಿಗೋಸ್ಕರವೂ ಚಿಂತೆ ಪಡುತ್ತಾನೆ ಎಂಬುವದು ಈ ಕಟ್ಟಳೆಯಲ್ಲಿ ಅಡಗಿ ಇದೆ.

3. ಉಳುವವನಾದರೂ ಕಣ ತುಳಿಸುವವನಾದರೂ ತಾವು ಪಡುವ ಕಷ್ಟದಿಂದ ಫಲ ಬರುವದೆಂಬ ನಂಬಿಕೆಯಿಂದಲೇ ಹಾಗೆ ಮಾಡುತ್ತಾರೆ. ಅದೇ ಪ್ರಕಾರ ಸಭೆ ಎಂಬ ದೇವರ ಹೊಲದಲ್ಲಿ ಕೆಲಸ ಮಾಡುವವರು ಸಹ ತಮ್ಮ ಪ್ರಯಾಸಕ್ಕೆ ತಕ್ಕ ಫಲವನ್ನು ಹೊಂದ ತಕ್ಕದ್ದು ನ್ಯಾಯವೇ. (೩. ೯.)

4. ನಾಶವಾಗದ ಆತ್ಮಗಳಿಗೆ ಮೇಲು ಮಾಡುವವರಿಗೆ, ಅವರ ಶರೀರಗಳಿಗೆ ಬೇಕಾದ ಅನ್ನ ವಸ್ತ್ರ ಮುಂತಾದ ಉಪಕೃತಿಗಳನ್ನು ಕೊಡುವದು ದೊಡ್ಡ ಕಾರ್ಯವೋ?

5. ನನಗೆ ವಿರೋಧಿಗಳಾಗಿರುವ ನಿಮ್ಮ ಬೋಧಕರು ತಮ್ಮ ಸಂರಕ್ಷಣೆಗೆ ಬೇಕಾದವುಗಳನ್ನು ನಿಮ್ಮ ಬಳಿಯಲ್ಲಿ ಕೇಳುತ್ತಾರೆ. (೨ಕೊರಿ. ೧೧. ೨೦.) ನಿಮ್ಮ ಸಭೆಯನ್ನು ಸ್ಥಾಪಿಸಿದವನಾದ ನಾನು ನಿಮ್ಮ ನಿಮಿತ್ತ ನಾನಾ ಸಂಕಟಗಳನ್ನೂ ಕಷ್ಟಗಳನ್ನೂ ಸಹಿಸುತ್ತಾ ಬರುತ್ತೇನೆ. (೨ಕೊರಿ. ೧೧. ೨೭.) ನಾನು ನನ್ನ ಸ್ವಪ್ರಯೋಜನವನ್ನು ಹುಡುಕುವವನಾಗಿ ತೋರುವದರಿಂದ ಸುವಾರ್ತೆಯ ಪ್ರಬಲಕ್ಕೆ ಅಡ್ಡಿಯಾಗದಂತೆ ಹೀಗೆ ಮಾಡುತ್ತೇನೆ, ಅನ್ನುತ್ತಾನೆ. (೧೮. ವ.)

6. (ಅಂಕೆ. ೧೮. ೮—೧೯.) ಬಲಿಪೀಠದ ಬಳಿಯ ಸೇವೆ ಮಾಡುವ ಯಾಜಕರಿಗೆ ಜನರಿಂದ ಜೀವನ ನಡೆಯುತ್ತಿದ್ದ ಪ್ರಕಾರ, ಕ್ರಿಸ್ತನ ಸಭೆಯಲ್ಲಿ ಸೇವೆ ಮಾಡುವವರಿಗೆ ಸಭೆಯವರಿಂದ ಜೀವನ ನಡಿಯ ಬೇಕಾದದ್ದು ನ್ಯಾಯವಾಗಿಯೂ, ಯುಕ್ತವಾಗಿಯೂ, ದೇವರ ಕಟ್ಟಳೆಯಾಗಿಯೂ ಇರುತ್ತದೆ.

7. ಮತ್ತಾ. ೧೦. ೧೦. ಲೂಕ. ೧೦. ೪, ೭. ವಚನಗಳ ವ್ಯಾಖ್ಯಾನಗಳನ್ನು ನೋಡ ಬೇಕು. (೧ ತಿಮೊ. ೫. ೧೮.)

8. ಬೇರೊಬ್ಬರು ತಮ್ಮ ಬಾಧ್ಯತೆಯ ಪ್ರಕಾರ ನಡೆದಾಗ್ಯೂ, ನಾನು ಹಾಗೆ ನಡಿಯಲಿಲ್ಲ; ನಾನು ಈಗ ನನ್ನ ಸ್ವಪ್ರಯೋಜನವನ್ನು ಬಯಸಿ ಹೀಗೆ ಬರಿಯಲಿಲ್ಲ, ಅನ್ನುತ್ತಾನೆ.

9. ಅವನು ಸುವಾರ್ತೆಯನ್ನು ಪ್ರಸಂಗಿಸ ಹಂಗುಳ್ಳವನಾಗಿದ್ದದರಿಂದ ಅದನ್ನು ಪ್ರಸಂಗಿಸುವದರಲ್ಲಿ ಹೆಚ್ಚಳ ಪಡ ತಕ್ಕ ಕಾರಣವಿಲ್ಲ. (೧೬. ವ.) ಆದಾಗ್ಯೂ ತನ್ನಿಂದ ಬೋಧನೆ ಹೊಂದಿದವರಲ್ಲಿ ತನ್ನ ಭೋಜನಕ್ಕೆ ಬೇಕಾದ ಸಹಾಯ ಹೊಂದ ತಕ್ಕ ಬಾಧ್ಯತೆ ತನಗುಂಟಾಗಿದ್ದರೂ, ತನ್ನ ಯಥಾರ್ಥತ್ವಕ್ಕೂ ಭಕ್ತಿ ವೈರಾಗ್ಯಕ್ಕೂ ದೃಷ್ಟಾಂತವಾಗಿ ಅದನ್ನು ಹೊಂದದೆ ಇದ್ದ ನಿಮಿತ್ತ ಅದರ ವಿಷಯ ಹೆಚ್ಚಳ ಪಡ ಹೇತುವೆ ಇತ್ತು. ಅದನ್ನು ಒಬ್ಬನು ಹೀನ ಮಾಡಿದರೆ, ತನ್ನ ಪ್ರಾಣ ಹೋದ ಹಾಗಿರುವದು, ಅನ್ನುತ್ತಾನೆ.

10. ಮನೆವಾರ್ತೆ ಅಂದರೆ ಉಗ್ರಾಣಿಕನ ಕೆಲಸ ಹೊಂದಿದವನು. ಅದಕ್ಕೆ ಸಮ್ಮಂಧ ಪಟ್ಟ ಕೆಲಸಗಳನ್ನೆಲ್ಲಾ ಈಡೇರಿಸ ಹಂಗುಳ್ಳವನಾಗಿದ್ದಾನೆ. ಹಾಗೆಯೇ ಕರ್ತನ ದಾಸನಾದ ನಾನು ಆ ಕೆಲಸವನ್ನು ಈಡೇರಿಸುವ ಹಂಗಿನವನಾಗಿದ್ದೇನೆ. ಅದನ್ನು ಅವಶ್ಯ ಮಾಡಲೇ ಬೇಕು. ಆದರೂ ನನಗೆ ನ್ಯಾಯವಾಗಿ ಬರ ತಕ್ಕ ಮೇಲುಗಳ ಮೇಲೆ ಲಕ್ಷ್ಯವಿಡದೆ ಸಂಬಳವಿಲ್ಲದೆ ಈ ಕೆಲಸ ಮಾಡುತ್ತೇನೆ. (೧೮. ವ.) ಅನೇಕರನ್ನು ಆದಾಯ ಮಾಡಿ ಕೊಳ್ಳುವದಕ್ಕೆ ಸ್ವತಂತ್ರಿಕನಾದ ನಾನು (೧. ವ.) ಎಲ್ಲರಿಗೂ ಸೇವಕನಾದೆನು, ಅನ್ನುತ್ತಾನೆ. (೧೯. ವ.) ಅನೇಕ ಜನರನ್ನು ಕರ್ತನ ದಾಸರಾಗ ಮಾಡುವದೇ ಅವನು ಅಪೇಕ್ಷಿಸಿದ ಸಂಬಳವಾಗಿತ್ತು.

೧೮ ನನಗೆ ಒಪ್ಪಿಸಲ್ಪಟ್ಟದೆ. ಹಾಗಾದರೆ ನನಗೆ ಬಹುಮಾನವೇನು? ಸುವಾರ್ತೆ ಪ್ರಸಂಗಿಸುವಾಗ, ಸುವಾರ್ತೆ
ಯಲ್ಲಿರುವ ನನ್ನ ಅಧಿಕಾರವನ್ನು ದುರನುಭವ ಮಾಡದ ಹಾಗೆ, ಕ್ರಿಸ್ತನ ಸುವಾರ್ತೆಯನ್ನು ವೆಚ್ಚವಿಲ್ಲದೆ
ತಂದಿಡುವದೇ.
೧೯ ಯಾಕಂದರೆ ಎಲ್ಲರ ವಿಷಯ ಸ್ವತಂತ್ರನಾಗಿದ್ದು, ಇನ್ನೂ ಅನೇಕರನ್ನು ಸಂಪಾದಿಸುವದಕ್ಕೆ, ಎಲ್ಲರಿಗೆ ನನ್ನನ್ನು
೨೦ ದಾಸನಾಗ ಮಾಡಿ ಕೊಂಡಿದ್ದೇನೆ. ಮತ್ತು ಯೆಹೂದ್ಯರನ್ನು ಸಂಪಾದಿಸುವದಕ್ಕೆ, ಯೆಹೂದ್ಯರಿಗೆ ಯೆ
ಹೂದ್ಯನ ಹಾಗೆಯೂ, [1]ನ್ಯಾಯಪ್ರಮಾಣಾಧೀನರನ್ನು ಸಂಪಾದಿಸುವದಕ್ಕೆ, ನ್ಯಾಯಪ್ರಮಾಣಾಧೀನರಿಗೆ
೨೧ ನ್ಯಾಯಪ್ರಮಾಣಾಧೀನನ ಹಾಗೆಯೂ, [2]ನ್ಯಾಯಪ್ರಮಾಣವಿಲ್ಲದವರನ್ನು ಸಂಪಾದಿಸುವದಕ್ಕೆ, ನ್ಯಾಯ
ಪ್ರಮಾಣವಿಲ್ಲದವರಿಗೆ ನ್ಯಾಯಪ್ರಮಾಣವಿಲ್ಲದವನ ಹಾಗೆಯೂ, ಆದೆನು. ಆದರೆ ದೇವರಿಗೆ ನ್ಯಾಯಪ್ರಮಾ
೨೨ ಣವಿಲ್ಲದವನಾಗಿರದೆ, [3]ಕ್ರಿಸ್ತನಿಗೆ ನ್ಯಾಯಪ್ರಮಾಣಾಧೀನನಾಗಿದ್ದೇನೆ. ಬಲಹೀನರನ್ನು ಸಂಪಾದಿಸುವದಕ್ಕೆ,
[4]ಬಲಹೀನರಿಗೆ ಬಲಹೀನನ ಹಾಗೆ ಆದೆನು. ಹ್ಯಾಗಾದರೂ ಕೆಲವರನ್ನು ರಕ್ಷಿಸುವದಕ್ಕೆ, ಎಲ್ಲರಿಗೆ ಎಲ್ಲಾ
೨೩ ಆದೆನು. ಮತ್ತು ಅವರಲ್ಲಿ ಜತೆಪಾಲುಗಾರನಾಗುವ ಹಾಗೆ, ಇದನ್ನು [5]ಸುವಾರ್ತೆಗೋಸ್ಕರ ಮಾಡುತ್ತೇನೆ.
೨೪ [6]ಓಟದ ರಂಗದಲ್ಲಿ ಓಡುವವರು ಎಲ್ಲರು ಓಡುತ್ತಾರೆ, ಆದರೆ ಒಬ್ಬನು ಬಹುಮಾನ ತಕ್ಕೊಳ್ಳುತ್ತಾನೆಂದು
೨೫ ಅರಿಯರಾ? ಹಿಡಿದು ಕೊಳ್ಳುವ ಹಾಗೆಯೇ ಓಡಿರಿ. ಮತ್ತು ಜಟ್ಟಿಗಳೆಲ್ಲರು ಎಲ್ಲವುಗಳಲ್ಲಿ [7]ಮಿತಿಯಾಗಿ
ದ್ದಾರೆ. ಅವರು ಲಯವಾಗುವ ಕಿರೀಟವನ್ನು ತಕ್ಕೊಳ್ಳುವ ಹಾಗೆ, ನಾವೇ ನಿರ್ಲಯವಾದದ್ದನ್ನು.
೨೬ ಆದದರಿಂದ ನಾನು ಹಾಗೆಯೇ ಓಡುತ್ತೇನೆ, ನಿಶ್ಚಯವಿಲ್ಲದ ಹಾಗಲ್ಲ; ಹಾಗೆಯೇ ಗುದ್ದಾಡುತ್ತೇನೆ, [8]ಘಾಳಿ
೨೭ ಯನ್ನು ಬಡಿಯುವವನ ಹಾಗಲ್ಲ. ಆದರೆ ಒಂದು ವೇಳೆ ಬೇರೊಬ್ಬರಿಗೆ ಸಾರಿದ ಮೇಲೆ ನಾನೇ ಆಗದವ
ನಾಗಿ ಹೋಗದ ಹಾಗೆ, [9]ನನ್ನ ಶರೀರವನ್ನು ಕುಟ್ಟಿ, ಕೆಳಗೆ ಮಾಡುತ್ತೇನೆ.

1. ನ್ಯಾಯಪ್ರಮಾಣಾಧೀನರೆಂಬುವದು ಯೆಹೂದ್ಯ ಮಾರ್ಗವನ್ನು ಅನುಸರಿಸಿದ ಜನಾಂಗಗಳನ್ನಾದರೂ, ಕ್ರಿಸ್ತನ ಮಾರ್ಗವನ್ನು ಅಂಗೀಕರಿಸಿದ ಯೆಹೂದ್ಯರನ್ನಾದರೂ ಕುರಿತದ್ದು.

2. ಇದು ನ್ಯಾಯಪ್ರಮಾಣಕ್ಕೊಳಗಾಗದ ಜನಾಂಗಗಳವರನ್ನು ಕುರಿತದ್ದು. (ರೋಮಾ. ೨. ೧೨. ವಚನದ ವ್ಯಾಖ್ಯಾನ ನೋಡ ಬೇಕು.)

3. ಕ್ರಿಸ್ತನ ಪ್ರಮಾಣವಾದ ಪ್ರೀತಿಯ ಪ್ರಮಾಣಕ್ಕೆ ಆಧೀನನಾಗಿದ್ದೇನೆ.

4. ಬಲಹೀನರು ಎಂಬುವದು, ೮. ೧—೧೩. ವಚನಗಳಲ್ಲಿಯೂ, ರೋಮಾ. ೧೪. ೧. ವಚನದಲ್ಲಿಯೂ ಹೇಳಲ್ಪಟ್ಟವರನ್ನು ಕುರಿತದ್ದು. ಇವರ ಸಂಗತಿಯನ್ನು ಕುರಿತು ಈ ನ್ಯಾಯಗಳು ಹೇಳಲ್ಪಡುವದರಿಂದ ಇವರನ್ನು ಕಡೆಯಲ್ಲಿ ಇರಿಸುತ್ತಾನೆ. ಎಲ್ಲರಿಗೂ ಮೇಲು ಮಾಡುವ ಉದ್ದಿಶ್ಯ ಒಬ್ಬ ಕ್ರೈಸ್ತನು ಎಲ್ಲರಿಗೂ ಎಲ್ಲಾ ಆಗಿರ ಬಹುದೆಂಬುವದನ್ನು ಪೌಲನ ದೃಷ್ಟಾಂತದಿಂದ ತಿಳಿಯ ಬಹುದು. ಆದಾಗ್ಯೂ ಅವನು ಪಾಪವಾದ ವಿಷಯಗಳಲ್ಲಿ ಕಲಿಯದೆ ಇದ್ದನು. (ಗಲಾ. ೨. ೫.) ದೋಷವಿಲ್ಲದ ವಿಷಯಗಳಲ್ಲಿ ಮಾತ್ರ ಮತ್ತೊಬ್ಬರ ಬಲಹೀನತ್ವಗಳಿಗೆ ಕರುಣಿಸಿ ಅವರನ್ನು ವಶ ಮಾಡಿ ಕೊಳ್ಳುವದಕ್ಕೆ ಅವರಿಗೆ ಮೇಲು ಮಾಡುವವನಾಗಿದ್ದನು.

5. ಪೌಲನು ಎಲ್ಲರಿಗೂ ಎಲ್ಲರ ಹಾಗೆ ನಡೆದದ್ದು ಬೇರೊಬ್ಬರ ಪ್ರಯೋಜನವನ್ನು ಬಯಸುವವನಾಗಿ ಮಾತ್ರವಲ್ಲ, ತನ್ನ ಸ್ವಪ್ರಯೋಜನವನ್ನು ಬಯಸುವವನಾಗಿಯೂ ಹಾಗೆ ನಡೆದನು. ಭೂಲೋಕದಲ್ಲಿ ಸತ್ಯಮಾರ್ಗವು ಅಭಿವೃದ್ಧಿಯಾಗುವದರಿಂದ ಮತ್ತೊಬ್ಬರಿಗೆ ದೊರಕುವ ಮಹಿಮೆ ತನಗೂ ದೊರಕ ಬೇಕೆಂದು ಕೋರಿದ್ದೇ ಅವನು ಬಯಸಿದ ಪ್ರಯೋಜನವಾಗಿತ್ತು. ಪರಮ ಯಜಮಾನನ ಮಹಿಮೆಯನ್ನು ಕೋರಿ ಆತನ ಸೇವೆಯನ್ನು ಎಲ್ಲಾ ಜಾಗ್ರತೆಯಿಂದ ಮಾಡುವ ದಾಸನು ಕಡೆಯಲ್ಲಿ ಮಹಿಮೆ ಹೊಂದುವನು.

6. ಕ್ರಿಸ್ತನ ಮಾರ್ಗವನ್ನು ಅಭಿವೃದ್ಧಿ ಮಾಡುವ ವಿಷಯದಲ್ಲಿ ಪೌಲನು ತನ್ನ ಶರೀರವನ್ನು ಕುಗ್ಗಿಸಿ ಮಾಡಿದ ಸಾಧನೆಯನ್ನು, ಗ್ರೇಕರಲ್ಲಿ ನಡೆಯುತ್ತಿದ್ದ ವಿನೋದವಾದ ಆಟಗಳಿಗೆ ಉಪಮಾನ ಮಾಡಿ ತೋರಿಸುತ್ತಾನೆ. (೨೪—೨೭. ವ.) ಈ ಆಟಗಳು ಕೊರಿಂಥ ಪಟ್ಟಣದ ಸಮೀಪದಲ್ಲಿರುವ ಭೂಸಂಧಿಯಲ್ಲಿಯೂ ಅದರ ಸಮೀಪವಾದ ನಿಮಿಯಾ, ಒಲಿಂಪಿಯಾ ಎಂಬ ಸ್ಥಳಗಳಲ್ಲಿಯೂ ನಡೆಯುತ್ತಿದ್ದವು. ಇವುಗಳಲ್ಲಿ ಓಡುವದು, ಗುದ್ದುವದು, ದಾಟುವದು, ಕುಸ್ತಿ ಮಾಡುವದು, ಈಟಿ ಎಸೆಯುವದು ಮುಂತಾದ ಸಾಧಕಗಳು ನಡೆಯುವವು. ಇದರಲ್ಲಿ ಗೆದ್ದವರಿಗೆ ಇಪ್ಪೆ ಹೊನ್ನೆ ಮುಂತಾದ ಎಲೆಗಳಿಂದ ಮಾಡಿದ ಮಾಲೆಗಳನ್ನಾಗಲಿ ಕಿರೀಟಗಳನ್ನಾಗಲಿ ಬಹುಮಾನವಾಗಿ ಕೊಡುವರು. (೨೫. ವ.) ಓಟರಂಗ ಎಂಬುವದಕ್ಕೆ (Stadium) ಸ್ಟೇಡಿಯಮ್ ಎಂದು ಉಂಟು. ಇದು ಸುಮಾರು ಅರೆ ಕಾಲು ಮೈಲು ದೂರ ಉಂಟು.

7. ಆ ಜೂಜಾಟ ಪ್ರಾರಂಭಿಸುವದಕ್ಕೆ ಮುಂಚೆ ಕೆಲವು ತಿಂಗಳು ಆಟವಾಡುವವರು ಭೋಜನ ಪಾನಗಳನ್ನು ಮಟ್ಟು ಮಾಡಿ ಶರೀರವನ್ನು ತಗ್ಗಿಸುವರು. ಸ್ವಲ್ಪ ಹೊತ್ತಿನಲ್ಲಿ ಬಾಡಿ ಹೋಗಿ ನಾಶವಾಗುವ ಅಲ್ಪವಾದ ಕಿರೀಟವನ್ನು ಹೊಂದುವದಕ್ಕೆ ಹೀಗೆ ತಮ್ಮ ಶರೀರವನ್ನು ತಗ್ಗಿಸಿ ಓಡುವರಾದರೆ, ನಾಶವಾಗದ ಕಿರೀಟವನ್ನು ಹೊಂದಲಿಕ್ಕಿರುವ ಕ್ರೈಸ್ತಭಕ್ತರು ಹ್ಯಾಗೆ ತಮ್ಮ ದೇಹದಿಚ್ಛೆಗಳನ್ನು ಬಿಗಿ ಹಿಡಿದು ಓಡ ಬೇಕಾಗಿರುತ್ತದೆ! (೨ ತಿಮೊ. ೪. ೭, ೮.)

8. ಮೇಲೆ ಹೇಳಿದ ಆಟಗಳಲ್ಲಿ ನಡೆದ ಮಲ್ಲಯುದ್ಧಗಳಲ್ಲಿ ಒಬ್ಬರನ್ನೊಬ್ಬರು ಕೈಯಿಂದ ಗುದ್ದುವದು ಒಂದು ಸಾಧಕವಾಗಿತ್ತು. ಹೀಗೆ ಅವನು ಓಡಿದ್ದೂ ಮಲ್ಲಯುದ್ಧ ಮಾಡಿದ್ದೂ ಆದ ಕಠಿಣ ಸಾಧಕಗಳು ನೆರಳಿನ ಹಾಗೆ ನಿಶ್ಚಯವಿಲ್ಲದ ಒಂದು ವಸ್ತುವನ್ನು ಹೊಂದುವ ಹಾಗಲ್ಲ, ಸದಾಕಾಲವಾಗಿರ ತಕ್ಕ ನಿತ್ಯಾನಂದವಾದ ಜೀವವನ್ನು ಹೊಂದುವದಕ್ಕಾಗಿಯೇ ಹಾಗೆ ಮಾಡಿದನು.

9. ಗುದ್ದುವವನು ಎದುರಿಯ ಶರೀರವನ್ನು ಗುದ್ದಿ ಅಣಗಿಸುವ ಪ್ರಕಾರ ಪೌಲನು, ನನ್ನ ಶರೀರವನ್ನು ಕುಟ್ಟಿ ವಿಧೇಯ ಪಡಿಸುತ್ತೇನೆ ಅನ್ನುತ್ತಾನೆ. ಹಾಗೆ ಮಾಡದೆ ಶರೀರದಿಚ್ಛೆಗಳು ಮೇಲ್ಗೊಳ್ಳುವಂತೆ ಸ್ಥಳ ಕೊಟ್ಟರೆ ಬೇರೊಬ್ಬರಿಗೆ ಪ್ರಸಂಗಿಸಿದ ಅವನು ಮಹಿಮೆ ಹೊಂದದೆ ದೇವರಿಂದ ತಳ್ಳಲ್ಪಡುವನು. ಮಲ್ಲಯುದ್ಧಗಳು ಆದ ತರುವಾಯ ಕೆಲವು ಅಧಿಕಾರಿಗಳು ಅವು ಮಾಡಿದವರನ್ನು ಪರೀಕ್ಷಿಸುವರು. ಯಾರಾದರು ಪ್ರಮಾಣಕ್ಕೆ ವಿರೋಧವಾಗಿ ನಡೆದಿದ್ದರೆ, ಅವರು ಜಯಿಸಿದವರಾದರೂ ಬಹುಮಾನ ಹೊಂದದೆ, ಅವಮಾನ ಹೊಂದುವರು. ಈ ಪದ್ಧತಿಯಿಂದ ಪೌಲನು ಹೀಗೆ ಹೇಳುತ್ತಾನೆ. ಇದನ್ನು ಹೇಳಿದ ಒಂಭತ್ತು ವರುಷಗಳ ತರುವಾಯ, ನಾನು ಓಟ ಪೂರೈಸಿದ್ದೇನೆ, ನೀತಿಯ ಕಿರೀಟವು ದೊರಕುವದೆಂದು ಧೈರ್ಯವಾಗಿ ಹೇಳುತ್ತಾನೆ. (೨ ತಿಮೊ. ೪. ೭, ೮.) ಅವನ ಹಾಗೆ ನಾವು ಸಹ ಹೇಳುವಂತೆ ದೇವರು ಅನುಗ್ರಹಿಸುವವನಾಗಲಿ!



ಇಸ್ರಾಯೇಲ್ಯರ ದೃಷ್ಟಾಂತದಿಂದ ಪಾಪಕ್ಕೆ ತೊಲಗುವ ಹಾಗೆ ಎಚ್ಚರಿಸಿದ್ದು.

10. [1]ಇದಲ್ಲದೆ, ಸಹೋದರರೇ, ನೀವು ಇದನ್ನು ಅರಿಯದಿರ, ನನಗೆ ಮನಸ್ಸಿಲ್ಲ—ಏನಂದರೆ, ನಮ್ಮ ಪಿತೃಗಳೆ
೨ ಲ್ಲರು ಮೇಘದ ಕೆಳಗೆ ಇದ್ದರು; ಎಲ್ಲರು ಸಮುದ್ರವನ್ನು ಹಾದು ಹೋದರು; [2]ಎಲ್ಲರು ಮೋಶೆಗಾಗಿ
೩ ಮೇಘದಲ್ಲಿಯೂ ಸಮುದ್ರದಲ್ಲಿಯೂ ಸ್ನಾನ ಹೊಂದಿದರು; ಎಲ್ಲರು ಒಂದೇ [3]ಆತ್ಮಭಾವದ ಆಹಾರವನ್ನು
೪ ಉಂಡರು; ಎಲ್ಲರು ಒಂದೇ ಆತ್ಮಭಾವದ ಪಾನವನ್ನು ಕುಡಿದರು; ಹ್ಯಾಗಂದರೆ, ಹಿಂಬಾಲಿಸಿದ [4]ಆತ್ಮಭಾ
೫ ವದ ಬಂಡೆಯಿಂದ ಕುಡಿದರು. ಆ ಬಂಡೆಯು ಕ್ರಿಸ್ತನೇ. ಆದರೆ ಅವರಲ್ಲಿ [5]ಬಹು ಜನರಿಗೆ ದೇವರು ಮೆಚ್ಚಿ
ಕೊಳ್ಳಲಿಲ್ಲ; ಹ್ಯಾಗಂದರೆ, ಅರಣ್ಯದಲ್ಲಿ ಕೆಡವಿ ಹಾಕಲ್ಪಟ್ಟರು.
೬ ಆದರೆ ಅವರು ಸಹ ಆಶಿಸಿದ ಪ್ರಕಾರ, ನಾವು ಕೆಟ್ಟವುಗಳನ್ನು ಆಶಿಸದೆ ಇರುವ ಹಾಗೆ, ಇವುಗಳು ನಮಗೆ
೭ [6]ಮುಂಗುರುತುಗಳಾದವು. ಮತ್ತು ಜನರು ಉಣ್ಣಲೂ ಕುಡಿಯಲೂ ಕೂತು ಕೊಂಡು, ಆಡುವದಕ್ಕೆ
ಎದ್ದರೆಂದು, (ಹೊರ. ೩೨. ೬.) ಬರೆದಿರುವ ಪ್ರಕಾರ, ಅವರಲ್ಲಿ ಕೆಲವರ ಹಾಗೆ ವಿಗ್ರಹಾರಾಧಕರಾಗ ಬೇಡಿರಿ.
೮ ಮತ್ತು ಅವರಲ್ಲಿ ಕೆಲವರು [7]ಜಾರತ್ವ ಮಾಡಿ, ಒಂದೇ ದಿವಸದಲ್ಲಿ [8]ಇಪ್ಪತ್ತು ಮೂರು ಸಾವಿರ ಮಂದಿ ಬಿದ್ದ

1. ಇಸ್ರಾಯೇಲ್ಯರ ದೃಷ್ಟಾಂತದಿಂದ, ಆತ್ಮವಿಷಯಗಳಲ್ಲಿ ನಿರ್ವಿಚಾರವಾಗಿರುವದರಿಂದುಂಟಾಗುವ ಮೋಸವನ್ನು ಪೌಲನು ತೋರಿಸುತ್ತಾನೆ. ಅವರು ಕೆಂಪು ಸಮುದ್ರದಲ್ಲಿಯೂ ಮೇಘದ ಕೆಳಗೂ ಸ್ನಾನ ಹೊಂದಿ, ದೇವರು ಮೋಶೆಯ ಮುಖಾಂತರ ಅನುಗ್ರಹಿಸಿದ ಒಡಂಬಡಿಕೆಯ ಸಕಲ ಸ್ವಾತಂತ್ರ್ಯಗಳನ್ನು ಹೊಂದಿ, ಪ್ರತಿ ದಿವಸವೂ ಆಶ್ಚರ್ಯ ವಿಧವಾಗಿ ಪೋಷಿಸಲ್ಪಡುತ್ತಾ ಬಂದಾಗ್ಯೂ, ಅವಿಶ್ವಾಸಕ್ಕೂ ಮಾಂಸದಿಚ್ಛೆಗಳಿಗೂ ಸ್ಥಳ ಕೊಟ್ಟದ್ದರಿಂದ ಎಲ್ಲರು ನಾಶ ಹೊಂದಿದರು.

2. ಎಲ್ಲರು ಎಂಬ ಪದವು ಐದು ಸಾರಿ ಬರುತ್ತದೆ. ಮೇಘಸ್ತಂಭವು ಇಸ್ರಾಯೇಲ ಮಕ್ಕಳೆಲ್ಲರ ಮುಂದೆ ನಡೆಯಿತು. (ಹೊರ. ೧೪. ೧೯.) ಅದರಿಂದ ನೀರು ಬಂತೆಂದು ಕೀರ್ತನೆಗಾರನು ಹೇಳುತ್ತಾನೆ. (ಕೀರ್ತ. ೭೭. ೧೬.) ಅವರೆಲ್ಲರೂ ಕೆಂಪು ಸಮುದ್ರದ ಮಾರ್ಗವಾಗಿ ಹೊರಟಾಗ, ಬಲವಾಗಿ ಮೂಡಣ ಘಾಳಿ ಬಡಿದದರಿಂದ ಎರಡು ಪಾರ್ಶ್ವಗಳಲ್ಲಿಯೂ ದೊಡ್ಡ ಗೋಡೆಯ ಹಾಗೆ ವಿಭಾಗವಾಗಿ ನಿಂತ ಸಮುದ್ರದ ನೀರು ಬೊಟ್ಟು ಬೊಟ್ಟಾಗಿ ಅವರ ಮೇಲೆ ಎರಚಿ ಬಿದ್ದಿರ ಬಹುದು. ಇಂಥಾ ಆತ್ಮಭಾವದ ಸ್ನಾನದಿಂದ ಹಳೇ ಒಡಂಬಡಿಕೆಯ ಮಧ್ಯಸ್ಥನೂ, ನ್ಯಾಯಪ್ರಮಾಣಿಕನೂ, ಪ್ರವಾದಿಯೂ ಆಗಿದ್ದ ಮೋಶೆಯಲ್ಲಿ ಅವರು ಸ್ನಾನ ಹೊಂದಿದರು.

3. ಇಸ್ರಾಯೇಲ್ಯರು ಉಂಡ ಮನ್ನವೂ, ಕುಡಿದ ನೀರೂ, ಜೀವವನ್ನು ಕಾಪಾಡುವ ಹಾಗೆ ಮಾತ್ರವಲ್ಲ, ಪರಲೋಕದಿಂದ ಬಂದ ನಿಜವಾದ ರೊಟ್ಟಿಗೂ ಜೀವಜಲಕ್ಕೂ ಮುಂಗುರುತಾಗಿರುವ ಹಾಗೆ ಅದ್ಭುತವಾಗಿ ಕೊಡಲ್ಪಟ್ಟವುಗಳೆಂದು ಅಭಿಪ್ರಾಯ ಹೇಳುತ್ತಾರೆ. (೪. ವ.) ಯೋಹಾ. ೬. ೩೦—೫೮; ೪. ೧೦. ವಚನಗಳ ವ್ಯಾಖ್ಯಾನ ನೋಡ ಬೇಕು.

4. ನೀರು ಹೊರಟ ಬಂಡೆಯೇ ಇಸ್ರಾಯೇಲ್ಯರು ಹೋದ ಸ್ಥಳಗಳಲ್ಲೆಲ್ಲಾ ಕೂಡ ಹೋಯಿತೆಂದು ಯೆಹೂದ್ಯರು ಪಾರಂಪರ್ಯವಾಗಿ ಹೇಳುವರು. ಪೌಲನು ಅದನ್ನು ಖಂಡಿಸುವದಕ್ಕಾಗಿ, ಅವರ ಕೂಡ ಹೋದದ್ದು ಆತ್ಮಭಾವದ ಬಂಡೆ, ಅನ್ನುತ್ತಾನೆ. ಬಂಡೆಯಿಂದ ಹೊರಟ ನೀರು ಒಂದು ನದಿಯ ಹಾಗೆ ಅವರು ಹೋದ ಕಡೆ ಎಲ್ಲಾ ಅವರನ್ನು ಹಿಂಬಾಲಿಸಿತು. (ಕೀರ್ತ. ೭೮. ೧೫, ೧೬; ೧೦೫. ೪೧.) ಹೊಡೆಯಲ್ಪಟ್ಟ ಬಂಡೆಯಿಂದ ಹೊರಟ ನೀರನ್ನು ಅವರೆಲ್ಲರು ಕುಡಿದರು. (ಹೊರ. ೧೭. ೬.) ಅದು ಅವರು ಅರಣ್ಯದಲ್ಲಿ ಇದ್ದ ಕಾಲವೆಲ್ಲಾ ಅವರಿಗೆ ಜೀವ ಊರುವ ಬುಗ್ಗೆಯ ಹಾಗಿತ್ತು. ಆ ಬಂಡೆ ಕ್ರಿಸ್ತನಿಗೆ ಮುಂಗುರುತಾಗಿತ್ತು. ಅದು ಮೋಶೆಯ ಕೋಲಿನಿಂದ ಹೊಡೆಯಲ್ಪಟ್ಟ ಪ್ರಕಾರ, ಕ್ರಿಸ್ತನು ಅವನ ಮೂಲಕ ಬಂದ ನ್ಯಾಯಪ್ರಮಾಣದ ಶಾಪಕ್ಕೊಳಗಾಗಿ ಮರಣ ಹೊಂದಿದನು. ಆತನ ಪುಣ್ಯಮರಣದಿಂದುಂಟಾದ ಶ್ರೇಷ್ಠ ವರವಾದ ಪರಿಶುದ್ಧಾತ್ಮನು ಮನುಷ್ಯರ ಆತ್ಮದಾಹವನ್ನು ತೀರಿಸುವ ಜೀವದ ನದಿಯಾಗಿತ್ತು.

5. ಅವರೆಲ್ಲರು ದೇವರ ಆಶೀರ್ವಾದ ಹೊಂದಿದವರಾಗಿದ್ದಾಗ್ಯೂ, ಎಲ್ಲರೂ ದೇವರ ಮಹಿಮೆಗೆ ಪಾತ್ರರಾಗಲಿಲ್ಲ. ಯೆಹೋಶುವ ಕಾಲೆಬನೆಂಬ ಇಬ್ಬರಲ್ಲಿ ದೇವರು ಪ್ರೀತಿಯಾಗಿದ್ದನೇ ಹೊರ್ತು ಮಿಕ್ಕಾದವರಲ್ಲಿ ಪ್ರೀತಿಯಾಗಿರಲಿಲ್ಲ. (ಅಂಕೆ. ೧೪. ೩೦; ೨೬. ೬೫.) ಅವರು ತಮ್ಮ ಪಾಪದಿಂದ ಅರಣ್ಯದಲ್ಲಿ ಮಡಿದು ಹೋದರು.

6. ಅವರಿಗೆ ಸಂಭವಿಸಿದ ಕಾರ್ಯಗಳೆಲ್ಲಾ ನಮ್ಮ ಮಿರಾಶಿಗಳನ್ನೂ ನಾವು ಮಾಡ ತಕ್ಕ ಕೆಲಸಗಳನ್ನೂ ನಮಗೆ ಬರುವ ಮೋಸಗಳನ್ನೂ ತೋರಿಸುವ ಗುರುತುಗಳಾಗಿದ್ದವು. (೧೧. ವ.)

7. ಇಸ್ರಾಯೇಲ್ಯರು ಬಾಳ್‌ಪೆಯೋರೆಂಬ ವಿಗ್ರಹಕ್ಕೆ ಆರಾಧನೆ ಮಾಡಿದಾಗ ಜಾರತ್ವ ಮಾಡಿದರು. (ಅಂಕೆ. ೨೫. ೧—೩.) ಕೊರಿಂಥ ಪಟ್ಟಣದಲ್ಲಿ ವೀನಸ್ ಎಂಬ ದೇವತೆಗೆ ಇಂಥಾ ಆರಾಧನೆ ನಡಿಯುತ್ತಿದ್ದದರಿಂದ ಆ ಸಭೆಯವರಿಗೆ ಇದು ಎಚ್ಚರಿಕೆಯುಂಟಾಗುವ ಹಾಗೆ ತಕ್ಕ ಬುದ್ಧಿಮಾತಾಗಿತ್ತು.

8. ಇಸ್ರಾಯೇಲ್ಯರು ಮೋವಾಬಿನ ಸ್ತ್ರೀಯರ ಸಂಗಡ ಜಾರತ್ವ ಮಾಡಿದಾಗ ಅವರಲ್ಲಿ ವ್ಯಾಧಿಯುಂಟಾಗಿ ಇಪ್ಪತ್ತ ನಾಲ್ಕು ಸಾವಿರ ಜನರು ಮಡಿದು ಹೋದರು. (ಅಂಕೆ. ೨೫. ೯.)

೯ ಹಾಗೆ, ಜಾರತ್ವ ಮಾಡದೆ ಇರುವ. ಮತ್ತು ಅವರಲ್ಲಿ [1]ಕೆಲವರು ಶೋಧಿಸಿ, ಸರ್ಪಗಳಿಂದ ನಾಶವಾದ
೧೦ ಹಾಗೆ, ಕ್ರಿಸ್ತನನ್ನು ಶೋಧಿಸದೆ ಇರುವ. ಮತ್ತು ಅವರಲ್ಲಿ ಕೆಲವರು ಗುಣುಗುಟ್ಟಿ, [2]ಸಂಹಾರಿಯಿಂದ
೧೧ ನಾಶವಾದ ಹಾಗೆ, ಗುಣುಗುಟ್ಟ ಬೇಡಿರಿ. ಇವುಗಳೆಲ್ಲಾ ಮುಂಗುರುತುಗಳಾಗಿ ಅವರಿಗೆ ಸಂಭವಿಸಿ,
೧೨ [3]ಯುಗಗಳ ಅಂತ್ಯಗಳಲ್ಲಿ ಶೇರಿದ ನಮ್ಮ ಬೋಧನೆಗೋಸ್ಕರ ಬರೆಯಲ್ಪಟ್ಟವು. ಆದ ಕಾರಣ ತಾನು ನಿಲ್ಲು
ತ್ತೇನೆಂದು ನೆನಸುವವನು, ಬೀಳದ ಹಾಗೆ ನೋಡಿ ಕೊಳ್ಳಲಿ.
೧೩ ಮನುಷ್ಯರಿಗೆ ಆಗುವ ಶೋಧನೆ ಅಲ್ಲದೆ, ಮತ್ತ್ಯಾವದು ನಿಮ್ಮನ್ನು ಹಿಡಿಯಲಿಲ್ಲ; ಮತ್ತು ದೇವರು ನಂಬಿ
ಕೆಯುಳ್ಳವನು; ಅವನು [4]ನಿಮ್ಮ ಬಲಕ್ಕಿಂತ ಹೆಚ್ಚಾಗಿ ನಿಮ್ಮನ್ನು ಶೋಧಿಸಲ್ಪಡ ಗೊಡಿಸುವದಿಲ್ಲ; ಆದರೆ
ನೀವು ಸಹಿಸ ಕೂಡುವ ಹಾಗೆ, ಶೋಧನೆಯ ಸಂಗಡ ತಪ್ಪಿಸಿ ಕೊಳ್ಳುವ ಮಾರ್ಗವನ್ನು ಮಾಡುವನು.

ವಿಗ್ರಹಾರಾಧನೆಗೆ ಶೇರದೆ, ಬೇರೊಬ್ಬರ ಮನಸ್ಸಾಕ್ಷಿಯನ್ನು ನೋಯಿಸದೆ ಇರುವಂತೆ ಎಚ್ಚರಿಸಿದ್ದು.

೧೪, ೧೫ [5]ಆದದರಿಂದ, ನನ್ನ ಪ್ರಿಯರೇ, ವಿಗ್ರಹಾರಾಧನೆಯನ್ನು ಬಿಟ್ಟು, ಓಡಿ ಹೋಗಿರಿ. ಬುದ್ಧಿವಂತರಿಗೆಂದು
೧೬ ಹೇಳುತ್ತೇನೆ; [6]ನಾನು ಹೇಳುವದನ್ನು ನೀವು ವಿಚಾರಿಸಿ ಕೊಳ್ಳಿರಿ. ನಾವು ಆಶೀರ್ವದಿಸುವ [7]ಆಶೀರ್ವಾದದ
ಪಾತ್ರೆಯು ಕ್ರಿಸ್ತನ ರಕ್ತದ [8]ಅನ್ಯೋನ್ಯವಲ್ಲವೋ? ನಾವು ಮುರಿಯುವ ರೊಟ್ಟಿಯು ಕ್ರಿಸ್ತನ ಶರೀರದ
೧೭ ಅನ್ಯೋನ್ಯವಲ್ಲವೋ? ಯಾಕಂದರೆ ಅನೇಕರಾದ ನಾವು ಒಂದೇ ರೊಟ್ಟಿಯೂ, ಒಂದೇ ಶರೀರವೂ ಆಗಿ
೧೮ ದ್ದೇವೆ. ಯಾಕಂದರೆ ಎಲ್ಲರು ಆ ಒಂದೇ ರೊಟ್ಟಿಯಲ್ಲಿ ಪಾಲುಗಾರರಾಗಿದ್ದೇವೆ. ಮಾಂಸದ ಪ್ರಕಾರ
ವಾದ ಇಸ್ರಯೇಲನ್ನು ನೋಡಿರಿ; ಬಲಿಗಳನ್ನು ಉಣ್ಣುವವರು ಬಲಿಪೀಠದ [9]ಪಾಲುಗಾರರಾಗಿದ್ದಾರಲ್ಲವೋ?
೧೯ ಹಾಗಾದರೆ, ಏನು ಹೇಳುತ್ತೇನೆ? ವಿಗ್ರಹವು ಏನಾದರೂ ಇರುತ್ತದೆಂದೂ, ಇಲ್ಲವೆ ವಿಗ್ರಹಬಲಿಯು ಏನಾ

1. ಕ್ರಿಸ್ತನ ಬಲವನ್ನೂ ತಾಳ್ಮೆಯನ್ನೂ ಪರೀಕ್ಷಿಸಿದರು. ಹಳೇ ಒಡಂಬಡಿಕೆಯಲ್ಲಿ ದೇವರನ್ನು ಪರೀಕ್ಷಿಸಿದರೆಂದು ಹೇಳಿರಲಾಗಿ ಕ್ರಿಸ್ತನನ್ನು ಪರೀಕ್ಷಿಸಿದರೆಂದು ಇಲ್ಲಿ ಹೇಳಿರುವದರಿಂದ ಕ್ರಿಸ್ತನು ದೇವರೆಂದು ನಿಶ್ಚಯಿಸ ಬೇಕು.

2. ಕೋರಹನೆಂಬವನಿಂದ ಉಂಟಾದ ಕಲಹದಲ್ಲಿ ಜನರು ಗುಣುಗುಟ್ಟಿದ್ದರಿಂದ ಸಂಹಾರದೂತನಿಂದ ಬಾಧೆಯುಂಟಾಗಿ ಹದಿನಾಲ್ಕು ಸಾವಿರ ಜನರು ನಾಶವಾದರು. ಈ ಬಾಧೆಗೆ ಸಂಹಾರಿ ಎಂಬ ಹೆಸರು ಬಂದಿರ ಬಹುದು. (ಅಂಕೆ. ೧೬. ೧—೩, ೪೯.)

3. ಯುಗಗಳ ಅಂತ್ಯವಂದರೆ ಕಡೇ ಕಾಲಗಳು ಎಂಬರ್ಥ. (ಇಬ್ರಿ. ೯. ೨೬. ಎಫೆ. ೧. ೧೦.) ಪೂರ್ವಕಾಲದಲ್ಲಿ ಇಸ್ರಯೇಲ್ಯರಿಗೆ ಸಂಭವಿಸಿದವುಗಳು ಕಡೇ ಕಾಲದಲ್ಲಿರುವ ನಮಗೆ ಎಚ್ಚರಿಕೆ ಕೊಡ ತಕ್ಕವುಗಳಾಗಿವೆ.

4. ಕೊರಿಂಥದ ಸಭೆಯವರಿಗುಂಟಾಗಿದ್ದ ಅಪಾಯಗಳನ್ನು ತಿಳಿಸಿದ ಮೇಲೆ, ಅವರಿಗೆ ಆದರಣೆಯಾಗಿ ಈ ವಚನ ಹೇಳುತ್ತಾನೆ. ಭಕ್ತರ ವಿಶ್ವಾಸವನ್ನು ಪರೀಕ್ಷಿಸುವ ನಿಮಿತ್ತ ಸಂಭವಿಸುವ ಒಂದೊಂದು ಶೋಧನೆಗೂ ತಕ್ಕ ಸಹಾಯವನ್ನು ನಂಬಿಕೆಯುಳ್ಳ ದೇವರು ಅನುಗ್ರಹಿಸುವನು. ಅವರ ಬಲಹೀನತ್ವಕ್ಕೆ ಮಿಂಚಿದ ಶೋಧನೆಯನ್ನು ಆತನು ಬರಗೊಡಿಸುವದಿಲ್ಲ. ಇಕ್ಕಟ್ಟಿನಲ್ಲಿ ಆತನಿಗೆ ಮೊರೆ ಇಟ್ಟರೆ, ಆತನು ಕರುಣಿಸುವನು. ಹೀಗೆ ಆತನ ಸಹಾಯದಿಂದ ಶೋಧನೆಗಳನ್ನು ಜಯಿಸಿದರೆ, ಮಹಿಮೆಯ ಕಿರೀಟವು ಶಿಕ್ಕುವದು. (ಯಾಕೋಬ. ೧. ೧೨.)

5. ಮತ್ತೊಬ್ಬರ ಮೇಲಿಗಾಗಿ ಮಾತ್ರವಲ್ಲ, ನಿಮ್ಮ ಮೇಲಿಗಾಗಿಯೂ ವಿಗ್ರಹಗಳ ಉತ್ಸವಗಳಿಗೆ ನೀವು ತೊಲಗಿ, ವಿಗ್ರಹಾರಾಧನೆಗೆ ಎಷ್ಟು ಮಾತ್ರವೂ ಸಮ್ಮತಿಸದೆ ಇರ ಬೇಕೆಂದು ಪೌಲನು ಅವರಿಗೆ ಪ್ರೀತಿಯಿಂದ ಬುದ್ಧಿ ಹೇಳುತ್ತಾನೆ. (೧೯—೨೧. ವ.)

6. ನಾನು ಹೇಳುವದನ್ನು ಅಂದರೆ, ೧೬—೨೧. ವರಿಗೂ ಇರುವ ವಚನಗಳಲ್ಲಿ ಪೌಲನು ಹೇಳಿದ ವಿಷಯಗಳನ್ನು ಕುರಿತದ್ದು.

7. ಇದು ಕ್ರಿಸ್ತನು ದೇವರ ಹೆಸರಿನಿಂದ ಆಶೀರ್ವದಿಸಿದ ಪಾತ್ರೆಯಾಗಿಯೂ, ತನ್ನ ಶಿಷ್ಯರ ಪ್ರಯೋಜನಕ್ಕೆ ತಾನೇ ಆಶೀರ್ವದಿಸಿದ ಪಾತ್ರೆಯಾಗಿಯೂ ಇತ್ತು. ಮತ್ತು ನಾವು ದೇವರ ಆಶೀರ್ವಾದವನ್ನು ಬೇಡಿ ಕೊಂಡು ವಿಶ್ವಾಸದಿಂದ ಅದರಲ್ಲಿ ಕುಡಿಯುವಾಗ ಆತನ ಆಶೀರ್ವಾದವನ್ನು ಹೊಂದುವದಕ್ಕೆ ಹೇತುವೆಯಾಗಿಯೂ ಇರುವದರಿಂದ ಆಶೀರ್ವಾದದ ಪಾತ್ರೆ ಎಂದು ಹೇಳಿ ಇದೆ.

8. ರಾತ್ರಿಭೋಜನದ ಔತಣದಲ್ಲಿ ಹಂಚುವ ರೊಟ್ಟಿಯನ್ನೂ ದ್ರಾಕ್ಷೇ ರಸವನ್ನೂ ಭಕ್ತಿವಿಶ್ವಾಸದಿಂದ ಅನುಭವಿಸುವವರು ಕ್ರಿಸ್ತನ ಮರಣದಿಂದುಂಟಾದ ಸುಕೃತ ಮೇಲುಗಳಿಗೆ ಪಾಲುಗಾರರಾಗುತ್ತಾರೆ. ಮತ್ತು ಒಂದೇ ರೊಟ್ಟಿಯೂ ಒಂದೇ ಶರೀರವೂ ಆಗಿರುವ ಪ್ರಕಾರ ರಕ್ಷಕನಾದ ಕ್ರಿಸ್ತನಲ್ಲಿಯೂ ಆತನ ದಾಸರಲ್ಲಿಯೂ ಅನ್ಯೋನ್ಯವಾಗುತ್ತಾರೆ. (೧೭. ವ.)

9. ಯೆಹೂದ್ಯರು ಅರ್ಪಿಸಿದ ಬಲಿಗಳ ವಿಷಯ ಯೋಚಿಸಿದರೂ ಈ ಸತ್ಯವು ವಿಶದವಾಗುವದು. (ಲೇವಿ. ೩. ೧.) ಆ ಬಲಿಗಳನ್ನರ್ಪಿಸಿದವರೂ ಅವುಗಳನ್ನು ಉಂಡವರೂ ದೇವಾಲಯದ ಸಂಗಡ ಐಕ್ಯ ಪಟ್ಟವರಾಗಿದ್ದ ಪ್ರಕಾರ, ವಿಗ್ರಹಬಲಿಗಳನ್ನು ಉಂಡವರೂ ಅವುಗಳ ಸಂಗಡ ಐಕ್ಯ ಪಟ್ಟವರಾಗಿದ್ದಾರೆಂಬುವದು ನ್ಯಾಯವಾಗಿದೆ.



೨೦ ದರೂ ಇರುತ್ತದೆಂದೂ, [1]ಹೇಳುತ್ತೇನೋ? ಆದರೆ ಜನಾಂಗಗಳು ಕಡಿಯುವಂಥವುಗಳನ್ನು ದೇವರಿಗಲ್ಲ,
[2]ದೆವ್ವಗಳಿಗೆ ಕಡಿಯುತ್ತಾರೆಂದು (ದ್ವಿತೀಯ ನ್ಯಾ. ೩೨. ೧೭.) ಹೇಳುತ್ತೇನೆ. ಆದರೆ ನೀವು ದೆವ್ವಗಳ
೨೧ ಸಂಗಡ ಪಾಲುಗಾರರಾಗಿರ, ನನಗೆ ಮನಸ್ಸಿಲ್ಲ. ಕರ್ತನ ಪಾತ್ರೆಯಲ್ಲಿಯೂ ದೆವ್ವಗಳ ಪಾತ್ರೆಯಲ್ಲಿಯೂ
ಕುಡಿಯಲಾರಿರಿ. ಕರ್ತನ ಮೇಜಿನಲ್ಲಿಯೂ ದೆವ್ವಗಳ ಮೇಜಿನಲ್ಲಿಯೂ ಪಾಲುಗಾರರಾಗಿರಲಾರಿರಿ.
೨೨ ಕರ್ತನಿಗೆ ರೋಷ ಹುಟ್ಟಿಸಲೋ? ಅವನಿಗಿಂತ ಶಕ್ತರಾಗಿದ್ದೇವೋ?
೨೩ ಎಲ್ಲಕ್ಕೂ [3]ನನಗೆ ಅಧಿಕಾರ ಉಂಟು, ಆದರೆ ಎಲ್ಲಾ ಪ್ರಯೋಜನವಾಗುವದಿಲ್ಲ; ಎಲ್ಲಕ್ಕೂ ನನಗೆ ಅಧಿ
೨೪ ಕಾರ ಉಂಟು, ಆದರೆ ಎಲ್ಲಾ ಆತ್ಮವೃದ್ಧಿ ಮಾಡುವದಿಲ್ಲ. ಯಾವನಾದರೂ ತನ್ನದನ್ನಲ್ಲ, ಒಬ್ಬೊಬ್ಬನು
೨೫ [4]ಬೇರೊಬ್ಬನದನ್ನು ಹುಡುಕಲಿ. [5]ಕಟಿಗರ ಕೇರಿಯಲ್ಲಿ ಮಾರುವದನ್ನೆಲ್ಲಾ, ಮನಸ್ಸಾಕ್ಷಿಯ ನಿಮಿತ್ತ ಏನೂ
೨೬ ವಿಚಾರಿಸದೆ, ಉಣ್ಣಿರಿ. ಯಾಕಂದರೆ ಭೂಮಿಯೂ, ಅದರ ಪರಿಪೂರ್ಣತೆಯೂ [6]ಕರ್ತನವೇ. (ಕೀರ್ತ.
೨೭ ೨೪. ೧.) ಅವಿಶ್ವಾಸಿಗಳಲ್ಲಿ ಒಬ್ಬನು ನಿಮ್ಮನ್ನು ಕರೆಯುವಾಗ, ಹೋಗ ಮನಸ್ಸಾಗಿದ್ದರೆ, ನಿಮ್ಮ ಮುಂದೆ
೨೮ ಇಟ್ಟದ್ದನ್ನೆಲ್ಲಾ, ಮನಸ್ಸಾಕ್ಷಿಯ ನಿಮಿತ್ತ ಏನೂ ವಿಚಾರಿಸದೆ, ಉಣ್ಣಿರಿ. ಆದರೆ [7]ಒಬ್ಬನು ನಿಮಗೆ, ಇದು
ವಿಗ್ರಹಬಲಿ ಎಂದು ಹೇಳಿದರೆ, ತಿಳಿಸಿದ ಆ ಮನುಷ್ಯನ ನಿಮಿತ್ತವಾಗಿಯೂ ಮನಸ್ಸಾಕ್ಷಿಯ ನಿಮಿತ್ತವಾಗಿಯೂ
ಉಣ್ಣ ಬೇಡಿರಿ. ಯಾಕಂದರೆ ಭೂಮಿಯೂ, ಅದರ ಪರಿಪೂರ್ಣತೆಯೂ ಕರ್ತನವೇ. (ಕೀರ್ತ. ೨೪. ೧.)
೨೯ ಆದರೆ ಸ್ವಂತ ಮನಸ್ಸಾಕ್ಷಿಯನ್ನು ಕುರಿತಲ್ಲ, ಬೇರೊಬ್ಬನದನ್ನು ಕುರಿತು ಹೇಳುತ್ತೇನೆ. ಯಾಕಂದರೆ [8]ನನ್ನ
೩೦ ಸ್ವತಂತ್ರವು ಬೇರೆ ಮನಸ್ಸಾಕ್ಷಿಯಿಂದ ವಿಚಾರಿಸಲ್ಪಡುವದೇನು? ಮತ್ತು ನಾನು ಕೃಪೆಯಲ್ಲಿ ಪಾಲುಗಾರ
ನಾದರೆ, ನಾನು ಯಾತರ ನಿಮಿತ್ತ ಸ್ತೋತ್ರ ಮಾಡುತ್ತೇನೋ, ಅದಕ್ಕೋಸ್ಕರ ದೂಷಿಸಲ್ಪಡುವದೇನು?
೩೧ ಹಾಗಾದರೆ, ಉಂಡರೂ, ಕುಡಿದರೂ, ಏನು ಮಾಡಿದರೂ, ಎಲ್ಲಾ ದೇವರ ಮಹಿಮೆಗಾಗಿ ಮಾಡಿರಿ.

1. ವಿಗ್ರಹವು ಏನೂ ಇಲ್ಲವೆಂದು ಪೌಲನು ಹೇಳಿದ್ದನು. (೮. ೪.) ಅದಕ್ಕೆ ವ್ಯತಿರಿಕ್ತವಾಗಿ ಈಗ ಅವನು ಏನೂ ಹೇಳುವದಿಲ್ಲ. ಅಜ್ಞಾನ ವಿಗ್ರಹಾರಾಧಕರು ತಾವು ಪೂಜಿಸುವ ವಿಗ್ರಹಗಳು ಒಂದು ವಿಧ ದೆವ್ವಗಳೆಂದು ನಂಬುವದರಿಂದ ಅವುಗಳ ಉತ್ಸವಗಳಲ್ಲಿ ಶೇರುವವರು ಆ ದೆವ್ವಗಳ ಆರಾಧನೆಗೆ ಸಮ್ಮಂಥ ಪಟ್ಟವರಾಗುತ್ತಾರೆ. ರಾತ್ರಿಭೋಜನ ಔತಣವನ್ನು ಹೊಂದಿ, ಕ್ರಿಸ್ತನ ಸಂಗಡ ಐಕ್ಯವಾದವರು ದೆವ್ವಗಳ ಆರಾಧನೆಗೆ ಸಮ್ಮಂಥ ಪಟ್ಟರೆ, ದೇವರ ಕೋಪವು ಅವರ ಮೇಲೆ ಬರುವದೆಂಬುವದಕ್ಕೆ ಸಂದೇಹವಿಲ್ಲ. (೨೨. ವ.)

2. ದೆವ್ವಗಳು ಅಂದರೆ, ಒಂದು ವಿಧದ ದುರಾತ್ಮಗಳು (ದ್ವಿತೀಯ ನ್ಯಾ. ೩೨. ೧೭. ಕೀರ್ತ. ೧೦೬. ೩೭.) ದೆವ್ವಗಳ ತಂತ್ರದಿಂದ ಲೋಕವೆಲ್ಲಾ ಕೆಟ್ಟು ಹೋಗಿದೆ. ಅದರಿಂದ ಲೋಕವೆಲ್ಲಾ ದುಷ್ಟನಲ್ಲಿ ಇದೆ ಎಂದು ಹೇಳಿ ಇದೆ. (೧ ಯೋಹಾ. ೫. ೧೯.)

3. ೬. ೧೨. ವಚನದ ವ್ಯಾಖ್ಯಾನದಲ್ಲಿ ನೋಡ ಬೇಕು.

4. ಎಲ್ಲವನ್ನು ಅನುಭವಿಸ ತಕ್ಕ ಸ್ವತಂತ್ರವು ಕ್ರೈಸ್ತರೆಲ್ಲರಿಗೂ ಇದ್ದಾಗ್ಯೂ, ಅದರಿಂದ ತಮಗೆ ಪ್ರಯೋಜನವೂ ಬೇರೊಬ್ಬರಿಗೆ ಮೇಲೂ ಇಲ್ಲದ ಪಕ್ಷದಲ್ಲಿ ಅವುಗಳನ್ನು ಅನುಭವಿಸ ತಕ್ಕದ್ದಲ್ಲ. (೩೩. ವ.)

5. ವಿಗ್ರಹಗಳಿಗೆ ಅರ್ಪಿಸಲ್ಪಟ್ಟ ವಸ್ತುಗಳೂ ಔತಣಗಳಲ್ಲಿ ಸಿದ್ಧ ಮಾಡಲ್ಪಟ್ಟ ಭೋಜನಗಳೂ, ಕೆಲ ಸಮಯಗಳಲ್ಲಿ ಅಂಗಡಿಗಳಲ್ಲಿ ಮಾರುವದುಂಟು. ಅವು ವಿಗ್ರಹಗಳಿಗೆ ಅರ್ಪಿಸಲ್ಪಟ್ಟವುಗಳೆಂದು ಯಾರೂ ಹೇಳದಿದ್ದರೆ, ದೇವರು ಕೊಟ್ಟ ಆಹಾರವೆಂದೆಣಿಸಿ, ಏನೂ ವಿಚಾರಿಸದೆ, ಸಂದೇಹ ಪಡದೆ, ಅವುಗಳನ್ನು ಕೊಂಡುಕೊಂಡು ಅನುಭವಿಸ ಬಹುದು.

6. ಲೋಕದಲ್ಲಿರುವ ಸರ್ವಸೃಷ್ಟಿಗಳೂ ಆಹಾರಕ್ಕೆ ತಕ್ಕ ಸಕಲ ಪದಾರ್ಥಗಳೂ ದೇವರಿಗೆ ಸ್ವಂತವಾದವುಗಳಾದದರಿಂದ, ಮನಸ್ಸಾಕ್ಷಿಗೆ ನಷ್ಟವಿಲ್ಲದ ಪಕ್ಷದಲ್ಲಿ ಅವುಗಳನ್ನು ತೆಗೆದು ಕೊಂಡು ಅನುಭವಿಸುವದು ದೇವರ ದಾಸರಿಗೆ ತಕ್ಕದ್ದೇ. (೧ ತಿಮೊ. ೪. ೪.)

7. ಒಬ್ಬನು ಎಂಬುವದು, ಬಲಹೀನ ವಿಶ್ವಾಸವುಳ್ಳ ಕ್ರೈಸ್ತನನ್ನು ಕುರಿತದ್ದು. (೮. ೭—೧೧.) ಇವು ವಿಗ್ರಹಗಳಿಗೆ ಅರ್ಪಿಸಲ್ಪಟ್ಟವುಗಳೆಂದು ಒಬ್ಬ ಬಲಹೀನನಾದ ಕ್ರೈಸ್ತನು ಹೇಳುವನಾದರೆ, ಅವನು ಹಾಗೆ ಹೇಳಿದ್ದರಿಂದಲೂ, ಅವನ ಮನಸ್ಸಾಕ್ಷಿಗೆ ಸಂಕಟ ಉಂಟಾಗದಂತೆಯೂ ಅದನ್ನು ಉಣ್ಣದೆ ಇರ ತಕ್ಕದ್ದು.

8. ಇದಕ್ಕೆ ಎರಡು ಬಗೆಯಾಗಿ ಹೇಳ ಬಹುದು. ೧ನೇದು, ಇದು ಒಬ್ಬ ಕ್ರೈಸ್ತನ ಆಕ್ಷೇಪಣೆಯಾಗಿದ್ದರೆ, ಬೇರೊಬ್ಬರ ಮನಸ್ಸಾಕ್ಷಿಗೆ ಕಷ್ಟವಾಗುವದೆಂದು ನಿಶ್ಚಯವಾಗಿ ತಿಳಿದರೆ, ಆಗ ಅವುಗಳನ್ನು ಉಣ್ಣದೆ ಇರ ಬೇಕೇ ಹೊರ್ತು, ಅವರ ನಿಂದೆ ದೂಷಣೆಗಳಿಗೆ ಅಂಜಿ, ದೇವರ ಉಪಕಾರಗಳನ್ನು ಅನುಭವಿಸ ತಕ್ಕ ನನ್ನ ಸ್ವತಂತ್ರವನ್ನು ಕಳಕೊಳ್ಳುವದು ಯಾಕೆ? ಎಂಥೇಳ ಬಹುದು. ೨ನೇದು, ತಪ್ಪು ಹೊರಿಸಲ್ಪಡುವದಾಗಿದ್ದರೂ, ಮತ್ತೊಬ್ಬರು ನಿಂದಿಸ ತಕ್ಕದ್ದಾಗಿದ್ದರೂ, ನನ್ನ ಸ್ವತಂತ್ರವನ್ನು ಬಳಿಸ ಕೂಡದು ಎಂದು ಪೌಲನು ಹೇಳುವ ಆಲೋಚನೆಯಾಗಿರ ಬಹುದು. (ರೋಮಾ. ೧೪. ೨೨. ವಚನದ ವ್ಯಾಖ್ಯಾನ ನೋಡ ಬೇಕು.)

೩೨, ೩೩ ಯೆಹೂದ್ಯರಿಗೂ, ಗ್ರೀಕರಿಗೂ, ದೇವರ ಸಭೆಗೂ [1]ಆಟಂಕವಿಲ್ಲದವರಾಗಿರಿ. ಹೀಗೆ ನಾನು ಸಹ
ಸ್ವಂತ ಪ್ರಯೋಜನವನ್ನಲ್ಲ, [2]ಅನೇಕರದನ್ನು—ಅವರು ರಕ್ಷಿಸಲ್ಪಡುವ ಹಾಗೆ—ಹುಡುಕಿ, ಎಲ್ಲರನ್ನು ಎಲ್ಲವು
ಗಳಲ್ಲಿ ಮೆಚ್ಚಿಸುತ್ತೇನೆ.

ಸಭೆ ಕೂಟಗಳಲ್ಲಿ ನಡೆದ ತಾರುಮಾರುಗಳನ್ನು ಖಂಡಿಸಿದ್ದು. ಸಭೆಯಲ್ಲಿ ಮುಸುಕಿಲ್ಲದೆ ಬರುವ
ಸ್ತ್ರೀಯರನ್ನು ಎಚ್ಚರಿಸಿದ್ದು.

11. ನಾನು ಸಹ ಕ್ರಿಸ್ತನನ್ನು ಅನುಸರಿಸುವ ಪ್ರಕಾರ, ನನ್ನನ್ನು ಅನುಸರಿಸಿರಿ.
೨ ಈಗ, [3]ಸಹೋದರರೇ, ನೀವು ನನ್ನವುಗಳನ್ನೆಲ್ಲಾ ನೆನಪು ಮಾಡಿ ಕೊಳ್ಳುತ್ತೀರೆಂದೂ, ನಾನು ನಿಮಗೆ ಒಪ್ಪಿ
೩ ಸಿದ ಮೇರೆಗೆ ಸಂಪ್ರದಾಯಗಳನ್ನು ಕೈಕೊಳ್ಳುತ್ತೀರೆಂದೂ, ನಿಮ್ಮನ್ನು ಹೊಗಳುತ್ತೇನೆ. ಆದರೆ ಪ್ರತಿ ಪುರು
ಷನ ತಲೆಯು ಕ್ರಿಸ್ತನೂ; [4]ಸ್ತ್ರೀಯ ತಲೆಯು ಪುರುಷನೂ; [5]ಕ್ರಿಸ್ತನ ತಲೆಯು ದೇವರೂ, ಎಂದು ನೀವು
೪ ತಿಳಿಯ ಇಚ್ಛೈಸುತ್ತೇನೆ. ತಲೆ ಮುಚ್ಚಿ ಕೊಂಡು, ಪ್ರಾರ್ಥನೆಯಾದರೂ [6]ಪ್ರವಾದನೆಯಾದರೂ ಮಾಡುವ
೫ ಪ್ರತಿ ಪುರುಷನು ತನ್ನ [7]ತಲೆಯನ್ನು ಅವಮಾನ ಮಾಡುತ್ತಾನೆ. ಆದರೆ ತಲೆ ಮುಸುಕಿಲ್ಲದೆ ಪ್ರಾರ್ಥನೆ
ಯಾದರೂ ಪ್ರವಾದನೆಯಾದರೂ ಮಾಡುವ ಪ್ರತಿ ಸ್ತ್ರೀಯು ತನ್ನ ತಲೆಯನ್ನು ಅವಮಾನ ಮಾಡುತ್ತಾಳೆ;

1. ಅಲ್ಪ ವಿಷಯಗಳಲ್ಲಿ ಸಭೆಗೆ ಹೊರಗಿರುವ ಯೆಹೂದ್ಯರಿಗಾಗಲಿ, ಜನಾಂಗಗಳವರಿಗಾಗಲಿ, ಸಭೆಯಲ್ಲಿರುವವರಿಗಾಗಲಿ ಆಟಂಕ ಉಂಟು ಮಾಡ ಬಾರದು. ಸ್ವಪ್ರಯೋಜನ ಹುಡುಕದೆ, ಅನೇಕರ ಮೇಲನ್ನು ಕೋರಿ, ಸಕಲ ವಿಷಯಗಳಲ್ಲಿಯೂ ಎಲ್ಲರಿಗೂ ಪ್ರಿಯವಾಗಿ ನಡಿಯುವದು ಉತ್ತಮ. (೯. ೨೨. ವಚನದ ವ್ಯಾಖ್ಯಾನ ನೋಡ ಬೇಕು.) ಈ ವಿಷಯದಲ್ಲಿ ಪೌಲನು ತನ್ನ ಕರ್ತನ ಮಾದ್ರಿಯ ಹಾಗೆ ನಡೆದನು. (ರೋಮಾ. ೧೫. ೩. ಫಿಲಿ. ೨. ೪, ೫.) ಆದದರಿಂದ ಎಲ್ಲರು ತನ್ನಂತೆ ನಡಿಯ ಬೇಕೆಂದು ಧೈರ್ಯವಾಗಿ ಬುದ್ಧಿ ಹೇಳುತ್ತಾನೆ.

2. ಈ ತರ್ಕವೆಲ್ಲಾ ಒಂದೇ ವಿಷಯಕ್ಕೆ ಸಮ್ಮಂಧ ಪಟ್ಟದ್ದು. ನಾವು ಮಾಡುವ ಒಂದೊಂದು ಕಾರ್ಯವನ್ನೂ ದೇವರ ಮಹಿಮೆಗಾಗಿ ಮಾಡ ತಕ್ಕದ್ದು ಆ ಮುಖ್ಯವಾದ ವಿಷಯವಾಗಿದೆ.

3. ಮೊದಲನೇ ವಚನ ೧೦ನೇ ಸಂಧಿಯ ಕಡೇ ವಚನಕ್ಕೆ ಸೇರಿಕೆಯಾಗಿದೆ. ಈ ಸಂಧಿಯಲ್ಲಿ ಪೌಲನು ಕೊರಿಂಥದ ಸಭೆಯಲ್ಲಿ ನಡಿಯುತ್ತಿದ್ದ ಕ್ರಮಹೀನವಾದ ಸಂಗತಿಗಳನ್ನು ಹೇಳುತ್ತಾನೆ. (೧೧. ೨—೧೪. ೪೦.) ತನ್ನ ಕಟ್ಟಳೆಯ ಹಾಗೆ ಅವರು ನಡೆದದರಿಂದ ತನ್ನ ಸಂತೋಷವನ್ನು ತಿಳಿಸಿ, ಅವರ ಸಭೆಯಲ್ಲಿ ನಡಿಯುತ್ತಿದ್ದ ಅಕ್ರಮ ಪದ್ಧತಿಗಳನ್ನು ಹೇಳಿ ತೋರಿಸುತ್ತಾನೆ. ಪುರುಷನು ಕ್ರಿಸ್ತನಿಗೆ ಒಳಪಟ್ಟಿರುವ ಪ್ರಕಾರ, ಸ್ತ್ರೀಯರು ಪುರುಷರಿಗೆ ಒಳಪಟ್ಟಿರುವದರಿಂದ ಅವರು ಸಭೆಯಲ್ಲಿ ಮುಸುಕು ಹಾಕಿ ಕೊಳ್ಳ ಆಜ್ಞಾಪಿಸಿ, (೧೧. ೨—೧೨.) ಹಾಗೆ ಮಾಡುವದು ಸ್ವಭಾವಕ್ಕೂ ಲೋಕಪದ್ಧತಿಗೂ ಸರಿಯಾದದ್ದೆಂದು ಹೇಳುತ್ತಾನೆ. (೧೩—೧೬. ವ.) ರಾತ್ರಿಭೋಜನದ ಔತಣವನ್ನು ಒಬ್ಬೊಬ್ಬನು ತನ್ನ ಇಷ್ಟದ ಪ್ರಕಾರ ಉಂಡದಕ್ಕಾಗಿ ಅವರನ್ನು ಖಂಡಿಸಿ, (೧೭—೧೯. ವ.) ಐಶ್ವರ್ಯವಂತರ ಹೊಟ್ಟೆಬಾಕತನಕ್ಕೆ ಅವರನ್ನು ಎಚ್ಚರಿಸುತ್ತಾನೆ. (೨೦—೨೨. ವ.) ರಾತ್ರಿಭೋಜನದ ಔತಣವು ಏರ್ಪಟ್ಟ ಕಾರಣವನ್ನೂ ಅದನ್ನು ಅನುಭವಿಸ ತಕ್ಕ ಕ್ರಮವನ್ನೂ ಹೇಳಿ, (೨೩—೨೬. ವ.) ಅದನ್ನು ಭಕ್ತಿವಿನಯದಿಂದ ಅನುಭವಿಸದವರಿಗೆ ಬರುವ ಕೇಡನ್ನು ಹೇಳುತ್ತಾನೆ. (೨೭—೩೪. ವ.)

4. ಕೊರಿಂಥದ ಸಭೆಯ ಸ್ತ್ರೀಯರು ತಮ್ಮನ್ನು ಪುರುಷರಿಗೆ ಸಮಾನವಾದವರಾಗಿ ಎಣಿಸಿ ಕೊಂಡರೆಂದು ತೋರುತ್ತದೆ. (ಗಲಾ. ೩. ೨೮.) ಅದರಿಂದ ಅವರು ಯೆಹೂದ್ಯರ ಗ್ರೀಕರ ಸ್ತ್ರೀಯರು ಮಾಡಿದ ಹಾಗೆ, ಮುಸುಕು ಹಾಕಿ ಕೊಳ್ಳದೆ, ದೇವಾರಾಧನೆಗೆ ಬಂದು ಪ್ರಾರ್ಥಿಸಿ ಪ್ರಸಂಗಿಸ ಮುಂಕೊಂಡರು. ಈ ಎರಡು ಕ್ರಮಹೀನವಾದ ನಡತೆಗಳನ್ನು ಪೌಲನು ಈ ಸಂಧಿಯಲ್ಲಿಯೂ, ೧೪ನೇ ಸಂಧಿಯಲ್ಲಿಯೂ ಖಂಡಿಸುತ್ತಾನೆ. ಎಲ್ಲಾ ಮನುಷ್ಯರೂ ಕ್ರಿಸ್ತನಿಂದಲೂ ಕ್ರಿಸ್ತನಿಗಾಗಿಯೂ ಸೃಷ್ಟಿಸಲ್ಪಟ್ಟಿರುವದರಿಂದ ಆತನೇ ಪುರುಷನಿಗೆ ತಲೆಯಾಗಿದ್ದಾನೆ. ಸ್ತ್ರೀಯು ಪುರುಷನ ಪಕ್ಕೆಎಲುವಿನಿಂದಲೂ, ಅವನಿಗೆ ತಕ್ಕ ಸಹಾಯವಾಗಿಯೂ ಸೃಷ್ಟಿಸಲ್ಪಟ್ಟದ್ದರಿಂದ ಪುರುಷನೇ ಅವಳಿಗೆ ತಲೆಯಾಗಿದ್ದಾನೆ. ಆದದರಿಂದ ಸ್ತ್ರೀಯು ಪುರುಷನಿಗೆ ಅಡಗಿದವಳಾಗಿ ನಡಿಯ ತಕ್ಕದ್ದು.

5. ಕ್ರಿಸ್ತನು ಮನುಷ್ಯನಾಗಿಯೂ ಮಧ್ಯಸ್ಥನಾಗಿಯೂ ಇರುವ ವಿಷಯದಲ್ಲಿ ತಂದೆಯಾದ ದೇವರಿಗೆ ಕಡಿಮೆಯಾದವನಾಗಿರುವದರಿಂದ ದೇವರು ಕ್ರಿಸ್ತನಿಗೆ ತಲೆಯಾಗಿದ್ದಾನೆ. (ಯೋಹಾ. ೧೪. ೨೮. ಫಿಲಿ. ೨. ೬—೮.) ದೇವರ ಸರ್ವ ಸೃಷ್ಟಿಯಲ್ಲಿಯೂ, ಮುಖ್ಯವಾಗಿ ಸತ್ಯವೇದದಿಂದ ಪ್ರಕಟವಾದ ಕ್ರಿಸ್ತನ ಮಾರ್ಗದಲ್ಲಿಯೂ ಕ್ರಮವೂ ವರಿಸೆಯೂ ತೋರುತ್ತವೆ. ದೇವರು ಯಾರ್ಯಾರಿಗೆ ಯಾವ್ಯಾವ ಕ್ರಮವನ್ನು ಇಟ್ಟಿದ್ದಾನೋ ಆ ಕ್ರಮದ ಪ್ರಕಾರ ಆತನನ್ನು ಸೇವಿಸಿ ಸ್ತುತಿಸ ತಕ್ಕದ್ದು.

6. ಪ್ರವಾದಿಸುವದನ್ನು ಕುರಿತು ರೋಮಾ. ೧೨. ೬. ವಚನದ ವ್ಯಾಖ್ಯಾನ ನೋಡ ಬೇಕು.

7. ಗ್ರೀಕರಲ್ಲಿ ಪುರುಷರು ತಲೆಗೆ ರುಮಾಲು ಇಲ್ಲದೆ ದೇವಾಲಯಕ್ಕೆ ಹೋಗಿ ಆರಾಧನೆ ಮಾಡುವರು. ಗ್ರೀಕರಲ್ಲಿಯೂ ಆಸ್ಯಖಂಡದವರಲ್ಲಿಯೂ ಆರಾಧನೆಯ ಸಮಯದಲ್ಲಿ ಜನರು ಕೂಡುವ ಸಂಘಸ್ಥಳಗಳಲ್ಲಿ ಸ್ತ್ರೀಯರು ಮುಸುಕು ಹಾಕಿ ಕೊಳ್ಳುವದು ವಾಡಿಕೆಯಾಗಿತ್ತು. ಈ ಪದ್ಧತಿಯನ್ನು ಅನುಸರಿಸದ ಪುರುಷರೂ ಸ್ತ್ರೀಯರೂ ತಮ್ಮ ತಲೆಗಳನ್ನು ಅವಮಾನ ಮಾಡುವವರಾಗಿದ್ದಾರೆ, ಅನ್ನುತ್ತಾನೆ.



೬ ಯಾಕಂದರೆ ಅದು ಅವಳು [1]ಬೋಳಿಸಲ್ಪಟ್ಟ ಹಾಗೆಯೇ ಇರುವದು. ಯಾಕಂದರೆ ಸ್ತ್ರೀಯು ಮುಸುಕು
ಹಾಕದಿದ್ದರೆ, ಮತ್ತು ಕತ್ತರಿಸಿ ಕೊಳ್ಳಲಿ. ಆದರೆ ಕತ್ತರಿಸಿ ಕೊಳ್ಳುವದಾದರೂ, ಬೋಳಿಸಿ ಕೊಳ್ಳುವದಾ
೭ ದರೂ ಸ್ತ್ರೀಗೆ ನಾಚಿಕೆಯಾಗಿದ್ದರೆ, ಮುಸುಕು ಹಾಕಿ ಕೊಳ್ಳಲಿ. ಹ್ಯಾಗಂದರೆ ದೇವರ ಹೋಲಿಕೆಯೂ
ಮಹಿಮೆಯೂ ಉಂಟಾಗಿರುವ ಪುರುಷನಿಗೆ ತಲೆ [2]ಮುಚ್ಚಿ ಕೊಳ್ಳುವದು ಅಗತ್ಯವಿಲ್ಲ. ಆದರೆ ಸ್ತ್ರೀಯು
೮ ಪುರುಷನ ಮಹಿಮೆಯಾಗಿದ್ದಾಳೆ. ಯಾಕಂದರೆ ಪುರುಷನು ಸ್ತ್ರೀಯಿಂದಲ್ಲ; ಸ್ತ್ರೀಯು ಪುರುಷನಿಂದಲೇ.
೯,೧೦ ಮತ್ತು ಪುರುಷನು ಸ್ತ್ರೀಗೋಸ್ಕರ ನಿರ್ಮಿಸಲ್ಪಡಲಿಲ್ಲ, ಸ್ತ್ರೀಯು ಪುರುಷನಿಗೋಸ್ಕರವೇ. ಇದಕ್ಕೋ
೧೧ ಸ್ಕರ ಸ್ತ್ರೀಗೆ [3]ದೂತರ ನಿಮಿತ್ತ, ತಲೆಯ ಮೇಲೆ ಅಧಿಕಾರವಿರ ಬೇಕು. ಆದಾಗ್ಯೂ [4]ಕರ್ತನಲ್ಲಿ ಸ್ತ್ರೀಯ
೧೨ ಹೊರ್ತು ಪುರುಷನಿಲ್ಲ; ಪುರುಷನ ಹೊರ್ತು ಸ್ತ್ರೀ ಇಲ್ಲ. ಯಾಕಂದರೆ ಸ್ತ್ರೀಯು ಪುರುಷನಿಂದ ಹ್ಯಾಗೋ,
೧೩ ಹಾಗೆಯೇ ಪುರುಷನು ಸ್ತ್ರೀಯಿಂದ; ಆದರೆ ಎಲ್ಲಾ ದೇವರಿಂದಲೇ. ನಿಮ್ಮಲ್ಲಿ ನೀವೇ ನಿರ್ಣಯಿಸಿರಿ—
೧೪ ಸ್ತ್ರೀಯು ಮುಸುಕಿಲ್ಲದೆ ದೇವರಿಗೆ ಪ್ರಾರ್ಥಿಸುವದು ಯುಕ್ತವಾಗಿದೆಯೋ? ಏನು! ಪುರುಷನು ಕೂದಲು
೧೫ ಬೆಳಿಸಿ ಕೊಂಡರೆ, ಅವನಿಗೆ ಅವಮಾನವಾಗಿದೆ ಎಂದೂ, ಸ್ತ್ರೀಯು ಕೂದಲು ಬೆಳಿಸಿ ಕೊಂಡರೆ, ಅವಳಿಗೆ
ಮಹಿಮೆಯಾಗಿದೆ ಎಂದೂ, [5]ಸ್ವಭಾವವು ತಾನೇ ನಿಮಗೆ ಬೋಧಿಸುವದಿಲ್ಲವೋ? ಏನಂದರೆ, ಅವಳಿಗೆ
ಕೂದಲು ಮುಸುಕಾಗಿ ಕೊಡಲ್ಪಟ್ಟದೆ.
೧೬ ಆದರೆ [6]ಒಬ್ಬನು ತರ್ಕಪ್ರಿಯನಾಗಿರ ಬೇಕೆಂದಿದ್ದರೆ, ನಮಗಾದರೂ ದೇವರ ಸಭೆಗಳಿಗಾದರೂ ಇಂಥ
ಮರ್ಯಾದೆ ಇಲ್ಲ.

1. ಗ್ರೀಕ ದೇಶದಲ್ಲಿಯೂ ಯೆಹೂದ್ಯ ದೇಶದಲ್ಲಿಯೂ ತಲೆಯನ್ನು ಬೋಳಿಸಿ ಕೊಳ್ಳುವದು ಅವಮಾನಕ್ಕೂ ದುಃಖಕ್ಕೂ ಗುರುತಾಗಿತ್ತು.

2. ತಲೆಯನ್ನು ಮುಚ್ಚಿ ಕೊಳ್ಳುವದು ವಿಧೇಯತ್ವಕ್ಕೂ ಮರ್ಯಾದೆಗೂ ಗುರುತಾಗಿದ್ದದರಿಂದ, ಅದನ್ನು ಪುರುಷನಲ್ಲ, ಸ್ತ್ರೀಯೇ ತಲೆಯನ್ನು ಮುಚ್ಚಿ ಕೊಳ್ಳ ಬೇಕು. ಪುರುಷನು ದೇವರ ಹೋಲಿಕೆಯಾಗಿ ಸೃಷ್ಟಿಸಲ್ಪಟ್ಟವನಾದದರಿಂದ ಅವನು ಮೇಲಾದವನಾಗಿದ್ದಾನೆ. ಸ್ತ್ರೀಯು ಪುರುಷನಲ್ಲಿಂದ ಪುರುಷನಿಗಾಗಿ ಸೃಷ್ಟಿಸಲ್ಪಟ್ಟವಳಾದದರಿಂದ ಅವಳು ಪುರುಷನಿಗಿಂತ ಕಡಿಮೆಯಾದವಳಾಗಿದ್ದಾಳೆ. (೮, ೯. ವ. ಉತ್ಪ. ೨. ೧೮—೨೦.)

3. ದೂತರು ಸಮಾಚಾರ ತಕ್ಕೊಂಡು ಬರುವವರೆಂದು ಒಂದು ಅರ್ಥವಾಗುತ್ತದೆ. (ಲೂಕ. ೭. ೨೪; ೯. ೫೨.) ಮತ್ತು ಪಾಳತಿ ನೋಡ ಬರುವವರಿಗೂ, ಬೇರೆ ಸಭೆಗಳಿಂದ ಸಮಾಚಾರ ತರುವವರಿಗೂ ದೂತರೆಂದು ಹೇಳುವದುಂಟು. ಸಭೆಯ ಮುಖ್ಯಸ್ಥರಿಗೂ ದೂತರೆಂಬ ಹೆಸರುಂಟು. (ಪ್ರಕ. ೧. ೨೦.) ಇಲ್ಲಿ ಪರಲೋಕದಲ್ಲಿರುವ ದೇವದೂತರನ್ನು ಕುರಿತೇ ಹೇಳಿ ಇದೆ. ಅವರು ರಕ್ಷಣೆ ಹೊಂದಲಿರುವವರಿಗೆ ಸೇವೆ ಮಾಡುವ ಆತ್ಮಗಳಾಗಿದ್ದಾರೆ. (ಇಬ್ರೀ. ೧. ೧೪.) ಸಭೆಯಲ್ಲಿ ನಡಿಯುವ ಆರಾಧನೆಯ ಕ್ರಮವನ್ನು ನೋಡುವವರಾಗಿಯೂ ಕಾಯುವವರಾಗಿಯೂ ಇದ್ದಾರೆ. (ಮತ್ತಾ. ೧೮. ೧೦.) ಮತ್ತು ಪರಮ ಸಭೆಯಲ್ಲಿ ತಮ್ಮ ದೀನತ್ವಕ್ಕೆ ಗುರುತಾಗಿ ತಮ್ಮ ರೆಕ್ಕೆಗಳಿಂದ ತಮ್ಮ ಮುಖಗಳನ್ನು ಮುಚ್ಚಿ ಕೊಳ್ಳುತ್ತಾರೆ. (ಯೆಶಾ. ೬. ೨.) ಪರಲೋಕದ ಸಭೆಯ ಕ್ರಮವನ್ನು ನೋಡುವ ಅವರು ಭೂಲೋಕಸಭೆಯ ಕ್ರಮಹೀನವನ್ನು ನೋಡಿದರೆ, ಅದು ಅವರಿಗೆ ಪ್ರಿಯವಾಗಿರಲಾರದು. ಆದದರಿಂದ ಅವರ ನಿಮಿತ್ತ ಸಭೆಯಲ್ಲಿ ಸ್ತ್ರೀಯರು ಮುಸುಕು ಹಾಕಿ ಕೊಳ್ಳ ಬೇಕು. ವಿಧೇಯತ್ವಕ್ಕೆ ಗುರುತಾಗಿರುವ ಮುಸುಕು ಅವರ ತಲೆಗೆ ಕಿರೀಟದ ಹಾಗಿರುತ್ತದೆ.

4. ಸೃಷ್ಟಿಕರ್ತನಾದ ದೇವರು ಲೋಕವನ್ನು ಉಂಟು ಮಾಡಿರುವ ನೇಮಕದ ಪ್ರಕಾರ, ಆತ್ಮವಿಷಯದಲ್ಲಿಯೂ ಸ್ತ್ರೀಗೂ ಪುರುಷನಿಗೂ ಒಂದು ಸ್ಥಾನವನ್ನು ನೇಮಿಸಿ, ಅದರಲ್ಲಿ ಇದ್ದು ಕೊಂಡು ದೇವಭಕ್ತರ ಸಂತತಿಯನ್ನು ಹೆಚ್ಚಿಸಿ ಅನುಕೂಲ ಮಾಡುವ ಹಾಗೆ ನೇಮಿಸಿದ್ದಾನೆ. ರಕ್ಷಣೆಯ ವಿಷಯದಲ್ಲಿ ಗಂಡು ಹೆಣ್ಣು ಎಂಬ ಭೇದವಿಲ್ಲ. (ಗಲಾ. ೩. ೨೮.) ಸ್ತ್ರೀಯು ಪುರುಷನಿಂದ ಉಂಟಾದದರಿಂದಲೂ, ಪುರುಷರು ಸ್ತ್ರೀಯರಲ್ಲಿ ಹುಟ್ಟುವದರಿಂದಲೂ, ಸ್ತ್ರೀ ಇಲ್ಲದೆ ಪುರುಷನಿಲ್ಲ, ಪುರುಷನಿಲ್ಲದೆ ಸ್ತ್ರೀ ಇಲ್ಲ, ಆದರೆ ಅವರು ದೇವರ ನೇಮಕದ ಪ್ರಕಾರ ತಮಗೆ ಕೊಡಲ್ಪಟ್ಟ ಕೆಲಸಗಳನ್ನು ಕರ್ತನಲ್ಲಿ ಪೂರೈಸಿದರೆ, ಅವರಿಗೆ ಇಹದಲ್ಲಿಯೂ ಪರದಲ್ಲಿಯೂ ಭಾಗ್ಯ ಉಂಟು.

5. ಸ್ವಭಾವವು ಎಂಬುವದು, ಕ್ರಮದ ವಿಷಯ ಮನುಷ್ಯರಿಗೆ ಇರುವ ಸ್ವಾಭಾವಿಕ ಯೋಚನೆಯನ್ನು ಕುರಿತದ್ದು. ಪುರುಷರಿಗೂ ಸ್ತ್ರೀಯರಿಗೂ ವ್ಯತ್ಯಾಸ ತಿಳಿಯುವದಕ್ಕೆ ಸಕಲ ದೇಶಗಳವರೂ ಕೆಲವು ಪದ್ಧತಿಗಳನ್ನು ಏರ್ಪಡಿಸಿ ಕೊಂಡಿದ್ದಾರೆ. ಒಂದೊಂದು ದೇಶದಲ್ಲಿಯೂ ಪದ್ಧತಿಗಳು ವ್ಯತ್ಯಾಸವಿದ್ದಾಗ್ಯೂ, ಆ ಪದ್ಧತಿಗಳು ಇರ ಬೇಕೆಂಬ ಸ್ವಾಭಾವಿಕವಾದ ಯೋಚನೆಯಲ್ಲಿ ವ್ಯತ್ಯಾಸವಿಲ್ಲ.

6. ಮೇಲೆ ಹೇಳಿದ ನ್ಯಾಯಗಳನ್ನು ಒಪ್ಪಿ ಕೊಳ್ಳದವನು ತರ್ಕಪ್ರಿಯನಾಗಿದ್ದಾನೆ. ಅವನಿಗೆ ನ್ಯಾಯ ಹೇಳುವದರಿಂದ ಪ್ರಯೋಜನವಿಲ್ಲ. ಕೊರಿಂಥದ ಸಭೆಯಲ್ಲಿರುವ ಸ್ತ್ರೀಯರ ಪದ್ಧತಿಗೆ ವಿರೋಧವಾಗಿ ಬೇರೆ ಸಭೆಗಳಲ್ಲಿರುವ ಪದ್ಧತಿಯನ್ನು ಅಪೊಸ್ತಲಿಕ ಅಧಿಕಾರದಿಂದ ಹೇಳುವದೇ ಸಾಕಾದ ನ್ಯಾಯವಾಗಿರುತ್ತದೆ.

ರಾತ್ರಿಭೋಜನವನ್ನು ಕುರಿತ ಕಟ್ಟಳೆ.

೧೭ ಮತ್ತು ಹೀಗೆ ಅಪ್ಪಣೆ ಕೊಡಲಾಗಿ ನಿಮ್ಮನ್ನು [1]ಹೊಗಳುವದಿಲ್ಲ; ಏನಂದರೆ, ಹೆಚ್ಚು ಮೇಲಿಗಲ್ಲ, ಹೆಚ್ಚು
೧೮ ಕೇಡಿಗೆ ಕೂಡಿ ಬರುತ್ತೀರಿ. ಹ್ಯಾಗಂದರೆ, ಮೊದಲನೇದು, ನೀವು [2]ಸಭೆಯಲ್ಲಿ ಕೂಡಿ ಬರುವಾಗ್ಯೆ, ನಿಮ್ಮಲ್ಲಿ
೧೯ ಭೇದಗಳುಂಟೆಂದು ಕೇಳುತ್ತೇನೆ; ಮತ್ತು ಸ್ವಲ್ಪ ನಂಬುತ್ತೇನೆ. ಯಾಕಂದರೆ ಯೋಗ್ಯರು ನಿಮ್ಮಲ್ಲಿ ತೋರ
ಲ್ಪಡುವ ಹಾಗೆ, ನಿಮ್ಮಲ್ಲಿ [3]ಭೇದಗಳು ಸಹ ಉಂಟಾಗಿರ ಬೇಕು.
೨೦ ಹಾಗಾದರೆ, ನೀವು ಒಂದೇ ಸ್ಥಳಕ್ಕೆ ಕೂಡಿ ಬರುವಾಗ್ಯೆ, ಅದು [4]ಕರ್ತನ ಭೋಜನವನ್ನು ಉಣ್ಣುವದು ಅಲ್ಲ.
೨೧ ಯಾಕಂದರೆ ಉಣ್ಣುವದರಲ್ಲಿ ಒಬ್ಬೊಬ್ಬನು ಸ್ವಂತ ಭೋಜನವನ್ನು ಮುಂತೆಗೆದು ಕೊಳ್ಳುತ್ತಾನೆ; ಮತ್ತು
೨೨ ಒಬ್ಬನು ಹಶಿಯುತ್ತಾನೆ; ಮತ್ತೊಬ್ಬನು ಮತ್ತನಾಗಿದ್ದಾನೆ. ಇದೇನು? ಉಣ್ಣುವದಕ್ಕೂ [5]ಕುಡಿಯುವ
ದಕ್ಕೂ ನಿಮಗೆ ಮನೆಗಳಿಲ್ಲವೋ? ಇಲ್ಲವೆ ದೇವರ ಸಭೆಯನ್ನು ಅಸಡ್ಡೆ ಮಾಡಿ, ಇಲ್ಲದವರನ್ನು ನಾಚಿಕೆ ಪಡಿ
ಸುತ್ತೀರೋ? ನಿಮಗೇನು ಹೇಳಲಿ? ಇದರಲ್ಲಿ ನಿಮ್ಮನ್ನು ಹೊಗಳಲೋ? ಹೊಗಳುವದಿಲ್ಲ.
೨೩ ಯಾಕಂದರೆ [6]ನಿಮಗೆ ಒಪ್ಪಿಸಿದ್ದನ್ನೇ ಕರ್ತನಿಂದ ಹೊಂದಿದೆನು; ಏನಂದರೆ, ಕರ್ತನಾದ ಯೇಸು ಒಪ್ಪಿ
೨೪ ಸಲ್ಪಟ್ಟ ರಾತ್ರಿಯಲ್ಲಿ ರೊಟ್ಟಿಯನ್ನು ತೆಗೆದು ಕೊಂಡು, ಸ್ತೋತ್ರ ಮಾಡಿ, ಮುರಿದು, ಹೇಳಿದ್ದೇನಂದರೆ—
ತಕ್ಕೊಳ್ಳಿರಿ, ಉಣ್ಣಿರಿ; ಇದು ನಿಮಗೋಸ್ಕರ ಮುರಿಯಲ್ಪಡುವ [7]ನನ್ನ ಶರೀರವಾಗಿದೆ; ನನ್ನನ್ನು ನೆನಸುವ
೨೫ ದಕ್ಕೆ ಇದನ್ನು ಮಾಡಿರಿ. ಅದೇ ಪ್ರಕಾರ, ಭೋಜಿಸಿದ ಮೇಲೆ, ಪಾತ್ರೆಯನ್ನು ತೆಗೆದು ಕೊಂಡು, ಹೇಳಿ
ದ್ದೇನಂದರೆ—ಈ ಪಾತ್ರೆಯು ನನ್ನ ರಕ್ತದಲ್ಲಿರುವ [8]ಹೊಸ ಒಡಂಬಡಿಕೆಯಾಗಿದೆ; ನೀವು [9]ಕುಡಿಯುವಷ್ಟು

1. ರಾತ್ರಿಭೋಜನದ ವಿಷಯದಲ್ಲಿ, ಪೌಲನು ೨ನೇ ವಚನದಲ್ಲಿ ಹೇಳಿದಂತೆ ಅವರನ್ನು ಹೊಗಳದೆ, ತಪ್ಪು ಹೊರಿಸುವ ವಿಧವಾಗಿ ಅವರಿಗೆ ಕಟ್ಟಳೆ ಕೊಡುತ್ತಾನೆ.

2. ಸಭೆ ಅಂದರೆ, ಅವರು ಒಂದಾಗಿ ಕೂಡಿ ಬರುವ ಎಲ್ಲಾ ಕೂಟಗಳನ್ನು ಕುರಿತದ್ದು.

3. ಭೇದಗಳೆಂಬುವದು ಮತಾಭಿಪ್ರಾಯಗಳ ಭೇದವನ್ನು ಕುರಿತದ್ದಲ್ಲ. ಅವರೊಳಗಿದ್ದ ತಾರತಮ್ಯಗಳನ್ನು ಕುರಿತದ್ದಾಗಿದೆ. ಅಂಥಾ ಭೇದಗಳು ಅವರು ರಾತ್ರಿಭೋಜನವನ್ನು ಅನುಭವಿಸುವಾಗಲೂ ಕಾಣಲ್ಪಟ್ಟವು. (ಲೂಕ. ೨೨. ೨೪.) ಲೋಕದಲ್ಲಿ ಸ್ಥಾಪಿಸಲ್ಪಟ್ಟಿರುವ ಸಭೆಗಳ ತತ್ಕಾಲ ಸ್ಥಿತಿಯನ್ನು ಯೋಚಿಸಿದರೆ, ಇಂಥಾ ತಾರತಮ್ಯಗಳೂ ಭೇದಗಳೂ ಸಂಭವಿಸ ಬೇಕಾಗಿದೆ. (ಮತ್ತಾ. ೧೮. ೭.) ಉತ್ತಮರು ಯಾರೆಂದು ತೋರ ಬರುವದಕ್ಕಾಗಿ ದೇವರು ಅವುಗಳಿಗೆ ಸ್ಥಳ ಕೊಡುತ್ತಾನೆ. (೧೯. ವ.)

4. ಕರ್ತನು ತನ್ನ ಶಿಷ್ಯರ ಸಂಗಡ ಪಸ್ಕ ಭೋಜನವನ್ನು ಉಣ್ಣುವಾಗ ರಾತ್ರಿಭೋಜನವನ್ನು ಏರ್ಪಡಿಸಿದ ಪ್ರಕಾರ (ಲೂಕ. ೨೨. ೧೪—೨೦.) ಆದಿ ಕ್ರೈಸ್ತರು ಈ ಪರಿಶುದ್ಧ ರಾತ್ರಿಭೋಜನವನ್ನು ತೆಗೆದು ಕೊಳ್ಳುವ ಸಮಯದಲ್ಲಿ ಪ್ರೀತಿಗೆ ಗುರುತಾಗಿ ಒಂದಾಗಿ ಕೂಡಿ ಉಣ್ಣುವರು. (ಅಪೊ. ಕ್ರಿ. ೨. ೪೨—೪೬.) ಇದಕ್ಕೆ ಪ್ರೀತಿಯ ಔತಣವೆಂಬ ಹೆಸರಿತ್ತು. ರಾತ್ರಿಭೋಜನವನ್ನು ಉಣ್ಣುವದಕ್ಕೆ ಬರುವವರು ತಮ್ಮ ಭೋಜನಪದಾರ್ಥಗಳನ್ನು ಸಹ ಕೂಡ ತರುವರು. ಆದರೆ ಕೊರಿಂಥದ ಸಭೆಯಲ್ಲಿ ನಡಿಯುತ್ತಿದ್ದ ಈ ಪದ್ಧತಿಯನ್ನು ಯೋಚಿಸುವಾಗ ರಾತ್ರಿಭೋಜನದ ಕ್ರಮವು ಇದ್ದ ಹಾಗೆ ತೋರಲಿಲ್ಲ. ಒಬ್ಬನು ಉಣ್ಣುವದಕ್ಕಿಂತ ಮುಂಚೆ ಇನ್ನೊಬ್ಬನು ಉಣ್ಣುವನು. (೨೧. ವ.) ಬಡವನಿಗೆ ಭೋಜನವಿಲ್ಲ. ಐಶ್ವರ್ಯವಂತನು ಅಮಿತವಾಗಿ ಉಣ್ಣುವನು. (೨೧, ೨೨. ವ.) ಇಂಥಾ ಕ್ರಮಹೀನವು ಅವರಲ್ಲಿ ನಡಿಯುತ್ತಿದ್ದದರಿಂದ ಅವರು ಮಾಡಿದ್ದು ಕರ್ತನ ರಾತ್ರಿಭೋಜನವೇ ಅಲ್ಲ.

5. ಉಂಡು ಕುಡಿದು ಸಂತೋಷ ಪಡ ಬೇಕಾದರೆ ಅವರವರ ಸ್ವಂತ ಮನೆಗಳಲ್ಲಿ ಹಾಗೆ ಮಾಡ ಬೇಕೇ ಹೊರ್ತು, ಬಡವರು ಸಹ ಕೂಡಿ ಬರುವ ಸಭೆಯಲ್ಲಿ ಹಾಗೆ ಮಾಡುವದು ಸರಿಯಲ್ಲ; ಐಶ್ವರ್ಯವಂತರು ಅಧಿಕವಾಗಿ ಉಂಡು ಸಂಭ್ರಮವಾಗಿರುವಾಗ ಗತಿ ಇಲ್ಲದ ಬಡವರು ನಾಚಿ ಕೊಂಡಿರುವರು. ಕೆಲ ವರುಷಗಳ ಹಿಂದೆ ಇದ್ದ ಕ್ರೈಸ್ತರೊಳಗೂ ಈಗ ಕೊರಿಂಥದ ಕ್ರೈಸ್ತರೊಳಗೂ ಈ ವಿಷಯದಲ್ಲಿ ದೊಡ್ಡ ವ್ಯತ್ಯಾಸವಿತ್ತೆಂದು ತಿಳಿಯ ಬಹುದು. (ಅಪೊ. ಕ್ರಿ. ೨. ೪೨—೪೭; ೪. ೩೨—೩೫. ನೋಡು.)

6. ಕರ್ತನು ತನಗೆ ಪ್ರಕಟ ಮಾಡಿದ ಪ್ರಕಾರ (ಗಲಾ. ೧. ೧೨.) ಪೌಲನು ರಾತ್ರಿಭೋಜನವನ್ನು ಆಚರಿಸುವ ಕ್ರಮವನ್ನು ಕೊರಿಂಥದ ಸಭೆಯವರಿಗೆ ತಿಳಿಸಿದ್ದರಿಂದ ಅದರ ವಿಷಯ ಅವರು ನೆವನು ಹೇಳ ಸ್ಥಳವಿಲ್ಲದೆ ಇತ್ತು. ಕರ್ತನ ರಾತ್ರಿಭೋಜನವನ್ನು ಕುರಿತು ಲೂಕನ ಸುವಾರ್ತೆಯಲ್ಲಿ ಹೇಳಿರುವದಕ್ಕೂ ಈ ಸಂಧಿಯಲ್ಲಿ ಹೇಳಿರುವದಕ್ಕೂ ಬಹಳ ಸಮ್ಮಂಧವಿರುವದರಿಂದ, ಲೂಕನು ಪೌಲನ ಬಳಿಯಲ್ಲಿ ಕೇಳಿದ್ದ ಪ್ರಕಾರ ಬರೆದಿದ್ದಾನೆಂದು ಕೆಲವರು ನೆನಸುತ್ತಾರೆ. (ಲೂಕ. ೨೨. ೧೯, ೨೦.)

7. ನನ್ನ ಶರೀರವಾಗಿದೆ ಎಂಬುವದಕ್ಕೆ, ನನ್ನ ಶರೀರಕ್ಕೆ ಗುರುತಾಗಿದೆ ಎಂಬ ಅರ್ಥವಾಗುತ್ತದೆ. ೨೫ನೇ ವಚನದಲ್ಲಿ ಪಾತ್ರೆಯನ್ನು ಕುರಿತು ಹೇಳಿರುವದಕ್ಕೂ ಇದೇ ತಾತ್ಪರ್ಯವು. (ಮತ್ತಾ. ೨೬. ೨೬—೨೮. ವಚನಗಳ ವ್ಯಾಖ್ಯಾನ ನೋಡ ಬೇಕು.)

8. ಈ ಹೊಸ ಒಡಂಬಡಿಕೆಯು ಪಾತ್ರೆಯಲ್ಲಿರುವ ದ್ರಾಕ್ಷೆರಸದಿಂದ ತೋರಿಸಲ್ಪಟ್ಟ ಕ್ರಿಸ್ತನ ರಕ್ತದಿಂದ ಸ್ಥಿರ ಪಡಿಸಲ್ಪಟ್ಟಿತು. (ಹೊರ. ೨೪. ೮. ಮತ್ತಾ. ೨೬. ೨೮. ವಚನಗಳ ವ್ಯಾಖ್ಯಾನ ನೋಡ ಬೇಕು.)

9. ರಾತ್ರಿಭೋಜನವನ್ನು ಆಚರಿಸ ತಕ್ಕ ಕಾಲವು ಗೊತ್ತು ಮಾಡಲ್ಪಡಲಿಲ್ಲ. ಮೊದಲು ದಿನಾಲೂ (ಅಪೊ. ಕ್ರಿ. ೨. ೪೬.) ತರುವಾಯ ಪ್ರತಿ ವಾರವೂ ಆಚರಿಸಲ್ಪಟ್ಟಿತೆಂದು (ಅಪೊ. ಕ್ರಿ. ೨೦. ೭.)



೨೬ ಸಾರಿ ನನ್ನನ್ನು ನೆನಸುವದಕ್ಕೆ ಇದನ್ನು ಮಾಡಿರಿ. ಯಾಕಂದರೆ ಎಷ್ಟು ಸಾರಿ ಈ ರೊಟ್ಟಿಯನ್ನು ತಿಂದು,
ಈ ಪಾತ್ರೆಯಲ್ಲಿ ಕುಡಿಯುವಿರೋ, ಕರ್ತನ ಮರಣವನ್ನು, ಅವನು ಬರುವ ಮಟ್ಟಿಗೂ, ತೋರಿಸುತ್ತೀರಿ.
೨೭ [1]ಆದದರಿಂದ, ಯಾವನು ಅಯೋಗ್ಯವಾಗಿ ಈ ರೊಟ್ಟಿಯನ್ನು ತಿನ್ನುವನೋ, ಇಲ್ಲವೆ [2]ಕರ್ತನ ಪಾತ್ರೆ
೨೮ ಯಲ್ಲಿ ಕುಡಿಯುವನೋ, ಅವನು ಕರ್ತನ ಶರೀರಕ್ಕೂ ರಕ್ತಕ್ಕೂ ಅಪರಾಧಿಯಾಗಿರುವನು. ಹಾಗಾದರೆ,
ಮನುಷ್ಯನು ತನ್ನನ್ನು ಪರೀಕ್ಷಿಸಿ ಕೊಳ್ಳಲಿ. ಮತ್ತು ಹೀಗೆ ಆ ರೊಟ್ಟಿಯಲ್ಲಿ ತಿಂದು, ಆ ಪಾತ್ರೆಯಲ್ಲಿ ಕುಡಿಯಲಿ.
೨೯ ಯಾಕಂದರೆ ಅಯೋಗ್ಯವಾಗಿ ತಿಂದು ಕುಡಿಯುವವನು ಕರ್ತನ ಶರೀರವನ್ನು ವಿಶೇಷ ಮಾಡದೆ, ತನಗೆ ಆಜ್ಞೆ
೩೦ ನಿರ್ಣಯವನ್ನು ತಿಂದು ಕುಡಿಯುತ್ತಾನೆ. ಇದಕ್ಕೋಸ್ಕರ ನಿಮ್ಮಲ್ಲಿ ಅನೇಕ ಬಲಹೀನರೂ, ರೋಗಿಸ್ಥರೂ
೩೧ ಇದ್ದಾರೆ; ಮತ್ತು ಬಹು ಮಂದಿ ನಿದ್ದೆ ಮಾಡುತ್ತಾರೆ. ನಿಶ್ಚಯವಾಗಿ ನಾವು ನಮ್ಮನ್ನು ವಿಚಾರಿಸಿ ಕೊಂ
೩೨ ಡರೆ, ನ್ಯಾಯತೀರಿಸಲ್ಪಡದೆ ಇರುವೆವು. ಆದರೆ ನ್ಯಾಯತೀರಿಸಲ್ಪಡಲಾಗಿ, ಲೋಕದ ಸಂಗಡ ಆಜ್ಞೆನಿರ್ಣ
೩೩ ಯ ಪಡದ ಹಾಗೆ, ಕರ್ತನಿಂದ ಶಿಕ್ಷೆ ಪಡುತ್ತೇವೆ. ಆದ ಕಾರಣ, ನನ್ನ ಸಹೋದರರೇ, ಉಣ್ಣುವದಕ್ಕೆ ಕೂಡಿ
೩೪ ಬರುವಾಗ, [3]ಒಬ್ಬರಿಗೊಬ್ಬರು ಕಾದು ಕೊಳ್ಳಿರಿ. ಮತ್ತು ನೀವು ಆಜ್ಞೆನಿರ್ಣಯಕ್ಕಾಗಿ ಕೂಡಿ ಬಾರದ
ಹಾಗೆ, ಒಬ್ಬನು ಹಶಿದರೆ, ಮನೆಯಲ್ಲಿ ತಿನ್ನಲಿ. ಮಿಕ್ಕಾದವುಗಳನ್ನು ನಾನು ಬಂದಾಗ ನೇಮಿಸುತ್ತೇನೆ.

ಆತ್ಮನ ವರಗಳನ್ನೂ ಅವುಗಳ ವ್ಯತ್ಯಾಸಗಳನ್ನೂ ಸಮ್ಮಂಧವನ್ನೂ ವಿವರಿಸಿದ್ದು.

12. [4]ಇದಲ್ಲದೆ, ಸಹೋದರರೇ, [5]ಆತ್ಮದವುಗಳನ್ನು ಕುರಿತು ನೀವು ಅರಿಯದಿರ, ನನಗೆ ಮನಸ್ಸಿಲ್ಲ.

ಕಾಣುತ್ತದೆ. ಕ್ರಿಸ್ತನ ಬರುವಿಕೆಯ ಮಟ್ಟಿಗೂ ಸಭೆಯು ಆತನ ಪಾಪನಿವಾರಣಬಲಿಯನ್ನೂ ಪುಣ್ಯಮರಣವನ್ನೂ ತೋರಿಸುತ್ತಾ ಇರುವದೇ ಇದರ ಗುರಿಯು.

1. ಕ್ರಿಸ್ತನ ಮರಣವನ್ನು ಜ್ಞಾಪಕ ಮಾಡಿ ಕೊಂಡು, ಅದನ್ನು ಲೋಕದವರಿಗೆ ಸಾರುವದೇ ಈ ಔತಣದ ತಾತ್ಪರ್ಯವಾಗಿರಲು, ಅದನ್ನು ಎಣಿಸದೆ ತಮ್ಮ ಆಶೆಗಳನ್ನು ತೀರಿಸಿ ಕೊಳ್ಳುವದಕ್ಕೆ ಅದನ್ನು ಉಣ್ಣುವವರು ಅಯೋಗ್ಯವಾಗಿ ತಿನ್ನುವವರಾಗಿದ್ದಾರೆ. ಶಿಲುಬೆಯ ಮೇಲೆ ಪ್ರಾಣತ್ಯಾಗ ಮಾಡಿದ ಕ್ರಿಸ್ತನ ಪುಣ್ಯ ಕೆಲಸವನ್ನು ತಕ್ಕ ಹಾಗೆ ಧ್ಯಾನಿಸದೆ ಇರುವವರು, ಪಾಪನಿವಾರಣಬಲಿಯಾದ ಆತನ ಶರೀರಕ್ಕೂ ರಕ್ತಕ್ಕೂ ವಿರೋಧವಾಗಿ ಪಾಪ ಮಾಡುತ್ತಾರೆ. ಆದದರಿಂದ ಇದನ್ನು ಉಣ್ಣುವದಕ್ಕಿಂತ ಮುಂಚೆ ಒಬ್ಬೊಬ್ಬನು ತನ್ನ ಹೃದಯವನ್ನು ಶೋಧಿಸಿ, ಈ ಔತಣದಲ್ಲಿ ತೋರಿಸಲ್ಪಟ್ಟ ಕ್ರಿಸ್ತನ ರಕ್ತವು ಎಂಥಾದ್ದೆಂದು ತಕ್ಕಂತೆ ತಿಳುವಳಿಕೆಯಿಂದ ಅದರಲ್ಲಿ ಶೇರ ಬೇಕು; ಇಲ್ಲದಿದ್ದರೆ, ದೇವರಿಂದ ಅವರಿಗೆ ಶಿಕ್ಷೆ ಬರುವದು. ಇಂಥಾ ಶಿಕ್ಷೆ ಕೊರಿಂಥದ ಸಭೆಯವರಿಗೆ ಬಂದದರಿಂದ ಆಗಾಗ್ಯೆ ಅವರಲ್ಲಿ ವ್ಯಾಧಿಯೂ ಮರಣವೂ ಸಂಭವಿಸಿದವು. ಇದು ಅವರು ಗುಣ ಪಡ ತಕ್ಕ ಶಿಕ್ಷೆಯೇ ಹೊರ್ತು, ಲೋಕದವರಿಗೆ ಬರುವ ಕಠಿಣವಾದ ಆಜ್ಞೆನಿರ್ಣಯವಲ್ಲ.

2. ಹಾಗೆಯೇ ಪಾತ್ರೆಯಲ್ಲಿ ಅಯೋಗ್ಯವಾಗಿ ಕುಡಿಯುವವನು ಸಹ ಅಪರಾಧಿಯಾಗುವನು.

3. ಎಲ್ಲರೂ ಒಂದಾಗಿ ಕೂಡಿ ಈ ಔತಣವನ್ನು ಅನುಭವಿಸುವಾಗೆ, ಒಬ್ಬರಿಗೋಸ್ಕರ ಒಬ್ಬರು ಕಾದಿರ ಬೇಕು. (೨೦ನೇ ವಚನದ ವ್ಯಾಖ್ಯಾನ ನೋಡ ಬೇಕು.)

4. ಅಜ್ಞಾನಮಾರ್ಗದಿಂದ ಹೊಸದಾಗಿ ಬಂದು ಸಭೆಯಲ್ಲಿ ಶೇರಿದ ಕೊರಿಂಥ್ಯರು ಆತ್ಮನ ವರಗಳನ್ನು ಕುರಿತು ದುರಭಿಪ್ರಾಯವುಳ್ಳವರಾಗಿದ್ದದರಿಂದಲೇ ಮೇಲೆ ಹೇಳಿದ ಕ್ರಮಹೀನಗಳೆಲ್ಲಾ ಉಂಟಾದವು. (೧೨. ೧, ೨.) ಆದದರಿಂದ ಆತ್ಮನ ವರಗಳನ್ನು ಹೊಂದಿ ಅವುಗಳ ಪ್ರಯೋಜನವನ್ನು ಗ್ರಹಿಸಿದವರು ಯಾರೆಂದು ತಿಳಿಯುವದಕ್ಕೆ ಪೌಲನು ಒಂದು ಪ್ರಮಾಣವನ್ನು ಹೇಳುತ್ತಾನೆ. (೩. ವ.) ನಾನಾ ವಿಧಗಳಾದ ಈ ವರಗಳೆಲ್ಲಾ ಒಬ್ಬನೇ ದೇವರಿಂದ ಕೊಡಲ್ಪಡುವವುಗಳಾಗಿಯೂ ಒಂದೇ ಗುರಿಯುಳ್ಳವುಗಳಾಗಿಯೂ ಇರುವದರಿಂದ ಅವುಗಳನ್ನು ಅನ್ಯೋನ್ಯ ಐಕ್ಯಕ್ಕೆ ತಕ್ಕ ವಿಧವಾಗಿ ಉಪಯೋಗಿಸ ಬೇಕು. (೪—೧೧. ವ.) ಕ್ರೈಸ್ತರೆಲ್ಲರೂ ಒಂದೇ ಶರೀರಕ್ಕೆ ಶೇರಿದ ಅವಯವಗಳಾಗಿಯೂ ಒಂದಕ್ಕೊಂದು ಸಮ್ಮಂಧ ಪಟ್ಟ ಅಂಗಗಳಾಗಿಯೂ ಇರುವದರಿಂದ, ಅವರ ಅಂತಸ್ತುಗಳೂ ವರಗಳೂ ವ್ಯತ್ಯಾಸವಾದವುಗಳಾಗಿದ್ದಾಗ್ಯೂ, ಅವರೆಲ್ಲರೂ ಐಕ್ಯವಾಗಿ ನಡಿಯ ಬೇಕು. (೧೨—೩೦. ವ.) ಎಲ್ಲಾ ಶ್ರೇಷ್ಠ ವರಗಳನ್ನೂ ವಿಶೇಷವಾಗಿ ಪ್ರೀತಿ ಎಂಬ ವರವನ್ನೂ ಅಭ್ಯಾಸ ಮಾಡದೆ ಇದ್ದರೆ, ಅವು ಪ್ರಯೋಜನಕ್ಕೆ ಬರಲಾರವು. (೩೧. ವ.) ಎಲ್ಲಾ ವರಗಳಲ್ಲಿಯೂ ಪ್ರೀತಿಯೇ ಶ್ರೇಷ್ಠ ವರವು. (೧೩. ಸಂಧಿ.) ಸಭೆಯ ಭಕ್ತಿ ಅಭಿವೃದ್ಧಿಯಾಗುವದಕ್ಕೆ ಹೇತುವೆಯಾಗಿರುವ ಪ್ರಸಂಗವರವೇ, ಅನ್ಯ ಭಾಷೆಗಳನ್ನು ಮಾತಾಡುವ ವರಕ್ಕಿಂತ ಮೇಲಾದದ್ದು. (೧೪. ೧—೫.) ವಿವರಿಸುವ ವರವಿಲ್ಲದೆ ಇದ್ದರೆ, ಅನ್ಯ ಭಾಷೆಗಳನ್ನು ಮಾತಾಡುವ ವರದಿಂದ ಬೇರೊಬ್ಬರಿಗೆ ಅನುಕೂಲವಿಲ್ಲದ್ದರಿಂದ ಪ್ರಯೋಜನವಿಲ್ಲ. (೬—೧೯. ವ.) ಅದು ಸಭೆಯ ಜ್ಞಾನದ ವೃದ್ಧಿಗೆ ಹೇತುವೆಯಾಗಿರದೆ, ಅವಿಶ್ವಾಸಿಗಳು ಗುಣ ಪಡುವದಕ್ಕೆ ಹೇತುವೆಯಾಗಿರುವದರಿಂದ, ಅದನ್ನು ಸರಿಯಾಗಿ ಪ್ರಯೋಗಿಸದ ಪಕ್ಷದಲ್ಲಿ ಹುಚ್ಚರೆಂದು ಬೇರೊಬ್ಬರು ತಪ್ಪಾಗಿ ಎಣಿಸ ಹೇತುವೆಯಾಗಿರುವದು. ಮನಸ್ಸಿಗೆ ತಗಲುವಂಥ ಪ್ರಸಂಗದಿಂದ ಒಳ್ಳೇ ಗ್ರಹಿಕೆ ಉಂಟಾಗುವದು. (೨೦—೨೫. ವ.) ಯಾವ ವರಗಳನ್ನು ಹೊಂದಿದವರಾಗಿದ್ದರೂ ಅವುಗಳನ್ನು ಉಪಯೋಗಿಸುವದರಲ್ಲಿ ಏನೂ ಕ್ರಮಹೀನವಿರಬಾರದು. (೨೬—೩೩. ವ.) ಸ್ತ್ರೀಯರು ಸಭೆಯಲ್ಲಿ ಮೌನವಾಗಿರ ಬೇಕು. (೩೪, ೩೫. ವ.) ಸುವಾರ್ತೆ ಕೊಡಲ್ಪಟ್ಟ ವಿಧವನ್ನು ಎಲ್ಲರೂ ನೆನಸಿ, ಅಪೊಸ್ತಲರ ಅಧಿಕಾರಕ್ಕೆ ಒಳ ಪಟ್ಟು ನಡಿಯ ಬೇಕು. (೩೬—೪೦. ವ.)

5. ಆತ್ಮದವುಗಳು ಅಂದರೆ, ಆತ್ಮನ ವರಗಳಾದ ಅದ್ಭುತವರಗಳನ್ನೂ ಪರಿಶುದ್ಧಾತ್ಮನ ಅನುಗ್ರಹಗಳನ್ನೂ ಕುರಿತದ್ದು. (೩. ವ.) ಇಂಥಾ ವರಪ್ರಸಾದಗಳು ಪೂರ್ವಿಕ ಕ್ರೈಸ್ತರಿಗೆ ಸಂಪೂರ್ಣವಾಗಿ ಕೊಡಲ್ಪಟ್ಟಿದ್ದವು.

ಮೂಕವಾದ ವಿಗ್ರಹಗಳ ಬಳಿಗೆ [1]ನಡಿಸಲ್ಪಟ್ಟ ಪ್ರಕಾರ, ವೈಯಲ್ಪಡುವ ಜನಾಂಗಗಳವರಾಗಿದ್ದಿರೆಂದು,
೨ ನೀವು ಬಲ್ಲಿರಿ. ಆದ ಕಾರಣ ನಾನು ನಿಮಗೆ ತಿಳಿಸುವದೇನಂದರೆ—ದೇವರ ಆತ್ಮದಿಂದ ಮಾತಾಡುವವನ್ಯಾವನಾ
೩ ದರೂ, ಯೇಸು ಶಾಪಗ್ರಸ್ತನೆಂದು, ಹೇಳನು; ಮತ್ತು [2]ಪರಿಶುದ್ಧಾತ್ಮದಿಂದಲ್ಲದೆ, ಯಾವನಾದರೂ, ಯೇಸು
ವನ್ನು ಕರ್ತನೆಂದು, ಹೇಳಲಾರನು.
೪,೫ ವರಗಳ ವ್ಯತ್ಯಾಸಗಳು ಉಂಟು; ಆದರೆ ಒಂದೇ ಆತ್ಮವು. [3]ಸೇವೆಗಳ ವ್ಯತ್ಯಾಸಗಳು ಉಂಟು; ಒಬ್ಬನೇ
೬ ಕರ್ತನು. ಯತ್ನಗಳ ವ್ಯತ್ಯಾಸಗಳು ಉಂಟು; ಆದರೆ ಎಲ್ಲರಲ್ಲಿ ಎಲ್ಲಾ ಯತ್ನೈಸುವವನು ಒಬ್ಬನೇ
ದೇವರು.
೭,೮ ಆದರೆ ಒಬ್ಬೊಬ್ಬನಿಗೆ ಆತ್ಮದ ಪ್ರಕಟಣೆಯು ಪ್ರಯೋಜನಕ್ಕಾಗಿ ಕೊಡಲ್ಪಟ್ಟದೆ. ಹ್ಯಾಗಂದರೆ, ಒಬ್ಬ
ನಿಗೆ ಆತ್ಮದ ಮುಖಾಂತರ [4]ಜ್ಞಾನದ ವಾಕ್ಯವು ಕೊಡಲ್ಪಟ್ಟದೆ; ಮತ್ತೊಬ್ಬನಿಗೆ ಅದೇ ಆತ್ಮದ ಪ್ರಕಾರ ತಿಳು
೯ ವಿಕೆಯ ವಾಕ್ಯವು. ಬೇರೊಬ್ಬನಿಗೆ ಅದೇ ಆತ್ಮದಿಂದ ವಿಶ್ವಾಸವು; ಮತ್ತೊಬ್ಬನಿಗೆ ಅದೇ ಆತ್ಮದಿಂದ ವಾಶಿ
೧೦ ಮಾಡುವ ವರಗಳು. ಮತ್ತೊಬ್ಬನಿಗೆ [5]ಬಲವಾದ ಕ್ರಿಯೆಗಳ ಯತ್ನಗಳು; ಮತ್ತೊಬ್ಬನಿಗೆ [6]ಪ್ರವಾದನೆಯು;
ಮತ್ತೊಬ್ಬನಿಗೆ [7]ಆತ್ಮಗಳ ವಿವೇಕಗಳು. ಬೇರೊಬ್ಬನಿಗೆ [8]ಭಾಷೆಗಳ ವಿಧಗಳು; ಮತ್ತೊಬ್ಬನಿಗೆ ಭಾಷೆಗಳ
೧೧ ವಿವರವು. ಆದರೆ ಇವುಗಳನ್ನೆಲ್ಲಾ ಅದೇ ಒಂದೇ ಆತ್ಮವು ತನ್ನ ಚಿತ್ತದ ಪ್ರಕಾರ ಒಬ್ಬೊಬ್ಬನಿಗೆ ಪ್ರತ್ಯೇಕ
ವಾಗಿ ಹಂಚಿ, ಯತ್ನೈಸುತ್ತದೆ.
೧೨ ಯಾಕಂದರೆ ಹ್ಯಾಗೆ ಶರೀರವು ಒಂದಾಗಿದ್ದು, ಅನೇಕ ಅಂಗಗಳುಳ್ಳದ್ದಾಗಿದೆಯೋ, ಮತ್ತು ಒಂದೇ ಶರೀರದ
೧೩ ಅಂಗಗಳೆಲ್ಲಾ ಅನೇಕವಾಗಿದ್ದು, ಒಂದೇ ಶರೀರವಾಗಿವೆಯೋ, ಹಾಗೆ [9]ಕ್ರಿಸ್ತನು ಸಹ. ಮತ್ತು ಯೆಹೂದ್ಯ

1. ಅವರು ಅಜ್ಞಾನಮಾರ್ಗದಲ್ಲಿರುವಾಗ ಮೂಕವಾದ ಬುದ್ಧಿ ಇಲ್ಲದ ವಿಗ್ರಹಗಳ ಭಕ್ತರು ಪ್ರೇರೇಪಿಸಿದ ಪ್ರಕಾರ, ಕಣ್ಣು ಮುಚ್ಚಿ ಕೊಂಡು ನಡೆದವರಾಗಿದ್ದದರಿಂದ ಅದ್ಭುತವರಗಳನ್ನು ಸರಿಯಾಗಿ ಪ್ರಯೋಗಿಸುವದಕ್ಕೆ ಅವರಿಗೆ ತಕ್ಕ ಬೋಧನೆ ಬೇಕಾಗಿತ್ತು. ಮೂಕ ವಿಗ್ರಹಗಳನ್ನು ಸೇವಿಸಿದವರು ನಾನಾ ಭಾಷೆಗಳನ್ನು ಮಾತಾಡ ತಕ್ಕ ಶ್ರೇಷ್ಠ ವರವನ್ನು ಹೊಂದುವಾಗ ಅದನ್ನು ಸರಿಯಾಗಿ ಪ್ರಯೋಗಿಸುವದಕ್ಕೆ ಅಧಿಕ ಜ್ಞಾನವು ಬೇಕಾಗಿತ್ತು.

2. ಯೇಸುವೇ ಕರ್ತನೆಂದು ಅರಿಕೆ ಮಾಡುವದು ಪರಿಶುದ್ಧಾತ್ಮನನ್ನು ಹೊಂದಿದ್ದಕ್ಕೆ ಗುರುತಾಗಿಯೂ, ಆತನನ್ನು ಬೊಂಕುವದು ಆ ಆತ್ಮನನ್ನು ಹೊಂದಲಿಲ್ಲವೆಂಬುವದಕ್ಕೆ ಗುರುತಾಗಿಯೂ ಇರುತ್ತದೆ. (ಯೋಹಾ. ೧೫. ೨೬, ೨೭; ೧೬. ೧೪, ೧೫. ೧ ಯೋಹಾ. ೪. ೧—೩. ವಚನಗಳ ವ್ಯಾಖ್ಯಾನಗಳಲ್ಲಿ ನೋಡ ಬೇಕು.) ಮೂಕ ವಿಗ್ರಹಗಳನ್ನು ಸೇವಿಸಿದ ಅಜ್ಞಾನರು ಯೇಸುವನ್ನು ಶಾಪಗ್ರಸ್ತನೆಂದು ಹೇಳಿದರು. ಪರಿಶುದ್ಧಾತ್ಮನ ವರವನ್ನು ಹೊಂದಿದ ಕ್ರೈಸ್ತರು ಯೇಸುವೇ ಕರ್ತನೆಂದು ಉತ್ತರ ಕೊಟ್ಟರು. ಹೀಗೆ ಅರಿಕೆ ಮಾಡುವ ವರವೇ ಬೇರೆ ವರಗಳಿಗಿಂತ ಶ್ರೇಷ್ಠವಾದದ್ದು.

3. ವರಗಳ ವ್ಯತ್ಯಾಸವಿದ್ದಾಗ್ಯೂ ಅವುಗಳನ್ನು ಅನುಗ್ರಹಿಸುವ ಆತ್ಮನು ಒಬ್ಬನೇ. (೪. ವ.) ಅವುಗಳನ್ನು ಹೊಂದಿ ಮತ್ತೊಬ್ಬರಿಗೆ ಕೊಡುವವರ ಸೇವೆಗಳಲ್ಲಿ ವ್ಯತ್ಯಾಸವಿದ್ದಾಗ್ಯೂ (೮—೧೦, ೨೮. ವ.) ಅವರೆಲ್ಲರು ಒಬ್ಬನೇ ಕರ್ತನನ್ನು ಸೇವಿಸುವವರು. (೬. ವ.) ಈ ವರಗಳನ್ನು ಹೊಂದಿದವರ ಕ್ರಿಯೆಗಳಲ್ಲಿ ವ್ಯತ್ಯಾಸವಿದ್ದಾಗ್ಯೂ, ಎಲ್ಲಾ ಕ್ರಿಯೆಗಳನ್ನೂ ಅದ್ಭುತವಾಗಿ ನಡಿಸುವ ದೇವರು ಒಬ್ಬನೇ. (ಯೋಹಾ. ೫. ೧೭.) ಸಭೆಯ ಭಕ್ತಿಯು ಅಭಿವೃದ್ಧಿಯಾಗುವದೇ ವರಗಳು ಕೊಡಲ್ಪಟ್ಟ ಗುರಿಯು. (೭. ವ.) ಆದದರಿಂದ ಅವುಗಳನ್ನು ಕ್ರಮಹೀನವಾಗಿ ಅಲ್ಲ, ಬಹಳ ಕ್ರಮವಾಗಿಯೂ ಐಕ್ಯವಾಗಿಯೂ ಉಪಯೋಗಿಸ ಬೇಕು. (ಎಫೆ. ೪. ೪—೭.)

4. ಜ್ಞಾನ, (೨. ೬.) ತಿಳುವಿಕೆ, (೧೩. ೨.) ವಿಶ್ವಾಸ, (೧೩. ೨.) ಈ ವರಗಳು ಹೊರಗೆ ಕಾಣಲ್ಪಡುವ ಅದ್ಭುತವರಗಳಿಗೆ ಗುರುತಾಗಿರುವ ಅಂತರ್ಯದ ವರಗಳು. ಈ ವಚನಗಳಲ್ಲಿ ಒಂಭತ್ತು ಬಗೆಯಾದ ವರಗಳನ್ನು ಕುರಿತು ಹೇಳಿ ಇದೆ. ೧. ಜ್ಞಾನದ ವಾಕ್ಯವು; ೨. ತಿಳುವಿಕೆಯನ್ನು ಕೊಡುವ ವಾಕ್ಯವು; ೩. ವಿಶ್ವಾಸವು; ೪. ವಾಶಿ ಮಾಡುವ ವರವು; ೫. ಅದ್ಭುತಗಳನ್ನು ಮಾಡುವ ಶಕ್ತಿ; ೬. ಪ್ರವಾದನೆಯ ವರವು; ೭. ಆತ್ಮಗಳನ್ನು ವಿವೇಚಿಸುವ ವರವು; ೮. ನಾನಾ ಭಾಷೆಗಳ ವರವು; ೯. ಭಾಷೆಗಳನ್ನು ವಿವರಿಸುವ ವರವು. (೧೪. ೨೭.) ಈ ವರಗಳೆಲ್ಲಾ ಒಬ್ಬನೇ ಆತ್ಮನಿಂದ ನಡಿಸಲ್ಪಡುತ್ತವೆಂದು ಹೇಳಿರುವದರಿಂದ, ಪರಿಶುದ್ಧಾತ್ಮನು ಸರ್ವಶಕ್ತಿಯೂ ಸರ್ವಜ್ಞಾನವೂ ಉಳ್ಳ ಸಾಕ್ಷಾತ್‌ದೇವರೆಂದು ನಿಶ್ಚಯವಾಗಿದೆ.

5. ಇದು ವಾಶಿ ಮಾಡುವ ವರವನ್ನು ವಿನಾಯಿಸಿ ಬೇರೆ ವರಗಳನ್ನು ಕುರಿತು ಹೇಳಿದ್ದು. (೯. ವ.)

6. ರೋಮಾ. ೧೨. ೬. ವಚನದ ವ್ಯಾಖ್ಯಾನ ನೋಡ ಬೇಕು.

7. ಇದು ಬೇರೊಬ್ಬರ ಮನಸ್ಸಿನಲ್ಲಿರುವ ರಹಸ್ಯಗಳನ್ನು ತಿಳಿಯ ತಕ್ಕ ಶಕ್ತಿಯು. (ಅಪೊ. ಕ್ರಿ. ೫. ೧—೧೦; ೧೩. ೯—೧೧.) ಇದು ಅಲ್ಲದೆ ಪರಿಶುದ್ಧಾತ್ಮನನ್ನು ಹೊಂದಿದವರು ಯಾರೆಂದೂ, ಅಶುದ್ಧಾತ್ಮವನ್ನು ಹೊಂದಿದವರು ಯಾರೆಂದೂ ವಿವೇಚಿಸುವ ವರವನ್ನು ಸೂಚಿಸುತ್ತದೆ.

8. ಅಪೊ. ಕ್ರಿ. ೨. ೪. ವಚನದ ವ್ಯಾಖ್ಯಾನ ನೋಡ ಬೇಕು.

9. ಮನುಷ್ಯನ ಶರೀರಕ್ಕೂ ಅದರ ಅವಯವಗಳಿಗೂ ಇರುವ ಸಮ್ಮಂಧದ ಪ್ರಕಾರ, ಜ್ಞಾನಾರ್ಥವಾದ ಕ್ರಿಸ್ತನ ಶರೀರವೆಂಬ ಸಭೆಗೂ ಅದರ ಅವಯವಗಳಾದ ಕ್ರೈಸ್ತರಿಗೂ ಬಹಳ ಸಮ್ಮಂಧ ಉಂಟು.



ರಾಗಲಿ, ಗ್ರೀಕರಾಗಲಿ, ದಾಸರಾಗಲಿ, ಸ್ವತಂತ್ರರಾಗಲಿ, ನಾವೆಲ್ಲರು [1]ಒಂದೇ ಆತ್ಮದಲ್ಲಿ ಒಂದೇ ಶರೀರ
ಕ್ಕಾಗಿ ಸ್ನಾನ ಹೊಂದಿದೆವು; ಮತ್ತು ಎಲ್ಲರು ಒಂದೇ ಆತ್ಮಕ್ಕಾಗಿ [2]ಕುಡಿಯ ಮಾಡಲ್ಪಟ್ಟೆವು.
೧೪,೧೫ ಯಾಕಂದರೆ ಶರೀರವು ಒಂದೇ ಅಂಗವಲ್ಲ, ಅನೇಕವಾಗಿದೆ. ಕಾಲು, ನಾನು ಕೈಯಲ್ಲ, ನಾನು ಶರೀ
೧೬ ರದ್ದಲ್ಲ, ಅಂದರೆ, ಅದರ ದೆಶೆಯಿಂದ ಶರೀರದ್ದಲ್ಲವೋ? ಮತ್ತು ಕಿವಿ, ನಾನು ಕಣ್ಣಲ್ಲ, ನಾನು ಶರೀರದ್ದಲ್ಲ,
೧೭ ಅಂದರೆ, ಅದರ ದೆಶೆಯಿಂದ ಶರೀರದ್ದಲ್ಲವೋ? ಶರೀರವೆಲ್ಲಾ ಕಣ್ಣಾದರೆ, ಕೇಳ್ವಿಕೆ ಎಲ್ಲಿ? ಎಲ್ಲಾ ಕೇಳ್ವಿಕೆ
೧೮ ಯಾದರೆ, ಮೂಸಿ ನೋಡುವಿಕೆ ಎಲ್ಲಿ? ಆದರೆ ಈಗ ದೇವರು ಅಂಗಗಳನ್ನು ಅವುಗಳಲ್ಲಿ ಒಂದೊಂದನ್ನು
೧೯ ಶರೀರದಲ್ಲಿ ತನ್ನ ಚಿತ್ತದ ಪ್ರಕಾರ ಇಟ್ಟಿದ್ದಾನೆ. ಮತ್ತು ಅವುಗಳೆಲ್ಲಾ ಒಂದೇ ಅಂಗವಾದರೆ, ಶರೀರವು ಎಲ್ಲಿ?
೨೦,೨೧ ಆದರೆ ಈಗ ಅಂಗಗಳು ಅನೇಕವು, ಶರೀರವು [3]ಒಂದೇ. ಕಣ್ಣು ಕೈಗೆ, ನೀನು ನನಗೆ ಅಗತ್ಯವಿಲ್ಲವೆಂದೂ,
೨೨ ತಲೆಯು ಕಾಲುಗಳಿಗೆ, ನೀವು ನನಗೆ ಅಗತ್ಯವಿಲ್ಲವೆಂದೂ, ಹೇಳ ಕೂಡದು. ಶರೀರದ ಅಂಗಗಳಲ್ಲಿ ಬಲ
೨೩ ಹೀನವಾಗಿ ಕಾಣಿಸುವವುಗಳು ಇನ್ನು ಬಹು ಅವಶ್ಯವಾಗಿವೆ. ಮತ್ತು ಶರೀರದಲ್ಲಿ ಯಾವವುಗಳಿಗೆ ಕಡಿಮೆ
ಮಾನವೆಂದು ನೆನಸುತ್ತೇವೋ, ಅವುಗಳಲ್ಲಿ [4]ಹೆಚ್ಚು ಮಾನವಿಡುತ್ತೇವೆ; ಮತ್ತು ನಮ್ಮ ಕುರೂಪವಾದವುಗ
೨೪,೨೫ ಳಿಗೆ ಹೆಚ್ಚಾದ ಸುರೂಪವು ಅದೆ. ನಮ್ಮ ಸುರೂಪವಾದವುಗಳಿಗೆ ಅಗತ್ಯವಿಲ್ಲ. ಆದರೆ ಶರೀರದಲ್ಲಿ
[5]ಭೇದವು ಇರದೆ, ಅಂಗಗಳು ಒಂದಕ್ಕೊಂದು ಒಂದೇ ಚಿಂತೆ ಪಡುವ ಹಾಗೆ, ದೇವರು ಕೊರತೆಯಾದದ್ದಕ್ಕೆ
೨೬ ಹೆಚ್ಚಾದ ಮಾನ ಕೊಟ್ಟು, ಶರೀರವನ್ನು ಸಂಕಲ್ಪಿಸಿದ್ದಾನೆ. ಇದಲ್ಲದೆ ಒಂದು ಅಂಗ ನೊಂದರೆ, ಎಲ್ಲಾ
ಅಂಗಗಳು ಕೂಡ ನೋಯುತ್ತವೆ; ಇಲ್ಲವೆ ಒಂದು ಅಂಗ ಮಹಿಮೆ ಪಟ್ಟರೆ, ಎಲ್ಲಾ ಅಂಗಗಳು ಕೂಡ
ಸಂತೋಷ ಪಡುತ್ತವೆ.
೨೭,೨೮ ಆದರೆ ನೀವು ಕ್ರಿಸ್ತನ ಶರೀರವಾಗಿಯೂ, [6]ಭಾಗವಾಗಿ ಅಂಗಗಳಾಗಿಯೂ ಇದ್ದೀರಿ. ಮತ್ತು ದೇ
ವರು ಕೆಲವರನ್ನು—ಮೊದಲನೇದು ಅಪೊಸ್ತಲರಾಗಿಯೂ, ಎರಡನೇದು ಪ್ರವಾದಿಗಳಾಗಿಯೂ, ಮೂರ
ನೇದು ಬೋಧಕರಾಗಿಯೂ—ಸಭೆಯಲ್ಲಿ ಇಟ್ಟಿದ್ದಾನೆ; ಆ ತರುವಾಯ ಬಲವಾದ ಕ್ರಿಯೆಗಳನ್ನು, ತರು
ವಾಯ ವಾಶಿ ಮಾಡುವ ವರಗಳನ್ನು, [7]ಸಹಾಯಗಳನ್ನು, ಯಜಮಾನತ್ವಗಳನ್ನು, [8]ಭಾಷೆಗಳ ವಿಧಗಳನ್ನು.

1. ಉತ್ತಮ ವಿಶ್ವಾಸದಿಂದ ಸ್ನಾನ ಹೊಂದುವವರು ನೀರಿನಲ್ಲಿ ಮಾತ್ರವಲ್ಲ, ಪರಿಶುದ್ಧಾತ್ಮನಲ್ಲಿಯೂ ಸ್ನಾನ ಹೊಂದುತ್ತಾರೆ. (ಅಪೊ. ಕ್ರಿ. ೧೧. ೧೫, ೧೬.)

2. ಇದು ಒಂದು ಉಪಮಾನದ ಮಾತು. ಇಲ್ಲದಿದ್ದರೆ ರಾತ್ರಿ ಭೋಜನದ ಔತಣದಲ್ಲಿ ಕೊಡಲ್ಪಡುವ ದ್ರಾಕ್ಷೇ ರಸವನ್ನು ಕುರಿತದ್ದಾಗಿರ ಬಹುದು. ವಿಶ್ವಾಸಿಗಳೆಲ್ಲರೂ ಒಂದೇ ಸ್ನಾನವನ್ನು ಹೊಂದುವದರಿಂದಲೂ, ಒಂದೇ ಪಾತ್ರೆಯಲ್ಲಿ ಕುಡಿಯುವದರಿಂದಲೂ, ಒಂದೇ ಶರೀರದ ಹಾಗೆ ಐಕ್ಯವಾಗಿರ ತಕ್ಕದ್ದು.

3. ೧೪—೧೯. ವರಿಗೂ ಇರುವ ವಚನಗಳಲ್ಲಿ ಶರೀರದ ನಾನಾ ಅಂಗಗಳನ್ನು ಸಭೆಯಲ್ಲಿರುವ ನಾನಾ ವರಗಳಿಗೆ ಉಪಮಾನಿಸಿ ತೋರಿಸಿ ಇದೆ. (೨೦—೨೭. ವ.) ಈ ವಚನಗಳಲ್ಲಿ ಶರೀರದ ಹೊಂದಿಕೆಯನ್ನೂ ಐಕ್ಯವನ್ನೂ ತೋರಿಸಿ, ನಾನಾ ವರಗಳನ್ನು ಹೊಂದಿದ ಸಭೆಯವರಲ್ಲಿ ಇರ ತಕ್ಕ ಐಕ್ಯವನ್ನು ದೃಷ್ಟಾಂತ ಪಡಿಸಿ ಇರುತ್ತದೆ.

4. ಹೆಚ್ಚು ಮಾನ ಕೊಡುತ್ತೇವೆಂಬುವದು, ವಸ್ತ್ರಾಭರಣಗಳ ಧರಿಸಿ ಕೊಳ್ಳುವದನ್ನು ಕುರಿತದ್ದು. ಕೈ, ಕಾಲು, ಕಣ್ಣು, ಕಿವಿ, ಇವು ಮುಖ್ಯ ಅಂಗಗಳು. ಬಲಹೀನವಾಗಿರುವ ಅಲ್ಪ ಅಂಗಗಳು ಬೇರೆ ಅಂಗಗಳ ಸುಖಕ್ಷೇಮಕ್ಕೆ ಬಹಳ ಅವಶ್ಯವಾದವುಗಳು. ಕಣ್ಣು, ಕಿವಿ, ಮುಖ ಮುಂತಾದ ಮುಖ್ಯ ಅಂಗಗಳಿಗೆ ವಸ್ತ್ರ ಧರಿಸುವದಿಲ್ಲ. ಬೇರೆ ಅಲ್ಪ ಅಂಗಗಳಿಗೆ ವಸ್ತ್ರ ಉಂಟು. ಇದನ್ನು ಯೋಚಿಸಿದರೆ, ದೇವರು ಅಲ್ಪ ವಿಶ್ವಾಸವುಳ್ಳ ತನ್ನ ದಾಸರಿಗೋಸ್ಕರ ಬಹಳ ಚಿಂತೆ ಪಡುತ್ತಾನೆಂದು ತಿಳಿಯ ಬೇಕು.

5. ಇದು ಯೋಚನೆಯಲ್ಲಿಯೂ ಗುರಿಯಲ್ಲಿಯೂ ಉಂಟಾಗುವ ಭೇದವನ್ನು ಕುರಿತದ್ದು. ೨೫, ೨೬ನೇ ವಚನಗಳಲ್ಲಿ ಶರೀರವನ್ನೂ ಸಭೆಯನ್ನೂ ಕುರಿತು ಹೇಳಿ ಇದೆ. ೨೭ನೇ ವಚನದಲ್ಲಿ ಸಭೆಯನ್ನು ಕುರಿತು ಮಾತ್ರ ಹೇಳಿ ಇದೆ. ಅಂಗಗಳನ್ನು ಕುರಿತು ಹೇಳುವದರಲ್ಲಿ ಚಿಂತೆ, ಕಷ್ಟ, ಸಂತೋಷ ಎಂಬ ಪದಗಳು ಪ್ರಯೋಗಿಸಲ್ಪಟ್ಟವೆ. ಒಂದು ಅಂಗಕ್ಕೆ ಉಂಟಾಗುವ ಚಿಂತೆ, ಕಷ್ಟ, ಸಂತೋಷ ಎಲ್ಲಾ ಅಂಗಗಳಿಗೂ ಉಂಟಾಗುತ್ತವೆ. ಕಾಲಿಗೆ ಮುಳ್ಳು ತಗಲಿದರೆ, ಶರೀರ ಕುಗ್ಗುವದು. ತಲೆಗೆ ಕಿರೀಟ ಬಂದರೆ, ಮುಖದಲ್ಲಿ ಸಂತೋಷ ತೋರುವದು, ಹೃದಯ ಉಲ್ಲಾಸ ಪಡುವದು. ಹೀಗೆಯೇ ಸಭೆಗೆ ಸಂಭವಿಸುವ ಸಂತೋಷದಲ್ಲಿಯೂ ದುಃಖದಲ್ಲಿಯೂ ಸಭೆಗೆ ಶೇರಿದವರೆಲ್ಲರೂ ಒಡಂಬಟ್ಟು ನಡಿಯ ಬೇಕು.

6. ನಿಜಕ್ರೈಸ್ತರೆಲ್ಲರೂ ಶೇರಿಕೆಯಾಗಿ ಕ್ರಿಸ್ತನ ಶರೀರವಾಗಿಯೂ, ಭಾಗ ಭಾಗವಾಗಿ ಆ ಶರೀರಕ್ಕೆ ಶೇರಿದ ಅಂಗಗಳಾಗಿಯೂ ಇದ್ದಾರೆ. ಒಂದು ಶರೀರದಲ್ಲಿ ಹಲವು ಅಂಗಗಳೂ, ಒಂದೊಂದು ಅಂಗಕ್ಕೂ ಅದರದರ ಕೆಲಸವೂ ಇರುವ ಪ್ರಕಾರ, ಸಭೆಯಲ್ಲಿ ಪರಿಶುದ್ಧಾತ್ಮನ ನಾನಾ ವರಗಳನ್ನು ಹೊಂದಿದವರು ನಾನಾ ಕೆಲಸ ಮಾಡುತ್ತಾರೆ. ಅವರ ವಿಷಯ ಮುಂದಿನ ವಚನದಲ್ಲಿ ಹೇಳಿ ಇದೆ.

7. ಇದು ಬಡವರಿಗೂ ರೋಗಿಷ್ಠರಿಗೂ ಮಾಡುವ ಊಳಿಗವನ್ನು ಕುರಿತದ್ದು.

8. ಕೊರಿಂಥದ ಸಭೆಯವರು ಬಹು ಘನವಾಗಿ ಎಣಿಸಿ ಹೆಚ್ಚಳಪಟ್ಟ ಭಾಷೆಗಳ ವರವನ್ನು ಕಡೇದಾಗಿ ತೋರಿಸುತ್ತಾನೆ. (ಅಪೊ. ಕ್ರಿ. ೨. ೪—೧೧.)

೨೯ ಎಲ್ಲರು ಅಪೊಸ್ತಲರೋ? ಎಲ್ಲರು ಪ್ರವಾದಿಗಳೋ? ಎಲ್ಲರು ಬೋಧಕರೋ? ಎಲ್ಲರು ಬಲವಾದ ಕ್ರಿಯೆಗ
೩೦ ಳನ್ನು ನಡಿಸುವವರೋ? ಎಲ್ಲರು ವಾಸಿ ಮಾಡುವ ವರಗಳುಳ್ಳವರೋ? ಎಲ್ಲರು [1]ಭಾಷೆಗಳಿಂದ ಮಾತಾ
೩೧ ಡುತ್ತಾರೋ? ಎಲ್ಲರು ವಿವರಿಸುತ್ತಾರೋ? [2]ಉತ್ತಮ ವರಗಳ ಮೇಲೆ ಆಸಕ್ತಿ ಪಡಿರಿ. ಮತ್ತು ಇನ್ನು
ಅತಿ ಶ್ರೇಷ್ಠ ಮಾರ್ಗವನ್ನು ನಿಮಗೆ ತೋರಿಸುತ್ತೇನೆ.

ಎಲ್ಲಾ ವರಗಳಲ್ಲಿಯೂ ಸದ್ಗುಣಗಳಲ್ಲಿಯೂ ಪ್ರೀತಿಯೇ ಮುಖ್ಯವಾದದ್ದು.

**13.** [3]ಮನುಷ್ಯರ ಭಾಷೆಗಳಲ್ಲಿಯೂ [4]ದೂತರ ಭಾಷೆಗಳಲ್ಲಿಯೂ ಮಾತಾಡಿದರೂ, ಪ್ರೀತಿ ಇಲ್ಲದವನಾದರೆ,
ಮತ್ತು ಪ್ರವಾದನೆಯುಳ್ಳವ
೨ ಧ್ವನಿಯಾಗುವ ಹಿತ್ತಾಳಿಯೂ, [5]ಘಣಘಣಿಸುವ ಕೈತಾಳವೂ ಆಗಿದ್ದೇನೆ.
ನಾಗಿಯೂ, ಎಲ್ಲಾ [6]ಮರ್ಮಗಳನ್ನೂ, ಎಲ್ಲಾ ತಿಳುವಿಕೆಯನ್ನೂ ಅರಿತವನಾಗಿಯೂ ಇದ್ದರೂ, ಬೆಟ್ಟಗ
ಳನ್ನು ಕಿತ್ತಿಡುವ ಹಾಗೆ ಎಲ್ಲಾ ವಿಶ್ವಾಸವುಳ್ಳವನಾಗಿದ್ದರೂ, ಪ್ರೀತಿ ಇಲ್ಲದವನಾದರೆ, ನಾನೇನೂ ಇಲ್ಲ.
೩ ಮತ್ತು ನನಗೆ ಉಂಟಾದದ್ದನ್ನೆಲ್ಲಾ [7]ಉಣ್ಣ ಕೊಟ್ಟರೂ, ನನ್ನ ಶರೀರವನ್ನು [8]ಸುಡುವದಕ್ಕೆ ಒಪ್ಪಿಸಿದರೂ,
ಪ್ರೀತಿ ಇಲ್ಲದವನಾದರೆ, ನನಗೇನೂ ಪ್ರಯೋಜನವಿಲ್ಲ.
೪ ಪ್ರೀತಿಯು ಬಹು ತಾಳ್ಮೆ ಪಡುವದು, ದಯ ಮಾಡುವದು; [9]ಪ್ರೀತಿಯು ಹೊಟ್ಟೆಕಿಚ್ಚು ಪಡದು;

1. ಹೀಗೆ ನಾನಾ ವರಗಳನ್ನು ಹೊಂದಿದವರಲ್ಲಿ ಹೊಟ್ಟೆಕಿಚ್ಚೂ ಗರ್ವವೂ ಉಂಟಾಗದ ಹಾಗೆ (೩೧. ವ.) ಪ್ರೀತಿಯಾಗಿಯೂ ಐಕ್ಯವಾಗಿಯೂ ನಡಿಯ ತಕ್ಕದ್ದು. (೧೩. ಸಂಧಿ.)

2. ಮುಖ್ಯವಾದ ವರಗಳಲ್ಲಿ ಭಕ್ತಿಯ ಅಭಿವೃದ್ಧಿಗೆ ಹೇತುವೆಯಾಗಿ ಸಭೆಯಲ್ಲಿ ಬೋಧನೆ ಮಾಡುವದು ಒಂದು ವರವಾಗಿದೆ. (೧೪. ೧—೫.) ಈ ವರಗಳನ್ನೆಲ್ಲಾ ಸರಿಯಾಗಿ ಪ್ರಯೋಗಿಸುವದಕ್ಕೆ ಒಂದು ಶ್ರೇಷ್ಠವಾದ ಮಾರ್ಗ ಉಂಟು. ಪ್ರೀತಿ ಎಂಬ ಆ ಮಾರ್ಗವನ್ನು ಕುರಿತು ೧೩ನೇ ಸಂಧಿಯಲ್ಲಿ ಬಹು ಚನ್ನಾಗಿ ಹೇಳಿ ಇದೆ.

3. ಈ ಸಂಧಿಯಲ್ಲಿ ಪ್ರೀತಿಯ ಶ್ರೇಷ್ಠತ್ವವನ್ನು ತೋರಿಸಿ ಇದೆ. ಸಕಲ ಸದ್ಗುಣಗಳಲ್ಲಿಯೂ ಪ್ರೀತಿಯೇ ಅತಿ ಶ್ರೇಷ್ಠವಾದದ್ದು. ಇದನ್ನು ವರ್ಣಿಸುವದಕ್ಕೆ ಯಾರಿಂದಲೂ ಆಗದು. ದೇವರು ಪ್ರೀತಿಯಾಗಿದ್ದಾನೆ. ಆತನ ಹೋಲಿಕೆಯಾಗಿ ಸೃಷ್ಟಿಸಲ್ಪಟ್ಟ ಮನುಷ್ಯರೆಲ್ಲರೂ ಆತನ ಹಾಗೆಯೇ ಪ್ರೀತಿಯುಳ್ಳವರಾಗಿ ನಡಿಯಬೇಕು. ಈ ಸಂಧಿ ಮೂರು ಭಾಗಗಳಾಗಿದೆ. ಮೊದಲನೇದು, ಪ್ರೀತಿಯ ಅವಶ್ಯ; (೧—೩. ವ.) ಎರಡನೇದು, ಪ್ರೀತಿಯ ಲಕ್ಷಣಗಳು; (೪—೭. ವ.) ಮೂರನೇದು, ಪ್ರೀತಿಯ ನಿತ್ಯವಾದ ಹೆಚ್ಚಳ. (೮—೧೩. ವ.)

4. ಭೂಲೋಕದ ಎಲ್ಲಾ ಭಾಷೆಗಳನ್ನು ಮಾತ್ರವಲ್ಲ, ಪರಲೋಕದ ಭಾಷೆಗಳನ್ನು ಸಹ ಮಾತನಾಡಿದಾಗ್ಯೂ, ಪ್ರೀತಿ ಇಲ್ಲದಿದ್ದರೆ, ಪ್ರಯೋಜನವೇನೂ ಇಲ್ಲ.

5. ಪ್ರೀತಿ ಇಲ್ಲದವರನ್ನು ಧ್ವನಿಯಾಗುವ ಹಿತ್ತಾಳಿಗೂ ಕಂಚಿಗೂ, ಘಣಘಣಿಸುವ ಕೈತಾಳಕ್ಕೂ ಉಪಮಾನಿಸಿ ಹೇಳಿ ಇದೆ. ಇಂಥವುಗಳಲ್ಲಿ ಬರೇ ನಾದವೇ ಹೊರ್ತು ಪ್ರಯೋಜನವಿಲ್ಲ. ಹಾಗೆಯೇ ಭಾಷೆಗಳನ್ನು ಮಾತಾಡುವ ಅದ್ಭುತವರಗಳನ್ನು ಹೊಂದಿದವರು ತಮ್ಮ ಮಾತಿನಿಂದಲೂ ಪ್ರಸಂಗದಿಂದಲೂ ಶಬ್ದ ಮಾಡಿದಾಗ್ಯೂ, ಪ್ರೀತಿ ಇಲ್ಲದಿದ್ದರೆ, ಆದೆಲ್ಲಾ ನಿಷ್ಪ್ರಯೋಜನವೇ.

6. ಇದು ದೇವರ ರಾಜ್ಯದ ರಹಸ್ಯಗಳನ್ನು ಕುರಿತು ಪ್ರವಾದಿಸುವಿಕೆಯನ್ನು ಕುರಿತದ್ದು. (ಮತ್ತಾ. ೧೩. ೧೧. ವಚನದ ವ್ಯಾಖ್ಯಾನ ನೋಡ ಬೇಕು.) ಈ ವಚನದಲ್ಲಿ ಹೇಳಲ್ಪಟ್ಟ ವಿಶ್ವಾಸವೂ, ೧೨. ೯ಲ್ಲಿ ಹೇಳಲ್ಪಟ್ಟ ವಿಶ್ವಾಸವೂ ಒಂದೇಯಾಗಿದೆ. ಪ್ರೀತಿ ಇಲ್ಲದವರಲ್ಲಿ ಸಹ ಇಂಥಾ ವಿಶ್ವಾಸವಿರ ಬಹುದು. (ಮತ್ತಾ. ೩. ೨೧—೨೩.) ವಿಶ್ವಾಸವಿದ್ದರೆ, ಬೆಟ್ಟಕ್ಕೆ ಸಮುದ್ರದಲ್ಲಿ ಬೀಳು ಅನ್ನುವಾಗ ಅದು ಬೀಳುವದೆಂದು ಕರ್ತನು ಹೇಳಿದನು. ಹೀಗೆ ಅದ್ಭುತಗಳನ್ನು ಮಾಡಿದವರಲ್ಲಿ ಸಹ ಪ್ರೀತಿ ಇಲ್ಲದೆ ಇರ ಬಹುದು.

7. ಅನ್ನದಾನವೇ ದೇವಭಕ್ತಿ ಎಂದು ಕೆಲವರು ನೆನಸುತ್ತಾರೆ. ಆದರೆ ಅದು ಧರ್ಮ ಅನ್ನಿಸಿ ಕೊಳ್ಳುವದೇ ಹೊರ್ತು ಪ್ರೀತಿ ಅಲ್ಲ. ಮತ್ತು ಪುಣ್ಯಾಭಿಲಾಷೆ, ಕೀರ್ತಿ ಮುಂತಾದವುಗಳಿಗೋಸ್ಕರ ಅನೇಕರು ಬಹಳ ದಾನಧರ್ಮ ಮಾಡಿದರೂ ಪ್ರೀತಿ ಇಲ್ಲದ್ದರಿಂದ ಅದೆಲ್ಲಾ ವ್ಯರ್ಥವೇ.

8. ದ್ರವ್ಯವನ್ನು ಮಾತ್ರವಲ್ಲ, ಪ್ರಾಣವನ್ನು ಸಹ ಕೊಟ್ಟಾಗ್ಯೂ, ಪ್ರೀತಿ ಇಲ್ಲದೆ ಇದ್ದರೆ, ಪ್ರಯೋಜನವಿಲ್ಲ. ದೇಶಾಭಿಮಾನ, ಮತಾಭಿಮಾನ, ಜಾತ್ಯಭಿಮಾನ ಉಳ್ಳವರಲ್ಲಿ ಕೆಲವರು ತಮ್ಮ ಪ್ರಾಣ ಕೊಟ್ಟದ್ದಾರೆ.

9. ಪ್ರೀತಿಯ ಅವಶ್ಯವನ್ನು ತೋರಿಸಿದ ಮೇಲೆ ಈ ವಚನಗಳಲ್ಲಿ ಅದರ ಅಂದವಾದ ಲಕ್ಷಣಗಳನ್ನು ಹೇಳಿ ಇದೆ. ಈ ಕೆಟ್ಟ ಲೋಕದಲ್ಲಿ ಪ್ರೀತಿಗೆ ಬಹಳ ಉಪದ್ರವಿದ್ದಾಗ್ಯೂ, ಅದನ್ನು ತಾಳ್ಮೆಯಿಂದ ಸಹಿಸಿ ಕೊಂಡು, ಪ್ರೀತಿಯ ರೂಪವಾದ ಕ್ರಿಸ್ತನ ಹಾಗೆ ದಯವಾಗಿರುತ್ತದೆ. ಅದಕ್ಕೆ ಹೊಟ್ಟೆಕಿಚ್ಚಿಲ್ಲ. (ಅಂಕೆ. ೧೧. ೨೬—೨೯. ಫಿಲಿ. ೧. ೧೮.) ಅದು ತನ್ನನ್ನು ಹೊಗಳಿ ಕೊಳ್ಳದು. ಮನುಷ್ಯರಿಗೆ ಸ್ವಾಭಾವಿಕವಾಗಿರುವ ತನ್ನನ್ನು ತಾನೇ ಮೆಚ್ಚಿಕೊಳ್ಳುವದೂ ವ್ಯರ್ಥ ಗರ್ವವೂ ಪ್ರೀತಿಗೆ ಇರಲಾರದು. (ಮತ್ತಾ. ೬. ಸಂಧಿ. ೨೩. ಸಂಧಿ.) ಅದು ಉಬ್ಬಿಕೊಳ್ಳದು. (ಕೀರ್ತ. ೧೩೧. ೧—೩.) ತಿಳುವಿಕೆಯು ಗರ್ವವನ್ನುಂಟು ಮಾಡುವದು. (೮. ೧—೩.) ಪ್ರೀತಿಯು ಗರ್ವವನ್ನು ಕೆಡಿಸಿ ದೀನತ್ವವನ್ನು ಉಂಟು ಮಾಡುವದು. ಅದು ಅಯೋಗ್ಯವಾದದ್ದನ್ನು ಮಾಡದು. ತನಗೂ ಮತ್ತೊಬ್ಬರಿಗೂ ವಿಹಿತವಾದದ್ದನ್ನು ಮಾಡುವದೇ ಹೊರ್ತು ಅವಿಹಿತವಾದದ್ದನ್ನು ಮಾಡಲಾರದು.



೫ ಪ್ರೀತಿಯು ಡಂಭ ಮಾಡದು, ಉಬ್ಬಿ ಕೊಳ್ಳದು, ಮರ್ಯಾದೆ ಮೀರದು, [1]ತನ್ನವುಗಳನ್ನು ಹುಡುಕದು,
೬ ಶಿಟ್ಟು ಮಾಡದು, [2]ಕೆಟ್ಟದ್ದನ್ನು ನೆನಸದು. ಅನ್ಯಾಯಕ್ಕೆ ಸಂತೋಷ ಪಡದು, ಆದರೆ [3]ಸತ್ಯದಲ್ಲಿ ಸಂತೋಷ
೭ ಪಡುವದು; [4]ಎಲ್ಲಾ ಮುಚ್ಚುವದು, ಎಲ್ಲಾ ವಿಶ್ವಾಸಿಸುವದು, ಎಲ್ಲಾ ನಿರೀಕ್ಷಿಸುವದು, ಎಲ್ಲಾ ಸಹಿಸು
ವದು.
೮ ಪ್ರೀತಿಯು ಎಂದಿಗೂ ಬಿದ್ದು ಹೋಗದು. ಆದರೆ ಪ್ರವಾದನೆಗಳಾಗಲಿ, [5]ತೆಗೆದು ಹಾಕಲ್ಪಡುವವು;
೯ ಭಾಷೆಗಳಾಗಲಿ, ತೀರುವವು; [6]ತಿಳುವಿಕೆಯಾಗಲಿ, ತೆಗೆದು ಹಾಕಲ್ಪಡುವದು. ಯಾಕಂದರೆ ಭಾಗವಾಗಿ
೧೦ ತಿಳಿಯುತ್ತೇವೆ, ಮತ್ತು ಭಾಗವಾಗಿ ಪ್ರವಾದಿಸುತ್ತೇವೆ; ಆದರೆ ಸಂಪೂರ್ಣವಾದದ್ದು ಬಂದಾಗಲೇ, ಭಾಗ
೧೧ ವಾದದ್ದು ತೆಗೆದು ಹಾಕಲ್ಪಡುವದು. ಬಾಲಕನಾಗಿರುವಾಗ, ಬಾಲಕನ ಹಾಗೆ ಮಾತಾಡಿದೆನು, ಬಾಲ
ಕನ ಹಾಗೆ ನೆನಸಿದೆನು, ಬಾಲಕನ ಹಾಗೆ ಆಲೋಚಿಸಿದೆನು; ಆದರೆ ಪುರುಷನಾದಾಗ, ಬಾಲಕನವುಗಳನ್ನು
೧೨ ತೆಗೆದು ಹಾಕಿದೆನು. ಯಾಕಂದರೆ ಈಗ [7]ಕನ್ನಡಿಯಿಂದ ಒಗಟಾಗಿ ನೋಡುತ್ತೇವೆ, ಆಗ ಮುಖಾಮುಖಿ
ಯಾಗಿ; ಈಗ ಭಾಗವಾಗಿ ತಿಳಿಯುತ್ತೇನೆ, ಆಗ ತಿಳಿಯಲ್ಪಟ್ಟ ಹಾಗೆ ತಿಳಿಯುವೆನು.
೧೩ ಈಗಾದರೆ, [8]ವಿಶ್ವಾಸವೂ, ನಿರೀಕ್ಷೆಯೂ, ಪ್ರೀತಿಯೂ, ಈ ಮೂರು ಇರುತ್ತವೆ; ಇವುಗಳಲ್ಲಿ ದೊಡ್ಡದು
[9]ಪ್ರೀತಿಯೇ.

1. ಪ್ರೀತಿಯು ಬೇರೊಬ್ಬರ ಮೇಲನ್ನು ಹುಡುಕಿ ನಡಿಯುವದೇ ಹೊರ್ತು, ಸ್ವಪ್ರಯೋಜನವನ್ನು ಹುಡುಕದು. (ಫಿಲಿ. ೨. ೨೧. ೨ಕೊರಿ. ೫. ೧೪, ೧೫.)

2. ಪ್ರೀತಿಯು ಶಿಟ್ಟು ಮಾಡದು, ಕೇಡನ್ನು ಸಹ ನೆನಸದು. ಕೇಡು ತುಂಬಿದ ಈ ಲೋಕದಲ್ಲಿ ಬೇರೊಬ್ಬರಲ್ಲಿ ಆಗಾಗ್ಯೆ ಕಾಣುವ ಕೇಡನ್ನು ಅದು ನೆನಸದೆ ಮರೆತು ಬಿಡುವದು. (ರೋಮಾ. ೪. ೬—೮. ೨ಕೊರಿ. ೫. ೧೯.)

3. ಪಾಪದಿಂದ ಕೆಟ್ಟು ಹೋದ ಈ ಲೋಕದಲ್ಲಿ ಅನ್ಯಾಯವೂ ಸತ್ಯವೂ ಒಂದನ್ನೊಂದು ಜಯಿಸುವ ಹಾಗೆ ಯಾವಾಗಲೂ ಹೋರಾಡುತ್ತವೆ. ಪ್ರೀತಿಯು ಅನ್ಯಾಯಕ್ಕೆ ಜಯಪ್ರದವಾದಾಗ ಸಂತೋಷ ಪಡದೆ, ಸತ್ಯಕ್ಕೆ ಜಯಪ್ರದವಾಗುವಾಗ ಸಂತೋಷ ಪಡುವದು.

4. ಎಲ್ಲಾ ಅಂದರೆ, ಸತ್ಯಕ್ಕೂ ಮನಸ್ಸಾಕ್ಷಿಗೂ ಹೊಂದಿಕೆಯಾದ ಎಲ್ಲವುಗಳನ್ನು ಎಂದು ತಾತ್ಪರ್ಯವು. ಪ್ರೀತಿಯು ಪಾಪಗಳ ಸಮೂಹವನ್ನು ಅಡಗಿಸುವದು. (೧ಪೇತ್ರ. ೪. ೮.) ಎಂದು ಪೇತ್ರನು ಹೇಳುವ ಪ್ರಕಾರ ಎಲ್ಲವನ್ನು ಮುಚ್ಚುವದೆಂದು ಅರ್ಥ ಮಾಡುತ್ತಾರೆ. ಪ್ರೀತಿ ಇಲ್ಲದ ಗುಣ, ಮಾತು, ನಡತೆ ಎಲ್ಲವುಗಳನ್ನು ಪ್ರೀತಿಯು ಮುಚ್ಚುವದು, ಅಥವಾ ಸಹಿಸಿ ಕೊಳ್ಳುವದು. ಪ್ರೀತಿಯು ಎಲ್ಲಾ ವಿಶ್ವಾಸಿಸುವದು, ಅಂದರೆ, ಎಲ್ಲರೂ ಯಥಾರ್ಥವಂತರೆಂದೂ, ಅವರು ಹೇಳುವದೆಲ್ಲಾ ಯಥಾರ್ಥವೆಂದೂ ವಿಶ್ವಾಸಿಸುವದು. ಹೀಗೆ ವಿಶ್ವಾಸಿಸ ಕೂಡದ ಪಕ್ಷದಲ್ಲಿ ಎಲ್ಲಾ ತಕ್ಕ ಕಾಲದಲ್ಲಿ ನೆಟ್ಟಗಾಗುವದೆಂದು ವಿಶ್ವಾಸಿಸುವದು. ಹಾಗೆ ನಂಬ ಕೂಡದ ಪಕ್ಷಕ್ಕೆ ಎಲ್ಲವನ್ನು ಸಹಿಸಿ ಕೊಳ್ಳುವದು.

5. ದೇವರ ಮರ್ಮಗಳನ್ನು ಕುರಿತ ಪ್ರವಾದನೆಗಳು ನಿಂತು ಹೋಗುವವು. ಮೋಕ್ಷದಲ್ಲಿ ಸಮಸ್ತವೂ ಪ್ರತ್ಯಕ್ಷ ನೋಟವಾಗಿರುವದು. ಆದದರಿಂದ ರಹಸ್ಯ ಕಾರ್ಯಗಳಿಗೂ ಅವುಗಳನ್ನು ಕುರಿತ ಪ್ರವಾದನೆಗಳಿಗೂ ಸ್ಥಳವಿಲ್ಲ.

6. ಮೋಕ್ಷದಲ್ಲಿ ಪ್ರವಾದನೆ ಅವಶ್ಯವಿಲ್ಲದಿರುವ ಪ್ರಕಾರ ಭಾಷೆಗಳೂ ತಿಳುವಿಕೆಯೂ ಅವಶ್ಯವಾಗಿರುವದಿಲ್ಲ. ಪರಮಸಭೆಯಲ್ಲಿ ರಕ್ಷಕನ ಸ್ತೋತ್ರಗೀತವಾದ ಒಂದೇ ಭಾಷೆಯೇ ಹೊರ್ತು, ಹಲವು ಭಾಷೆಗಳಿರಲಾರವು. ಆದದರಿಂದ ಇವೆಲ್ಲಾ ನಾಶವಾಗುವವು. ಈಗ ನಮ್ಮ ತಿಳುವಿಕೆ ಕೂಸುಗಳ ತಿಳುವಿಕೆಯ ಹಾಗೆ ಕೊರತೆಯುಳ್ಳದ್ದು. ದೈವಿಕವಾದ ಸತ್ಯಗಳನ್ನು ಕನ್ನಡಿಯಿಂದ ನೋಡುವ ಹಾಗೆ ಮಂದವಾಗಿ ನೋಡುತ್ತೇವೆ, ಮುಖಾಮುಖಿಯಾಗಿ ಪ್ರತ್ಯಕ್ಷವಾಗಿ ನೋಡುವದಿಲ್ಲ, (೧೨. ವ.) ಪರಲೋಕದಲ್ಲಿ ಪ್ರತ್ಯಕ್ಷವಾಗಿ ನೋಡುವೆವು.

7. ಕನ್ನಡಿ ಅಂದರೆ ಒಂದು ವಿಧ ಸ್ಫಟಿಕದ ಕನ್ನಡಿ. (ಯಾಕೋಬ. ೧. ೨೩.) ಪೂರ್ವಕಾಲದಲ್ಲಿ ಶುದ್ಧ ಕಂಚಿನಿಂದ ಕನ್ನಡಿಯನ್ನು ಮಾಡುವರು. (ಹೊರ. ೩೮. ೮. ಯೋಬ. ೩೭. ೧೮.) ಈಗ ಸೃಷ್ಟಿ, ವೇದಗ್ರಂಥ, ಸಭೆ ಎಂಬ ಕನ್ನಡಿಯಿಂದ ನೋಡುತ್ತೇವೆ. ತರುವಾಯ ಮುಖಾಮುಖಿಯಾಗಿ ಪ್ರತ್ಯಕ್ಷವಾಗಿ ನೋಡುವೆವು. (ಪ್ರಕಟ. ೨೨. ೪.)

8. ತಿಳುವಿಕೆ, ಪ್ರವಾದನೆ, ಭಾಷೆಗಳ ವರಗಳು ನಿಂತು ಹೋದಾಗ್ಯೂ, ವಿಶ್ವಾಸ, ಕೋರಿಕೆ, ಪ್ರೀತಿ ಎಂಬ ಶ್ರೇಷ್ಠ ಗುಣಗಳು ನಾಶವಾಗದೆ ಎಂದೆಂದಿಗೂ ನೆಲೆಯಾಗಿರುವವು.

9. ವಿಶ್ವಾಸಕ್ಕೂ ಕೋರಿಕೆಗೂ ಪ್ರೀತಿಯೇ ಆಸ್ಪದವಾಗಿರುವದರಿಂದ ಅದೇ ದೊಡ್ಡದು. ಪ್ರೀತಿಯು ಮನುಷ್ಯನನ್ನು ದೇವರ ಹೋಲಿಕೆಗೆ ಸಮವಾಗ ಮಾಡುತ್ತದೆ. (೧ಯೋಹಾ. ೪. ೭—೧೯.) ಒಬ್ಬನ ವಿಶ್ವಾಸದಿಂದಲೂ, ಕೋರಿಕೆಯಿಂದಲೂ ಉಂಟಾಗುವ ಫಲವು ಅವನಿಗೆ ಮಾತ್ರ ಶೇರುತ್ತದೆ. ಪ್ರೀತಿಯಿಂದ ಉಂಟಾಗುವ ಮೇಲುಗಳು ಪರರಿಗೂ ಸಲ್ಲುವವು. ಆದದರಿಂದ ಈ ಮೂರು ವರಗಳಲ್ಲಿ ಪ್ರೀತಿಯೇ ಶ್ರೇಷ್ಠವಾದದ್ದು. ಕ್ರೈಸ್ತರೆಲ್ಲರೂ ಪ್ರೀತಿಯುಳ್ಳವರಾದರೆ, ಎಷ್ಟೋ ಭಾಗ್ಯವಾಗಿರುವದು.

ಪ್ರವಾದನೆಯ ವರವು ಭಾಷೆಗಳ ವರಕ್ಕಿಂತ ಶ್ರೇಷ್ಠವಾದದ್ದು. ಇಂಥಾ ಆತ್ಮನ ವರಗಳನ್ನು ಸಭೆಯಲ್ಲಿ ಉಪಯೋಗಿಸ ತಕ್ಕ ವಿಧವು.

14. ಪ್ರೀತಿಯನ್ನು ಹಿಂದಟ್ಟಿರಿ; ಆದರೆ, ವಿಶೇಷವಾಗಿ [1]ಪ್ರವಾದಿಸುವ ಹಾಗೆ, ಆತ್ಮದವುಗಳಿಗೆ ಆಸಕ್ತಿ ಪಡಿರಿ.
೨ ಯಾಕಂದರೆ ಭಾಷೆಯಲ್ಲಿ ಮಾತಾಡುವವನು ಮನುಷ್ಯರಿಗಲ್ಲ, ದೇವರಿಗೆ ಮಾತಾಡುತ್ತಾನೆ. ಹ್ಯಾಗಂದರೆ
೩ [2]ಯಾವನೂ ಕೇಳುವದಿಲ್ಲ, ಆದರೆ ಇವನು ಆತ್ಮದಲ್ಲಿ ಮರ್ಮಗಳನ್ನು ಮಾತಾಡುತ್ತಾನೆ. ಆದರೆ ಪ್ರವಾ
೪ ದಿಸುವವನು ಮನುಷ್ಯರ ಆತ್ಮವೃದ್ಧಿಗೂ, ಬುದ್ಧಿಗೂ, ಆದರಣೆಗೂ ಮಾತಾಡುತ್ತಾನೆ. ಭಾಷೆಯಲ್ಲಿ ಮಾ
ತಾಡುವವನು ತನಗೆ ಆತ್ಮವೃದ್ಧಿ ಮಾಡಿ ಕೊಳ್ಳುತ್ತಾನೆ; ಪ್ರವಾದಿಸುವವನು ಸಭೆಗೆ ಆತ್ಮವೃದ್ಧಿ ಮಾಡುತ್ತಾನೆ.
೫ ನೀವೆಲ್ಲರು ಭಾಷೆಗಳಲ್ಲಿ ಮಾತಾಡ ಬೇಕೆಂದು, ವಿಶೇಷವಾಗಿ ಪ್ರವಾದಿಸ ಬೇಕೆಂದು, ಇಚ್ಛೈಸುತ್ತೇನೆ.
ಯಾಕಂದರೆ ಸಭೆಯು ಆತ್ಮವೃದ್ಧಿಯನ್ನು ಹೊಂದುವ ಹಾಗೆ ಅವನು ವಿವರಿಸಿದರೆ ಹೊರ್ತು, ಭಾಷೆಗಳಲ್ಲಿ
೬ ಮಾತಾಡುವವನಿಗಿಂತ [3]ಪ್ರವಾದಿಸುವವನು ದೊಡ್ಡವನು. ಈಗ, ಸಹೋದರರೇ, ಭಾಷೆಗಳಲ್ಲಿ ಮಾತಾ
ಡುತ್ತಾ ನಿಮ್ಮ ಬಳಿಗೆ ಬಂದರೆ, ಪ್ರಕಟಣೆಯಿಂದಲಾದರೂ, ತಿಳುವಿಕೆಯಿಂದಲಾದರೂ, ಪ್ರವಾದನೆಯಿಂದಲಾ
ದರೂ, [4]ಬೋಧನೆಯಿಂದಲಾದರೂ, ನಿಮ್ಮ ಸಂಗಡ ಮಾತಾಡಿದರೆ ಹೊರ್ತು, ನಿಮಗೆ ಪ್ರಯೋಜನವೇನು?
೭ ಅದೇ ಪ್ರಕಾರ ಶಬ್ದ ಕೊಡುವ ನಿರ್ಜೀವವಾದವುಗಳು, ಪಿಳ್ಳಂಗೋವಿಯಾಗಲಿ, ವೀಣೆಯಾಗಲಿ, ಸ್ವರಗ
೮ ಳಲ್ಲಿ ಭೇದ ಮಾಡದಿದ್ದರೆ, [5]ಊದಿದ್ದಾದರೂ ಮಿಾಟಿದ್ದಾದರೂ ತಿಳಿಯುವದು ಹ್ಯಾಗೆ? ಮತ್ತು ತುತೂ
೯ ರಿಯು [6]ಗೊತ್ತಿಲ್ಲದ ಶಬ್ದ ಕೊಟ್ಟರೆ, ಯುದ್ಧಕ್ಕೆ ಯಾವನು ಸಿದ್ಧ ಮಾಡಿ ಕೊಳ್ಳುವನು? ಹಾಗೆಯೇ
ನೀವು ನಾಲಿಗೆಯಿಂದ ಅರ್ಥವುಳ್ಳ ಮಾತು ನುಡಿದರೆ ಹೊರ್ತು, ಮಾತಾಡಿದ್ದು ತಿಳಿಯುವದು ಹ್ಯಾಗೆ?
೧೦ ಯಾಕಂದರೆ ಘಾಳಿಗೆ ಮಾತಾಡುತ್ತಾ ಇರುವಿರಿ. ಲೋಕದಲ್ಲಿ ಅಷ್ಟು ಶಬ್ದವಿಧಗಳು ಇದ್ದೀತು; ಮತ್ತು
೧೧ ಅವುಗಳಲ್ಲಿ ಗೊತ್ತಿಲ್ಲದ್ದು ಒಂದೂ ಇಲ್ಲ. ಆದ ಕಾರಣ ಶಬ್ದದ ಅರ್ಥವು ತಿಳಿಯದಿದ್ದರೆ, ಮಾತಾಡುವವ
ನಿಗೆ ನಾನು [7]ಬರ್ಬರನಾಗಿರುವೆನು; ಮತ್ತು ಮಾತಾಡುವವನು ನನಗೆ ಬರ್ಬರನಾಗಿರುವನು.

1. ಓಟರಂಗದಲ್ಲಿ ಓಡುವವರು ಒಂದು ಗುರಿ ಇಟ್ಟು ಕೊಂಡು ಓಡುವ ಪ್ರಕಾರ ಕ್ರೈಸ್ತರು ಪ್ರೀತಿಯನ್ನು ಗುರಿ ಇಟ್ಟು ನಡಿಯ ಬೇಕು. ಬೇರೆ ಎಲ್ಲಾ ವರಗಳಿಗಿಂತ ವಿಶೇಷವಾಗಿ ಪ್ರವಾದನೆಯ ವರವನ್ನು ಅಪೇಕ್ಷಿಸ ಬೇಕು. ಪ್ರವಾದನೆ ಅಂದರೆ, ದಿವ್ಯ ಸತ್ಯಗಳನ್ನು ಬೇರೊಬ್ಬರಿಗೆ ಪ್ರಸಂಗಿಸಿ, ಅವರಿಗೆ ತಿಳುವಿಕೆಯನ್ನು ಉಂಟು ಮಾಡುವ ವರವು. ಭಾಷೆಗಳ ವರಕ್ಕಿಂತ ಇದು ಸಭೆಯ ಭಕ್ತಿ ಅಭಿವೃದ್ಧಿಯಾಗುವದಕ್ಕೆ ಅನುಕೂಲವಾಗಿರುತ್ತದೆ. (೨—೫. ೨೨—೨೫. ವ.)

2. ಭಾಷೆಯಲ್ಲಿ ಮಾತಾಡುವದು ಅಂದರೆ, ಒಬ್ಬನು ತಾನು ಎಂದಿಗೂ ಕಲಿಯದೆ ಇದ್ದ ಭಾಷೆಯಲ್ಲಿ ಮಾತಾಡುವ ವರವನ್ನು ಕುರಿತದ್ದು. ಆ ಕಾಲದಲ್ಲಿ ಕ್ರಿಸ್ತಮಾರ್ಗದ ಪ್ರಬಲಕ್ಕೆ ಹೇತುವೆಯಾಗಿ ದೇವರು ಈ ವರವನ್ನು ಅನುಗ್ರಹಿಸಿದನು. (ಅಪೊ. ಕ್ರಿ. ೨. ೪.) ಇದು ಬಾಯಿಗೆ ಬಂದ ಹಾಗೆ ಹರಟುವದಲ್ಲ. ಮಾತಾಡುವವನು ತನ್ನ ಭಕ್ತಿ ವೃದ್ಧಿಯಾಗುವಂತೆ ಮಾತಾಡುವನು. (೪, ೧೭, ೨೮. ವ.) ಆದರೆ ಮತ್ತೊಬ್ಬರಿಗೆ ಅದು ತಿಳಿಯಲಾರದು. ಪರಿಶುದ್ಧಾತ್ಮನ ವರದಿಂದ ಅವನು ದೇವರ ಮರ್ಮಗಳನ್ನು ಹೇಳಿದರೂ, ದೇವರಿಗೆ ತಿಳಿಯುವದೇ ಹೊರ್ತು, ಆತ್ಮನ ವರವಿಲ್ಲದ ಮನುಷ್ಯರಿಗೆ ತಿಳಿಯದು. ಅದರಿಂದ ಮತ್ತೊಬ್ಬರಿಗೆ ಪ್ರಯೋಜನವಿಲ್ಲ.

3. ಪ್ರವಾದಿಸುವವನು ಮತ್ತೊಬ್ಬರಿಗೆ ಆತ್ಮವೃದ್ಧಿ ಮಾಡುವದರಿಂದ ಅವನೇ ದೊಡ್ಡವನು. (ಮತ್ತಾ. ೨೦. ೨೬.) ವಿಶ್ವಾಸ, ಕೋರಿಕೆ, ಪ್ರೀತಿ ಎಂಬವುಗಳಲ್ಲಿ ಪ್ರೀತಿಯು ಹ್ಯಾಗೆ ದೊಡ್ಡದೋ ಹಾಗೆಯೇ ಭಾಷೆಗಳ ವರವು ಪ್ರವಾದನೆಯ ವರವು ಈ ಎರಡರಲ್ಲಿ ಪ್ರವಾದನೆಯ ವರವೇ ಶ್ರೇಷ್ಠವಾದದ್ದು.

4. ಇದು ಅವರಿಗೆ ತಿಳಿದ ಭಾಷೆಯಲ್ಲಿ ಪ್ರವಾದಿಯ ಹಾಗೆ ಮರ್ಮಗಳನ್ನು ಪ್ರಕಟಿಸಿ, ಬೋಧನೆಯಿಂದ ಅವರ ತಿಳುವಿಕೆಯನ್ನು ಹೆಚ್ಚಿಸುವದಕ್ಕೆ ಪೌಲನು ಮಾಡಿದ ಪ್ರಯತ್ನವು.

5. ಗ್ರೇಕ ದೇಶದಲ್ಲಿ ಪಿಳ್ಳಂಗೋವಿ, ವೀಣೆ ಬಳಿಕೆಯಾದ ವಾದ್ಯಗಳು. ಇವುಗಳಲ್ಲಿ ಬಾರಿಸುವ ರಾಗ ಕೇಳುವವರಿಗೆ ತಿಳಿಯದಿದ್ದರೆ, ಪ್ರಯೋಜನವೇನು? ಹಾಗೆಯೇ ಜನರಿಗೆ ತಿಳಿಯದ ಭಾಷೆಯಲ್ಲಿ ಮಾತಾಡುವದು ಪ್ರಯೋಜನವಿಲ್ಲ.

6. ಯುದ್ಧಕ್ಕೆ ಸಿದ್ಧ ಪಡಿಸ ಊದುವ ತುತೂರಿ ಎಲ್ಲರಿಗೂ ಗೊತ್ತಾಗ ಬೇಕು. (ಅಂಕೆ. ೧೦. ೧—೯.) ಇಲ್ಲದಿದ್ದರೆ ಯಾರೂ ಯುದ್ಧಕ್ಕೆ ಆಯತ್ತವಾಗಲಾರರು. ಹಾಗೆಯೇ ತಿಳಿಯದ ಭಾಷೆಯಲ್ಲಿ ಮಾತಾಡಿದರೆ, ಯಾರಿಗೂ ಪ್ರಯೋಜನವಾಗದು.

7. ಲೋಕದಲ್ಲಿ ಅನೇಕ ಭಾಷೆಗಳುಂಟು. ಅವುಗಳಲ್ಲಿ ಅರ್ಥವಿಲ್ಲದ ಮಾತು ಒಂದೂ ಇಲ್ಲ. ಆದರೂ ಒಬ್ಬನಿಗೆ ತಿಳಿಯದ ಭಾಷೆ ಮಾತಾಡುವವನು ಕೇಳುವವನಿಗೆ ಅನ್ಯನಾಗಿಯೂ ಇವನು ಅವನಿಗೆ ಅನ್ಯನಾಗಿಯೂ ಇರುವನು.



೧೨ ಹೀಗೆಯೇ ನೀವು [1]ಆತ್ಮದವುಗಳಿಗೆ ಆಸಕ್ತಿಯುಳ್ಳವರಾಗಿರುವದರಿಂದ ಸಭೆಯ ಆತ್ಮವೃದ್ಧಿಗೋಸ್ಕರ ಹೆಚ್ಚುವ
೧೩ ಹಾಗೆ ಹುಡುಕಿರಿ. ಆದ ಕಾರಣ ಭಾಷೆಯಲ್ಲಿ ಮಾತಾಡುವವನು ವಿವರಿಸುವ ಹಾಗೆ ಪ್ರಾರ್ಥಿಸಲಿ.
೧೪ ಯಾಕಂದರೆ ಭಾಷೆಯಲ್ಲಿ ಪ್ರಾರ್ಥಿಸಿದರೆ, [2]ನನ್ನ ಆತ್ಮವು ಪ್ರಾರ್ಥಿಸುತ್ತದೆ, ಆದರೆ ನನ್ನ ಬುದ್ಧಿಯು ನಿಷ್ಫಲವಾಗಿದೆ.
೧೫ ಹಾಗಾದರೇನು? ಆತ್ಮದಿಂದ ಪ್ರಾರ್ಥಿಸುವೆನು, ಬುದ್ಧಿಯಿಂದಲೂ ಪ್ರಾರ್ಥಿಸುವೆನು; ಆತ್ಮದಿಂದ ಹಾಡುವೆನು,
೧೬ ಬುದ್ಧಿಯಿಂದಲೂ ಹಾಡುವೆನು. ಇಲ್ಲದಿದ್ದರೆ, ನೀನು ಆತ್ಮದಿಂದ [3]ಆಶೀರ್ವದಿಸಿದರೆ, ಕಲಿಯದವನ ಸ್ಥಳ
ದಲ್ಲಿ ಇರುವವನು ನೀನು ಹೇಳುವದನ್ನು ಅರಿಯದವನಾಗಿ, ನೀನು ಮಾಡುವ ಸ್ತೋತ್ರಕ್ಕೆ ಆಮೆನ್ ಎಂದು
೧೭ ಹೇಳುವದು ಹ್ಯಾಗೆ? ಯಾಕಂದರೆ ನೀನು ಚನ್ನಾಗಿ ಸ್ತೋತ್ರ ಮಾಡುತ್ತೀ; ಆದರೆ ಬೇರೊಬ್ಬನು ಆತ್ಮ
೧೮ ವೃದ್ಧಿ ಹೊಂದುವದಿಲ್ಲ. ನಿಮ್ಮೆಲ್ಲರಿಗಿಂತ ಹೆಚ್ಚಾಗಿ ಭಾಷೆಗಳಲ್ಲಿ ಮಾತಾಡುತ್ತೇನೆಂದು ನನ್ನ ದೇವರನ್ನು
೧೯ [4]ಸ್ತುತಿಸುತ್ತೇನೆ. ಆದಾಗ್ಯೂ [5]ಸಭೆಯಲ್ಲಿ ಭಾಷೆಯಿಂದ ಸಾವಿರಾರು ಮಾತುಗಳನ್ನು ಆಡುವದಕ್ಕಿಂತ,
ಮತ್ತೊಬ್ಬರನ್ನು ಸಹ ಉಪದೇಶಿಸುವ ಹಾಗೆ, ನನ್ನ ಬುದ್ಧಿಯಿಂದ ಐದು ಮಾತುಗಳನ್ನು ಆಡ ಇಚ್ಛೈಸು
ತ್ತೇನೆ.
೨೦ ಸಹೋದರರೇ, ಮತಿಯಲ್ಲಿ [6]ಬಾಲಕರಾಗದೆ, [7]ಕೆಟ್ಟತನದಲ್ಲಿ ಕೂಸುಗಳಾಗಿರಿ; ಆದರೆ ಮತಿಯಲ್ಲಿ ಸಂಪೂ
೨೧ ರ್ಣರಾಗಿರಿ. [8]ನ್ಯಾಯಪ್ರಮಾಣದಲ್ಲಿ ಬರೆದದ್ದೇನಂದರೆ—ಬೇರೆ ಭಾಷೆಗಳಿಂದಲೂ ಬೇರೆ ತುಟಿಗಳಿಂದಲೂ ಈ
ಜನರಿಗೆ ಮಾತಾಡುವೆನು; ಆದಾಗ್ಯೂ ಹಾಗೆಯೂ ನನಗೆ ಕಿವಿ ಕೊಡರೆಂದು, (ಯೆಶಾ. ೨೮. ೧೧, ೧೨.)
೨೨ ಕರ್ತನು ಹೇಳುತ್ತಾನೆ. [9]ಹೀಗಿರಲಾಗಿ, ಭಾಷೆಗಳು ಗುರುತಾಗಿವೆ, ವಿಶ್ವಾಸಿಸುವವರಿಗಲ್ಲ, ಅವಿಶ್ವಾಸಿಗಳಿಗೆ.
ಆದರೆ ಪ್ರವಾದನೆಯು ಅವಿಶ್ವಾಸಿಗಳಿಗಲ್ಲ, ವಿಶ್ವಾಸಿಸುವವರಿಗೆ ಗುರುತಾಗಿದೆ.

1. ಆತ್ಮದವುಗಳು ಅಂದರೆ, ಆತ್ಮನ ವರಗಳು. (೧೨. ೧. ವಚನದ ವ್ಯಾಖ್ಯಾನ ನೋಡ ಬೇಕು.)

2. ಪರಿಶುದ್ಧಾತ್ಮನ ಅನುಗ್ರಹವನ್ನು ಹೊಂದಿದವನ ಆತ್ಮವು ಪ್ರಾರ್ಥಿಸುವದು. ಮತ್ತೊಬ್ಬರ ಮನಸ್ಸಿನಲ್ಲಿ ಒಳ್ಳೇ ಯೋಚನೆ ಹುಟ್ಟಿಸಲಾರದ ಬುದ್ಧಿಯು ನಿಷ್ಫಲವಾಗಿದೆ. (೧೪. ೧೬, ೧೭, ೧೯.) ಆದದರಿಂದ ಇಂಥಾ ವರವನ್ನು ಹೊಂದಿದವನು ತನಗೂ ದೇವರಿಗೂ ತಿಳಿಯುವ ಹಾಗೆ ಮಾತಾಡಿ ಕೊಂಡು ಸಭೆಯಲ್ಲಿ ಮೌನವಾಗಿರ ಬೇಕು. (೨೮. ವ.)

3. ಆತ್ಮನ ವರಗಳನ್ನು ಹೊಂದಿದವನು ಅನ್ಯ ಭಾಷೆಯಲ್ಲಿ ಕೀರ್ತನೆ ಹಾಡಿ ದೇವರನ್ನು ಸ್ತುತಿಸಿದರೆ, ಕಲಿಯದೆ ಇರುವ ಸಹೋದರನಿಗೆ ಅದರಿಂದ ಏನು ಫಲ ಉಂಟಾದೀತು? ಅವನು ಅದಕ್ಕೆ ಆಮೆನ್ ಎಂದು ಹ್ಯಾಗೆ ಹೇಳುವನು? ದೇವಾರಾಧನೆಯಲ್ಲಿ ಮಾಡುವ ಪ್ರಾರ್ಥನೆಗಳಿಗೆ ಮನಸ್ಸು ಒಪ್ಪಿ ಆಮೆನ್ ಎಂದು ಹೇಳುವದು ಯೆಹೂದ್ಯರ ಪದ್ಧತಿ. (ದ್ವಿತೀಯ ನ್ಯಾ. ೨೭. ೧೪— ೨೬. ನೆಹೆಮಿಾ. ೮. ೬.) ಅದೇ ಪದ್ಧತಿಯನ್ನು ಪೂರ್ವಿಕ ಕ್ರೈಸ್ತರು ಸಹ ಅನುಸರಿಸಿದರು.

4. ತಮಗುಂಟಾದ ವರಗಳು ಬೇರೊಬ್ಬರಿಗೆ ಇಲ್ಲದಿದ್ದರೆ, ಅವರನ್ನು ಕೊರತೆಯಾಗಿ ಎಣಿಸುವರು. ಪೌಲನು ಹಾಗೆ ಮಾಡಲಿಲ್ಲ. ಕೊರಿಂಥದ ಸಭೆಯವರಿಗೆ ಇದ್ದ ವರಗಳೆಲ್ಲಾ ಪೌಲನಿಗೆ ಇದ್ದವು. ಮತ್ತು ಅವರಿಗೆ ಇಲ್ಲದ ವರಗಳು ಸಹ ಅವನಿಗೆ ಇದ್ದವು.

5. ಎಷ್ಟು ಭಾಷೆಗಳನ್ನು ಮಾತಾಡ ತಕ್ಕವನಾಗಿದ್ದರೂ, ಅನೇಕ ಜನರು ಕೂಡಿರುವ ಸಭೆಯಲ್ಲಿ ಅವರಿಗೆ ಬೋಧನೆಯೂ ಭಕ್ತಿಯ ವೃದ್ಧಿಯೂ ಆಗುವಂತೆ ಎಲ್ಲರಿಗೂ ತಿಳಿಯುವ ಭಾಷೆಯಲ್ಲಿ ಮಾತಾಡುವದೇ ಉತ್ತಮ. ರೋಮನ್ ಮಾರ್ಗದವರು ಜನರಿಗೆ ತಿಳಿಯದ ಭಾಷೆಯಲ್ಲಿ ಆರಾಧನೆ ನಡಿಸುವದು ವೇದಕ್ಕೆ ವಿರೋಧವೆಂದು ಇದರಿಂದ ತಿಳಿಯ ತಕ್ಕದ್ದು.

6. ಭಾಷೆಗಳ ವರವನ್ನು ಅಪೇಕ್ಷಿಸುವದು, ಚಿಕ್ಕವರು ಆಟದ ಸಾಮಾನುಗಳನ್ನು ಅಪೇಕ್ಷಿಸುವ ಹಾಗಿದೆ.

7. ಕೆಟ್ಟತನಕ್ಕೆ ಕೂಸುಗಳ ಹಾಗೆಯೂ, ತಿಳುವಿಕೆಯಲ್ಲಿಯೂ ಸನ್ಮಾರ್ಗದಲ್ಲಿಯೂ ಪುರುಷರ ಹಾಗೆಯೂ ಇರ ಬೇಕು. ಕೂಸುಗಳಿಗೆ ತಕ್ಕ ನಿಷ್ಕಪಟವೂ, ಪುರುಷರಿಗೆ ತಕ್ಕ ವಿವೇಕವೂ ಕ್ರೈಸ್ತರೆಲ್ಲರಲ್ಲಿ ಪ್ರಕಾಶಿಸ ಬೇಕು. (ಮತ್ತಾ. ೧೦. ೧೪.)

8. ಹಳೇ ಒಡಂಬಡಿಕೆಯ ಗ್ರಂಥಗಳಿಗೆ ಕೆಲ ವೇಳೆ ನ್ಯಾಯ ಪ್ರಮಾಣವೆಂಬ ಹೆಸರುಂಟು. (ಯೋಹಾ. ೧೦. ೩೪.) ಇಲ್ಲಿ ಹೇಳಿರುವ ವಾಕ್ಯವು ಯೆಶಾ. ೨೮. ೧೧, ೧೨. ವಚನಗಳಲ್ಲಿ ಉಂಟು. ಪೂರ್ವ ಕಾಲದಲ್ಲಿ ದೇವರು ಇಸ್ರಯೇಲ್ಯರ ಸಂಗಡ ಅವರು ಅನ್ಯ ದೇಶಗಳಲ್ಲಿ ಶೆರೆಯವರಾಗಿದ್ದಾಗ ಅನ್ಯ ಭಾಷೆಯಿಂದ ಅಥವಾ ಅನ್ಯ ಭಾಷೆಯ ಜನರಿಂದ ಮಾತಾಡಿದಾಗ, ಕೃಪೆಯಾಗಿ ಅಲ್ಲ, ನೀತಿಯಾಗಿ ಮಾತಾಡಿದ್ದರಿಂದ ಅದು ಅವರಿಗೆ ಪ್ರಯೋಜನವಾಗಲಿಲ್ಲ.

9. ಅನ್ಯ ಭಾಷೆಗಳನ್ನು ಮಾತಾಡುವ ವರವು ವಿಶ್ವಾಸಿಗಳಿಗೆ ತಿಳುವಳಿಕೆ ಉಂಟಾಗಿರುವದಕ್ಕೆ ಹೇತುವೆಯಾಗಿರದೆ, ದೇವರ ಸಾನ್ನಿಧ್ಯವನ್ನು ಅವಿಶ್ವಾಸಿಗಳು ಗ್ರಹಿಸುವದಕ್ಕೆ ತಕ್ಕ ಗುರುತಾಗಿತ್ತು. ಪ್ರವಾದನೆಯಾದ ಬೋಧನೆಯು ಅವಿಶ್ವಾಸಿಗಳಿಗಲ್ಲ, ವಿಶ್ವಾಸಿಗಳಿಗೆ ತಕ್ಕದ್ದಾಗಿತ್ತು. ಈ ವಚನದಲ್ಲಿ ಹೀಗಿದ್ದಾಗ್ಯೂ, ೨೪, ೨೫ನೇ ವಚನಗಳಲ್ಲಿ ಸುವಾರ್ತೆಯ ಪ್ರಸಂಗದಿಂದ ಅವಿಶ್ವಾಸಿಗಳು ಸಹ ತಿಳುವಳಿಕೆ ಹೊಂದಿ, ದೇವರ ಆಶ್ಚರ್ಯ ಕ್ರಿಯೆಗಳನ್ನು ಅರಿಕೆ ಮಾಡುವರೆಂದು ಹೇಳಿ ಇದೆ.

೨೩ ಹಾಗಾದರೆ, ಸಭೆ ಎಲ್ಲಾ ಒಂದೇ ಸ್ಥಳಕ್ಕೆ ಕೂಡಿ ಬಂದು, ಎಲ್ಲರು ಭಾಷೆಗಳಿಂದ ಮಾತಾಡುವಾಗ,
೨೪ ಕಲಿಯದವರಾದರೂ ಅವಿಶ್ವಾಸಿಗಳಾದರೂ ಒಳಗೆ ಬಂದರೆ, ಹುಚ್ಚರಾಗಿದ್ದೀರೆಂದು, ಹೇಳರೋ? ಆದರೆ
[1]ಎಲ್ಲರು ಪ್ರವಾದಿಸುವಾಗ, ಒಬ್ಬ ಅವಿಶ್ವಾಸಿಯಾದರೂ ಕಲಿಯದವನಾದರೂ ಒಳಗೆ ಬಂದರೆ, ಎಲ್ಲರಿಂದ
೨೫ ಶಿಕ್ಷಿಸಲ್ಪಡುತ್ತಾನೆ; ಎಲ್ಲರಿಂದ ವಿಚಾರಿಸಲ್ಪಡುತ್ತಾನೆ. ಮತ್ತು ಹೀಗೆ ಅವನ ಹೃದಯದ ರಹಸ್ಯಗಳು
ತೋರಲ್ಪಡುತ್ತವೆ. ಮತ್ತು ಹೀಗೆ ಮೋರೆ ಕೆಳಗಾಗಿ ಬಿದ್ದು, ದೇವರಿಗೆ ನಮಸ್ಕರಿಸಿ, ದೇವರು ನಿಜವಾಗಿ
ನಿಮ್ಮಲ್ಲಿ ಇದ್ದಾನೆಂದು, ಅರಿಕೆ ಮಾಡುವನು.
೨೬ [2]ಹಾಗಾದರೇನು? ಸಹೋದರರೇ, ನೀವು ಕೂಡಿ ಬರುವಾಗ್ಯೆ, ನಿಮ್ಮಲ್ಲಿ ಒಬ್ಬೊಬ್ಬನಿಗೆ ಹಾಡು ಉಂಟು,
ಬೋಧನೆ ಉಂಟು, ಭಾಷೆ ಉಂಟು, ಪ್ರಕಟಣೆ ಉಂಟು, ವಿವರ ಉಂಟು. ಎಲ್ಲಾ ಆತ್ಮವೃದ್ಧಿಗೋಸ್ಕರ ಆಗಲಿ.
೨೭ ಭಾಷೆಯಿಂದ ಮಾತಾಡುವದು ಇದ್ದರೆ, ಇಬ್ಬರಾಗಿ, ಇಲ್ಲವೆ [3]ಮೂವರಾಗಿ ಅಷ್ಟೇ, ಒಂತಿನ ಮೇರೆಗೆ ಮಾ
೨೮ ತಾಡಲಿ; ಮತ್ತು ಒಬ್ಬನು ವಿವರಿಸಲಿ. ಆದರೆ ವಿವರಿಸುವವನು ಇಲ್ಲದಿದ್ದರೆ, ಸಭೆಯಲ್ಲಿ ಮೌನವಾಗಿರಲಿ;
೨೯ ಆದರೆ ತನಗೂ ದೇವರಿಗೂ ಮಾತಾಡಲಿ. ಪ್ರವಾದಿಗಳು ಇಬ್ಬರಾಗಲಿ ಮೂವರಾಗಲಿ ಮಾತಾಡಲಿ;
೩೦ [4]ಮತ್ತೊಬ್ಬರು ಶೋಧಿಸಲಿ. ಕುಳಿತಿರುವ ಮತ್ತೊಬ್ಬನಿಗೆ ಪ್ರಕಟಣೆ ಉಂಟಾದರೆ, [5]ಮೊದಲಿನವನು ಮೌನ
೩೧ ವಾಗಿರಲಿ. ಯಾಕಂದರೆ ಎಲ್ಲರು ಕಲಿತು ಕೊಳ್ಳುವ ಹಾಗೆಯೂ, ಎಲ್ಲರು ಆದರಿಸಲ್ಪಡುವ ಹಾಗೆಯೂ,
೩೨ ಒಬ್ಬೊಬ್ಬನಾಗಿ ನೀವೆಲ್ಲರು ಪ್ರವಾದಿಸ ಬಹುದು. ಮತ್ತು [6]ಪ್ರವಾದಿಗಳ ಆತ್ಮಗಳು ಪ್ರವಾದಿಗಳಿಗೆ ವಶವಾಗಿವೆ.
೩೩ ಯಾಕಂದರೆ ದೇವರು ಕ್ರಮಹೀನತ್ವಕ್ಕಲ್ಲ, ಸಮಾಧಾನಕ್ಕೆ ದೇವರಾಗಿದ್ದಾನೆ; ಪರಿಶುದ್ಧರ ಎಲ್ಲಾ ಸಭೆಗಳಲ್ಲಿ
ಹೀಗೆಯೇ.
೩೪ [7]ನಿಮ್ಮ ಸ್ತ್ರೀಯರು ಸಭೆಗಳಲ್ಲಿ ಮೌನವಾಗಿರಲಿ. ಯಾಕಂದರೆ ಮಾತಾಡುವದಕ್ಕಲ್ಲ, ಅಧೀನವಾಗಿರುವ
೩೫ ದಕ್ಕೆ ಅವರಿಗೆ ಅಪ್ಪಣೆ ಉಂಟು. ಅದೇ ಪ್ರಕಾರ ನ್ಯಾಯಪ್ರಮಾಣವೂ ಹೇಳುತ್ತದೆ. ಮತ್ತು ಅವರು
ಏನಾದರೂ ಕಲಿಯ ಬೇಕೆಂದಿದ್ದರೆ, ಮನೆಯಲ್ಲಿ ತಮ್ಮ ಗಂಡಂದಿರನ್ನು ಕೇಳಲಿ. ಯಾಕಂದರೆ ಸಭೆಯಲ್ಲಿ
೩೬ ಮಾತಾಡುವದು ಸ್ತ್ರೀಯರಿಗೆ ನಾಚಿಕೆಯಾಗಿದೆ. ಏನು! ನಿಮ್ಮಿಂದ ದೇವರ ವಾಕ್ಯವು ಹೊರಟಿತೋ?
೩೭ [8]ಇಲ್ಲವೆ ನಿಮಗೆ ಮಾತ್ರ ಮುಟ್ಟಿತೋ? ಒಬ್ಬನು ತಾನು ಪ್ರವಾದಿ ಎಂದು, ಇಲ್ಲವೆ ಆತ್ಮಭಾವದವನೆಂದು,

1. ಪ್ರವಾದಿಸುವ ಒಬ್ಬೊಬ್ಬರೂ ಅವರವರ ಒಂತಿನ ಮೇರೆಗೆ ಕ್ರಮವಾಗಿ ಪ್ರವಾದಿಸ ತಕ್ಕದ್ದು. (೩೧. ವ.)

2. ಅವರು ತಾವು ಹೊಂದಿದ ಆತ್ಮನ ವರಗಳನ್ನು ಕ್ರಮವಿಲ್ಲದೆ ಪ್ರಯೋಗಿಸಿದ್ದರಿಂದ ಪೌಲನು ಅವರನ್ನು ಗದರಿಸುತ್ತಾನೆ. ಯಾವದೊಂದು ಕ್ರಮವೂ ಪ್ರಯೋಜನವೂ ಇಲ್ಲದೆ, ಒಬ್ಬನು ಹಾಡುವದೂ, ಒಬ್ಬನು ಬೋಧಿಸುವದೂ, ಒಬ್ಬನು ಮರ್ಮಗಳನ್ನು ಪ್ರಕಟಿಸುವದೂ, ಒಬ್ಬನು ಅನ್ಯ ಭಾಷೆಗಳನ್ನು ಮಾತಾಡುವದೂ ಆದರೆ, ಎಲ್ಲಾ ಗಲಿಬಿಲಿಯಾಗಿರುವದೇ ಹೊರ್ತು, ಪ್ರಯೋಜನವಿರಲಾರದು.

3. ಒಂದು ಕೂಟದಲ್ಲಿ ಭಾಷೆಗಳಲ್ಲಿ ಮಾತಾಡುವವರಿದ್ದರೆ, ಇಬ್ಬರು ಅಥವಾ ಮೂವರು ಒಂತಿನ ಮೇರೆಗೆ ಕ್ರಮವಾಗಿ ಮಾತಾಡ ತಕ್ಕದ್ದು.

4. ಆತ್ಮಗಳ ವಿವೇಚನೆಯುಳ್ಳವರು ಬೋಧಕರು ಹೇಳುವವುಗಳು ಸತ್ಯಕ್ಕೆ ಸರಿಯಾಗಿವೆಯೋ ಇಲ್ಲವೋ ಎಂದು ಪರೀಕ್ಷಿಸಲಿ.

5. ಒಬ್ಬನು ಮಾತಾಡುವಾಗ, ಮತ್ತೊಬ್ಬನಿಗೆ ದೇವರ ರಹಸ್ಯವು ಪ್ರಕಟಿಸಲ್ಪಟ್ಟರೆ, ಮೊದಲು ಮಾತಾಡುವವನು ತನ್ನ ಪ್ರಸಂಗವನ್ನು ಮುಗಿಸಿದ ಮೇಲೆ ಅವನು ಎದ್ದು ಮಾತಾಡಲಿ.

6. ಈ ಆತ್ಮನ ವರಗಳನ್ನು ಹೊಂದಿದವರು ತಮ್ಮ ಇಷ್ಟದ ಪ್ರಕಾರ ಮಾತಾಡಲೂ ನಿಲ್ಲಿಸಲೂ ಬಹುದು. (೩೦. ವ.) ತನ್ನ ಆತ್ಮನಿಂದ ಎಲ್ಲರನ್ನು ನಡಿಸುವ ದೇವರು ಕ್ರಮಕ್ಕೂ ಸಮಾಧಾನಕ್ಕೂ ಕಾರಣನಾಗಿರುವದರಿಂದ, ಒಬ್ಬರನ್ನೊಬ್ಬರು ಅತಿಕ್ರಮಿಸಿ ಕ್ರಮಹೀನವಾಗಿ ನಡಿಯ ಗೊಡಿಸನು. (೩೩. ವ.) ವಿಗ್ರಹಗಳ ಗುಡಿಗಳಲ್ಲಿ ಆವೇಶ ಬಂದು ಮಾತಾಡುವವರು ಪಿಶಾಚಗ್ರಸ್ತರು. ಅವರ ಕುಣಿದಾಟಕ್ಕೂ ಹರಟೆಗೂ ಏನೂ ಕ್ರಮವಿಲ್ಲ. ಕ್ರೈಸ್ತಸಭೆಗಳಲ್ಲಿ ಹಾಗಿರ ಬಾರದು.

7. ಎಷ್ಟು ಶ್ರೇಷ್ಠ ವರಗಳನ್ನು ಹೊಂದಿದ ಸ್ತ್ರೀಯರಾದರೂ, ಅವರು ಸಭೆಯಲ್ಲಿ ಮಾತಾಡುವದಕ್ಕೆ ಅಪ್ಪಣೆ ಇಲ್ಲ. ದೈವಾನುಗ್ರಹವು ವಿಶೇಷವಾಗಿ ಅವರಿಗೆ ಉಂಟಾಗುವಾಗ ಮಾತ್ರ ಅವರು ಮುಸುಕು ಹಾಕಿ ಕೊಂಡು ಮಾತಾಡ ಬಹುದು. (೧೧. ೫. ಅಪೊ. ಕ್ರಿ. ೨೧. ೯.) ಮಿಕ್ಕಾದ ಸಮಯಗಳಲ್ಲಿ ಅವರು ಮಾತಾಡುವದು ಸರಿಯಲ್ಲ; ಹಾಗೆ ಮಾತಾಡಿದರೆ, ಅವರು ಪುರುಷರಿಗೆ ಅಡಗಿ ನಡಿಯ ಬೇಕೆಂಬ ದೇವರ ಕಟ್ಟಳೆಗೂ (ಉತ್ಪ. ೩. ೧೬. ೧ತಿಮೊ. ೨. ೧೧, ೧೨.) ಸ್ತ್ರೀಯರಿಗೆ ಸ್ವಾಭಾವಿಕವಾಗಿರುವ ಮರ್ಯಾದೆಗೂ ವಿರೋಧವಾಗಿರುವದು. (೩೫. ವ.)

8. ಕೊರಿಂಥದ ಸಭೆಯೇ ಮೊದಲನೇ ಸಭೆ ಎಂದೂ, ಅಥವಾ ಲೋಕದಲ್ಲೆಲ್ಲಾ ಒಂದೇ ಸಭೆ ಎಂದೂ ಹೇಳಲಾಗದೆ ಇರುವದರಿಂದ, ಬೇರೆ ಸಭೆಗಳಲ್ಲಿ ಇಲ್ಲದ ಇಂಥಾ ವಾಡಿಕೆಗಳನ್ನು ನೀವು ಅನುಸರಿಸುವದಕ್ಕೆ ನಿಮಗೆ ಅಧಿಕಾರ ಉಂಟೆಂದು ಹೇಳ ಕೂಡದು, ಅನ್ನುತ್ತಾನೆ.



ನೆನಸಿ ಕೊಂಡರೆ, ನಾನು ನಿಮಗೆ ಬರೆಯುವವುಗಳನ್ನು [1]ಕರ್ತನ ಕಟ್ಟಳೆಗಳೆಂದು ತಿಳಿದು ಕೊಳ್ಳಲಿ.
೩೮ ಆದರೆ ಒಬ್ಬನು ಅರಿಯದಿದ್ದರೆ, ಅರಿಯದಿರಲಿ.
೩೯ ಆದ ಕಾರಣ, ಸಹೋದರರೇ, ಪ್ರವಾದಿಸ ಬೇಕೆಂದು ಆಸಕ್ತಿ ಪಡಿರಿ. ಭಾಷೆಗಳಲ್ಲಿ ಮಾತಾಡುವದಕ್ಕೆ
೪೦ ಅಡ್ಡಿ ಮಾಡ ಬೇಡಿರಿ. ಎಲ್ಲಾ ಮರ್ಯಾದೆಯಾಗಿಯೂ ಕ್ರಮದಿಂದಲೂ ಆಗಲಿ.

ಪುನರುತ್ಥಾನದ ಬೋಧನೆಯು.

15. [2]ಇದಲ್ಲದೆ, ಸಹೋದರರೇ, ನಾನು ನಿಮಗೆ ಪ್ರಸಂಗಿಸಿದ ಸುವಾರ್ತೆಯನ್ನು ನಿಮಗೆ ತಿಳಿಸುತ್ತೇನೆ; ಅದನ್ನೇ
೨ ಹೊಂದಿದಿರಿ; ಅದರಲ್ಲಿ ನಿಂತಿರುತ್ತೀರಿ; ಅದರಿಂದಲೇ, ಯಾವ ವಾಕ್ಯದಿಂದ ನಿಮಗೆ ಪ್ರಸಂಗ ಮಾಡಿದೆನೋ,
ಅದನ್ನು [3]ಹಿಡಿದು ಕೊಂಡರೆ, ವ್ಯರ್ಥವಾಗಿ ವಿಶ್ವಾಸಿಸದೆ ಇದ್ದರೆ, ರಕ್ಷಿಸಲ್ಪಡುತ್ತೀರಿ.
೩ ಯಾಕಂದರೆ [4]ನಾನು ಹೊಂದಿದ್ದನ್ನೇ [5]ಮೊದಲಿನವುಗಳಲ್ಲಿ ನಿಮಗೆ ಒಪ್ಪಿಸಿದೆನು. ಏನಂದರೆ—ಕ್ರಿಸ್ತನು
೪ ಬರಹಗಳ ಪ್ರಕಾರ ನಮ್ಮ ಪಾಪಗಳ ನಿಮಿತ್ತ ಸತ್ತನು; ಮತ್ತು ಹೂಣಲ್ಪಟ್ಟನು; ಮತ್ತು ಬರಹಗಳ ಪ್ರಕಾರ
೫ ಮೂರನೇ ದಿವಸದಲ್ಲಿ ಎಬ್ಬಿಸಲ್ಪಟ್ಟನು. ಮತ್ತು ಕೇಫನಿಗೂ, ತರುವಾಯ ಹನ್ನೆರಡು ಮಂದಿಗೂ, [6]ಕಾಣ
೬ ಲ್ಪಟ್ಟನು; ಆ ತರುವಾಯ ಐನೂರರ ಮೇಲೆ ಹೆಚ್ಚಾದ ಸಹೋದರರಿಗೆ ಒಂದೇ ವೇಳೆ ಕಾಣಲ್ಪಟ್ಟನು.

1. ಈ ಕಟ್ಟಳೆಗಳೆಲ್ಲಾ ಕರ್ತನಾದ ಯೇಸು ಕ್ರಿಸ್ತನ ಕಟ್ಟಳೆಗಳಾಗಿರುವದರಿಂದ ಅವುಗಳನ್ನು ಯಾರಾದರೂ ಅಲಕ್ಷ್ಯ ಮಾಡ ಯತ್ನಿಸ ಬಾರದು. ಒಬ್ಬನಿಗೆ ಅವುಗಳನ್ನು ಒಪ್ಪಿ ಕೊಳ್ಳುವ ಮನಸ್ಸಿಲ್ಲದಿದ್ದರೆ, ಅವನು ಮಹಾ ಮೂಢನಾಗಿರ ಬೇಕು; ಅವನಿಗೆ ಏನು ಹೇಳಿದರೂ ಬುದ್ಧಿ ಬರಲಾರದು. ಆದದರಿಂದ ಅದರಿಂದ ಬರುವ ನಷ್ಟವನ್ನು ಅವನು ಪಟ್ಟು ಅನುಭವಿಸ ಬೇಕು. (೧೧. ೧೬. ವಚನದ ವ್ಯಾಖ್ಯಾನ ನೋಡ ಬೇಕು.)

2. ಪುನರುತ್ಥಾನವನ್ನು ಕುರಿತು ಕೊರಿಂಥದ ಸಭೆಯಲ್ಲಿ ತಪ್ಪಾಲೋಚನೆಗಳುಂಟಾಗಿದ್ದವು. ಸ್ವಲ್ಪ ಕಾಲದೊಳಗೆ ಅವು ಬೇರೆ ಸಭೆಗಳಲ್ಲಿಯೂ ಕಾಣಲ್ಪಟ್ಟವು. (೨ತಿಮೊ. ೨. ೧೮.) ಈ ತಪ್ಪಾಲೋಚನೆಗಳನ್ನು ನಿವರ್ತಿಸುವದಕ್ಕೆ ಪೌಲನು ಈ ಸಂಧಿಯಲ್ಲಿ ಮುಖ್ಯವಾದ ನ್ಯಾಯಗಳನ್ನು ಹೇಳುತ್ತಾನೆ. ಕ್ರಿಸ್ತನ ಮರಣವೂ ಪುನರುತ್ಥಾನವೂ ಇವೇ ಸುವಾರ್ತೆಯಲ್ಲಿರುವ ಮುಖ್ಯವಾದ ಸಂಗತಿಗಳೆಂದು ತೋರಿಸಿ, ಆತನ ಪುನರುತ್ಥಾನವನ್ನು ನಿರೂಪಿಸಿ, (೧೫. ೧—೧೧.) ಭಕ್ತರ ವಿಶ್ವಾಸಕ್ಕೂ ನಂಬಿಕೆಗೂ ಆಧಾರವಾಗಿರುವ ಪುನರುತ್ಥಾನದ ಉಪದೇಶವನ್ನು ಸ್ಥಾಪಿಸಿ, (೧೨—೧೯. ವ.) ಕ್ರಿಸ್ತನ ಹಾಗೆಯೇ ಆತನ ದಾಸರು ಸಹ ಪುನರುತ್ಥಾನವಾಗುವ ಸತ್ಯವು, ಮಧ್ಯಸ್ಥನ ಮೂಲಕವಾಗಿ ಉಂಟಾಗುವಂಥ, ದೇವರ ನಿರ್ಣಯದಲ್ಲಿ ಅಡಗಿರುವಂಥ ವಿಮೋಚನೆಯನ್ನೂ ಆಳಿಕೆಯನ್ನೂ ಹೊಂದಿದ್ದಾಗಿದೆ ಎಂದು ತೋರಿಸಲ್ಪಟ್ಟಿದೆ. (೨೦—೨೮. ವ.) ಕ್ರಿಸ್ತನ ಮಾರ್ಗವನ್ನು ಅನುಸರಿಸಿದವರೂ ಅದನ್ನು ಪ್ರಸಿದ್ಧಿ ಮಾಡಿದವರೂ ಆಗಿದ್ದವರ ಸನ್ಮಾರ್ಗಪ್ರವರ್ತನೆಯನ್ನೂ, ಪುನರುತ್ಥಾನವನ್ನು ಬೊಂಕಿದವರ ದುರ್ಮಾರ್ಗ ಪ್ರವರ್ತನೆಯನ್ನೂ ನೋಡುವಾಗ ಈ ಬೋಧನೆಯು ಸತ್ಯವಾದದ್ದೆಂದು ದೃಢ ಪಡುತ್ತದೆ. (೨೯—೩೪. ವ.) ಪುನರುತ್ಥಾನದ ಶರೀರವನ್ನು ಕುರಿತ ಆಕ್ಷೇಪಣೆಗಳನ್ನು ಖಂಡಿಸಿ, ಉಪಮಾನಪ್ರಮಾಣದಿಂದ ಆ ಶರೀರದ ಸ್ವಸಮ್ಮಂಧನನ್ನೂ ಮಹಿಮೆಯನ್ನೂ ತೋರಿಸಿ ಇದೆ. (೩೫—೪೯. ವ.) ಈಗಲಿರುವ ಶರೀರದಿಂದ ಪರಮ ಮನೆಯಲ್ಲಿ ಪ್ರವೇಶಿಸುವದು ಅಸಾಧ್ಯವಾಗಿರುವದರಿಂದ, ಕರ್ತನು ಪ್ರಸನ್ನನಾಗುವ ಕಾಲದಲ್ಲಿ ಜೀವಿಸಿರುವ ಭಕ್ತರೂ, ಅದಕ್ಕೆ ಮುಂಚೆ ಸತ್ತಿರುವ ಭಕ್ತರೂ ಆಶ್ಚರ್ಯವಾದ ಮಾರ್ಪಡುವಿಕೆ ಹೊಂದಿ ಮೋಕ್ಷ ಪದವಿಗೆ ಪರಿಪಕ್ವವಾಗುವರು. (೫೦—೫೩. ವ.) ಕ್ರೈಸ್ತನು ಮರಣದ ಮೇಲೆ ಹೊಂದುವ ಜಯವನ್ನು ತೋರಿಸಿ, ಈ ಮೇಲಾದ ನಂಬಿಕೆಯುಳ್ಳವರು ತಮಗೆ ಸಂಭವಿಸುವ ಶೋಧನೆಗಳನ್ನೂ ಸಂಕಟಗಳನ್ನೂ ತಾಳ್ಮೆಯಿಂದ ಸಹಿಸಿ, ತಮ್ಮ ಕೆಲಸಗಳನ್ನು ಸಕಲ ಜಾಗ್ರತೆಯಿಂದ ಈಡೇರಿಸ ಬೇಕೆಂದು ಹೇಳಿ ಇದೆ. (೫೪—೫೮. ವ.)

3. ರಕ್ಷಣೆಗೆ ಹೇತುವೆಯಾದ ಸ್ಥಿರವಾದ ವಿಶ್ವಾಸದಿಂದ ಸುವಾರ್ತೆಯ ಸತ್ಯಗಳನ್ನು ಘಟ್ಟಿಯಾಗಿ ಹಿಡಿದು ಕೊಳ್ಳ ಬೇಕು. ಹಾಗೆ ಹಿಡಿದು ಕೊಳ್ಳದ ವಿಶ್ವಾಸವು ವ್ಯರ್ಥವಾಗಿರುವದು. (೧೪. ವ.)

4. ಈ ಸತ್ಯಗಳನ್ನು ಪೌಲನು ಸತ್ಯ ದೇವರಿಂದಲೇ ಹೊಂದಿದನು. (೧೧. ೨೩. ಗಲಾ. ೧. ೧೨.)

5. ಅವರಿಗೆ ಬೋಧಿಸಿದ ದಿವ್ಯ ಸತ್ಯಗಳಲ್ಲಿ ಕ್ರಿಸ್ತನ ಪುಣ್ಯ ಮರಣವೂ, (ರೋಮಾ. ೩. ೨೫.) ಪುನರುತ್ಥಾನವೂ ಇವೇ ಮುಖ್ಯವಾದವುಗಳು. ಬರಹಗಳ ಪ್ರಕಾರ ಇವೆಲ್ಲಾ ಸಂಭವಿಸಿದವು.

6. ಕರ್ತನ ಪುನರುತ್ಥಾನವನ್ನು ಹೇಳಿ ಅದಕ್ಕೆ ದೃಷ್ಟಾಂತಗಳನ್ನು ತೋರಿಸಿದ್ದಾನೆ. (ಮತ್ತಾ. ೨೮. ೧. ವಚನದ ವ್ಯಾಖ್ಯಾನ ನೋಡ ಬೇಕು.) ಆತನು ತನ್ನ ಶಿಷ್ಯರಿಗೆ ಕೊಟ್ಟ ದರ್ಶನಗಳಲ್ಲಿ ಆರು ದರ್ಶನಗಳನ್ನು ಕುರಿತು ಈ ಸಂಧಿಯಲ್ಲಿ ಹೇಳಿದ್ದಾನೆ. ೧ನೇದು, ಕೇಫನು ಅಥವಾ ಪೇತ್ರನಿಗೆ ಆದ ದರ್ಶನ. (ಲೂಕ. ೨೪. ೩೪.) ೨ನೇದು, ಹನ್ನೆರಡು ಮಂದಿಗೆ; (ಯೋಹಾ. ೨೦. ೧೯.) ೩ನೇದು, ಗಲಿಲಾಯದಲ್ಲಿ ಐನೂರು ಮಂದಿಗೆ; (ಮತ್ತಾ. ೨೮. ೧೬.) ೪ನೇದು, ಈ ಸಂಧಿಯಲ್ಲಿ ಹೇಳಿದ ಪ್ರಕಾರ ಯಾಕೋಬನಿಗೆ; ೫ನೇದು, ಅಪೊಸ್ತಲರೆಲ್ಲರಿಗೂ; (ಯೋಹಾ. ೨೦. ೨೬. ಲೂಕ. ೨೪. ೫೦.) ೬ನೇದು, ಅಪೊಸ್ತಲನಾದ ಪೌಲನಿಗೆ ದರ್ಶನವಾಯಿತು. ಇಲ್ಲಿ ಹನ್ನೆರಡು ಮಂದಿ ಎಂಬುವದು, ಯೂದನ ತೋಮನ ಹೊರ್ತು ಹತ್ತು ಮಂದಿ ಮಾತ್ರವಿದ್ದಾಗ್ಯೂ, ಹನ್ನೆರಡು ಮಂದಿ ಶಿಷ್ಯರೆಂಬ ವಾಡಿಕೆಯಾದ ಸಂಖ್ಯೆ ಹೇಳಿ ಇದೆ.

೭ ಇವರಲ್ಲಿ ಬಹು ಜನ [1]ಈ ವರಿಗೂ ಇರುತ್ತಾರೆ. ಆದರೆ ಕೆಲವರು ನಿದ್ದೆ ಹೋಗಿದ್ದಾರೆ. ಆ ತರುವಾಯ
೮ [2]ಯಾಕೋಬನಿಗೂ, ತರುವಾಯ [3]ಅಪೊಸ್ತಲರೆಲ್ಲರಿಗೂ, ಕಾಣಲ್ಪಟ್ಟನು. ಆದರೆ ಕಟ್ಟಕಡೆಯಲ್ಲಿ [4]ಬಿದ್ದ
೯ ಬಸುರಿನ ಹಾಗಾದ ನನಗೂ ಕಾಣಲ್ಪಟ್ಟನು. ಯಾಕಂದರೆ ನಾನು ಅಪೊಸ್ತಲರಲ್ಲಿ ಚಿಕ್ಕವನು, ದೇವರ
೧೦ ಸಭೆಯನ್ನು ಹಿಂಸೆ ಮಾಡಿದ್ದರಿಂದ, ಅಪೊಸ್ತಲನೆಂದು ಕರೆಯಲ್ಪಡ ಯೋಗ್ಯನಲ್ಲ. ಆದರೆ ಏನಾಗಿದ್ದೇನೋ,
ದೇವರ ಕೃಪೆಯಿಂದ ಇದ್ದೇನೆ; ಮತ್ತು ನನ್ನಲ್ಲಿದ್ದ ಅವನ ಕೃಪೆಯು ವ್ಯರ್ಥವಾಗದೆ, [5]ಅವರೆಲ್ಲರಿಗಿಂತ ಹೆಚ್ಚಾಗಿ
೧೧ ಕಷ್ಟ ಪಟ್ಟೆನು. ಆದರೆ ನಾನಲ್ಲ, ನನ್ನ ಸಂಗಡ ಇದ್ದ ದೇವರ ಕೃಪೆಯೇ. ಹಾಗಾದರೆ, ನಾನಾಗಲಿ, ಅವ
ರಾಗಲಿ, ಹೀಗೆ ಸಾರುತ್ತೇವೆ; ಮತ್ತು ಹೀಗೆ ವಿಶ್ವಾಸಿಸಿದಿರಿ.
೧೨ ಆದರೆ ಸತ್ತವರೊಳಗಿಂದ ಎಬ್ಬಿಸಲ್ಪಟ್ಟನೆಂದು, ಕ್ರಿಸ್ತನು ಸಾರಲ್ಪಟ್ಟರೆ, ನಿಮ್ಮಲ್ಲಿ ಕೆಲವರು [6]ಸತ್ತವರ ಪುನ
೧೩ ರುತ್ಥಾನವು ಇಲ್ಲವೆಂದು [7]ಹೇಳುವದು ಹ್ಯಾಗೆ? ಆದರೆ ಸತ್ತವರ ಪುನರುತ್ಥಾನವು ಇಲ್ಲದಿದ್ದರೆ, ಕ್ರಿಸ್ತನು
೧೪ ಸಹ ಎಬ್ಬಿಸಲ್ಪಡಲಿಲ್ಲ. ಮತ್ತು ಕ್ರಿಸ್ತನು ಎಬ್ಬಿಸಲ್ಪಡದಿದ್ದರೆ, ನಮ್ಮ ಪ್ರಸಂಗವು ವ್ಯರ್ಥವೇ ಸರಿ; ನಿಮ್ಮ
೧೫ ವಿಶ್ವಾಸವು ಸಹ ವ್ಯರ್ಥವೇ. ಇದಲ್ಲದೆ ಸತ್ತವರು ಎಬ್ಬಿಸಲ್ಪಡದ ಪಕ್ಷದಲ್ಲಿ, ಅವನು ಎಬ್ಬಿಸದ ಕ್ರಿಸ್ತನನ್ನು
೧೬ ಎಬ್ಬಿಸಿದನೆಂದು ದೇವರನ್ನು ಕುರಿತು ಸಾಕ್ಷಿ ಹೇಳಿ, ದೇವರ [8]ಅಪಸಾಕ್ಷಿಗಳಾಗಿ ಶಿಕ್ಕಿ ಕೊಳ್ಳುವೆವು. ಯಾಕಂ
೧೭ ದರೆ ಸತ್ತವರು ಎಬ್ಬಿಸಲ್ಪಡದಿದ್ದರೆ, ಕ್ರಿಸ್ತನು ಎಬ್ಬಿಸಲ್ಪಡಲಿಲ್ಲ. ಮತ್ತು ಕ್ರಿಸ್ತನು ಎಬ್ಬಿಸಲ್ಪಡದಿದ್ದರೆ, ನಿಮ್ಮ
೧೮ ವಿಶ್ವಾಸವು ವ್ಯರ್ಥವೇ; ಇನ್ನು ನಿಮ್ಮ [9]ಪಾಪಗಳಲ್ಲಿ ಇದ್ದೀರಿ. ಹಾಗಾದರೆ, ಕ್ರಿಸ್ತನಲ್ಲಿ ನಿದ್ದೆ ಹೋದವರು

1. ಬಹು ಜನ ಈ ವರಿಗೂ ಇರುವದರಿಂದ ಇದು ನಿಜವೋ ಸುಳ್ಳೋ ಅವರನ್ನು ವಿಚಾರಿಸಿ ತಿಳಿದು ಕೊಳ್ಳ ಬಹುದು.

2. ಈ ಯಾಕೋಬನು ಯೇಸು ಕ್ರಿಸ್ತನ ತಮ್ಮನೆಂದು ತೋರುತ್ತದೆ. (ಗಲಾ. ೧. ೧೯.)

3. ಇದು ತೋಮನ ಸಹಿತವಾಗಿ ಎಲ್ಲಾ ಅಪೊಸ್ತಲರನ್ನು ಸೂಚಿಸುತ್ತದೆ. ಕರ್ತನು ಪರಲೋಕಕ್ಕೆ ಏರಿ ಹೋಗುವಾಗ ಅಪೊಸ್ತಲರಿಗೆ ಆದ ದರ್ಶನ ಇದೇ ಎಂದು ಕಾಣುತ್ತದೆ. (ಅಪೊ. ಕ್ರಿ. ೧. ೯.)

4. “ಬಿದ್ದ ಬಸುರು” ಎಂದು ಭಾಷಾಂತರ ಮಾಡಿದ್ದು ಸರಿಯಲ್ಲ, ಕಾಲ ಪೂರ್ತಿಯಾಗುವದಕ್ಕಿಂತ ಮುಂಚೆ ಹುಟ್ಟಿದವನೆಂದು ಬೇರೆ ಭಾಷಾಂತರಗಳಲ್ಲಿ ಉಂಟು; ಇದು ಪೌಲನು ಗುಣಪಟ್ಟ ಕಾಲವನ್ನೂ ವಿಧವನ್ನೂ (ಅಪೊ. ಕ್ರಿ. ೯. ಸಂಧಿ.) ವಿಶೇಷವಾಗಿ ಅವನ ದೀನತ್ವವನ್ನೂ (೯. ವ. ೧ ತಿಮೊ. ೧. ೧೨—೧೬.) ಕುರಿತ ಉಪಮಾನವೆಂದು ತೋರುತ್ತದೆ. ಅಪೊಸ್ತಲರೆಂಬ ಕುಟುಂಬದಲ್ಲಿ ಪೌಲನು ಅಕಾಲದಲ್ಲಿ ಜನ್ಮಿಸಿದವನ ಹಾಗಿದ್ದನು.

5. ದೇವರ ಸಭೆಯನ್ನು ಹಿಂಸಿಸಿದ್ದರಿಂದ, ಬೇರೆ ಅಪೊಸ್ತಲರಿಗಿಂತ ಕಡಿಮೆಯಾದವನಾಗಿಯೂ, ಅಪೊಸ್ತಲನೆಂಬ ಹೆಸರಿಗೆ ಅಪಾತ್ರನಾಗಿಯೂ ಇದ್ದಾಗ್ಯೂ, ಅವರೆಲ್ಲರಿಗಿಂತ ಹೆಚ್ಚಾದ ಕೆಲಸಗಳನ್ನು ಮಾಡುವ ಹಾಗೆ ದೇವರು ತನಗೆ ಹೆಚ್ಚಾಗಿ ಕೃಪೆಯನ್ನು ಕೊಟ್ಟನೆಂದು ಹೇಳುತ್ತಾನೆ. ಅವನು ತನ್ನ ಮನಸ್ಸಿನಲ್ಲಿ ಮುಖ್ಯ ಪಾಪಿಷ್ಠನೆಂದು ನೆನಸಿದಾಗ್ಯೂ, ಮುಖ್ಯ ಅಪೊಸ್ತಲನಾಗಿದ್ದನು.

6. ಕೊರಿಂಥದ ಸಭೆಯಲ್ಲಿ ಕೆಲವರು ತತ್ವಶಾಸ್ತ್ರಿಗಳಿದ್ದರು. ಅವರು ತಮ್ಮ ಅಜ್ಞಾನ ಮಾರ್ಗವನ್ನು ಬಿಟ್ಟು, ಕ್ರಿಸ್ತನ ಮಾರ್ಗವನ್ನು ಅನುಸರಿಸಿದವರಾಗಿದ್ದಾಗ್ಯೂ, ಅವರು ಕಲಿತಿದ್ದ ಶಾಸ್ತ್ರಾಭಿಪ್ರಾಯಗಳನ್ನು ಸುವಾರ್ತೆಯ ಉಪದೇಶಗಳ ಸಂಗಡ ಜೋಡಿಸಿ ತೋರಿಸುವದಕ್ಕೆ ಪ್ರಯಾಸ ಪಟ್ಟರು. ಪುನರುತ್ಥಾನದ ಉಪದೇಶದಿಂದ ಮನುಷ್ಯದೇಹವು ಮಹಿಮೆ ಪಟ್ಟಂತೆ ತೋರಿದ್ದರಿಂದ ಅದು ಅವರ ಶಾಸ್ತ್ರಾಭಿಪ್ರಾಯಗಳಿಗೆ ಸರಿ ಬೀಳದೆ ಇತ್ತು. (ಅಪೊ. ಕ್ರಿ. ೧೭. ೧೮, ೩೨.) ಮಣ್ಣಿನಲ್ಲಿ ಕೊಳೆತು ಮಡಿದು ಹೋಗುವ ದೇಹವು ಮಹಿಮೆಯಾಗಿ ಪುನರುತ್ಥಾನವಾಗುವದು ಹ್ಯಾಗೆ? ಎಂಬುವದು ಅವರ ಬುದ್ಧಿಗೆ ತೋಚದೆ ಇತ್ತು. (೩೫. ವ.) ಅದರಿಂದ ಅವರು ಪುನರುತ್ಥಾನವಿಲ್ಲವೆಂದು ಸಾಧಿಸಿದರು. (೧ ತಿಮೊ. ೧. ೧೯, ೨೦. ೨ ತಿಮೊ. ೨. ೧೭, ೧೮.)

7. ಇದು ವಿಶೇಷವಾಗಿ ದೇವಭಕ್ತರ ಪುನರುತ್ಥಾನವನ್ನು ಕುರಿತದ್ದು. ಇದರಲ್ಲಿ ಕ್ರಿಸ್ತನಿಗೂ ಆತನ ದಾಸರಿಗೂ ಸಮ್ಮಂಧವನ್ನು ಕುರಿತ ನ್ಯಾಯವು ಹೇಳಲ್ಪಟ್ಟಿರುವದರಿಂದ ಇದು ಆತನ ದಾಸರ ಪುನರುತ್ಥಾನವನ್ನು ಕುರಿತದ್ದೇ ಎಂದು ನೆನಸ ಬೇಕು. ದುರ್ಮಾರ್ಗರ ಪುನರುತ್ಥಾನವನ್ನು ಕುರಿತು ವೇದದಲ್ಲಿ ಬೇರೆ ಸ್ಥಳಗಳಲ್ಲಿ ಹೇಳಲ್ಪಟ್ಟಿದೆ. (ಯೋಹಾ. ೫. ೨೯. ಅಪೊ. ಕ್ರಿ. ೨೪. ೧೫.)

8. ಪುನರುತ್ಥಾನವಿಲ್ಲವೆಂಬ ಎದುರಾಳಿಗಳ ನ್ಯಾಯವನ್ನು ಒಪ್ಪಿ ಕೊಂಡವನ ಹಾಗೆ ಇಟ್ಟು ಕೊಂಡು, ಅದನ್ನು ಬೊಂಕುವದರಿಂದುಂಟಾಗುವ ಕೇಡುಗಳನ್ನು ತೋರಿಸುತ್ತಾನೆ. ೧ನೇದು, ದೇವರನ್ನು ಕುರಿತು ಅಪೊಸ್ತಲರು ಕೊಟ್ಟ ಸಾಕ್ಷಿ ಸುಳ್ಳಾಗುವದು. ೨ನೇದು, ಜೀವದಿಂದಿರುವ ಭಕ್ತರ ವಿಶ್ವಾಸವು ವ್ಯರ್ಥವಾಗುವದು. ೩ನೇದು, ಸತ್ತು ಹೋದ ಭಕ್ತರ ಸ್ಥಿತಿ ನಾಶಕರವಾಗುವದು. ೪ನೇದು, ಕ್ರಿಸ್ತನ ಭಕ್ತರ ಸ್ಥಿತಿಯು ಎಲ್ಲಾ ಮನುಷ್ಯರ ಸ್ಥಿತಿಗಿಂತ ಬಹಳ ದೌರ್ಭಾಗ್ಯವಾಗುವದು. ಪುನರುತ್ಥಾನವಿಲ್ಲ ಅಂದರೆ ಈ ಕೇಡುಗಳೆಲ್ಲಾ ಉಂಟಾಗುವವು.

9. ಕ್ರಿಸ್ತನು ಎಬ್ಬಿಸಲ್ಪಡದಿದ್ದರೆ, ಆತನು ಶಿಲುಬೆಯ ಮೇಲೆ ಪ್ರಾಣತ್ಯಾಗ ಮಾಡಿ ಅರ್ಪಿಸಿದ ಪಾಪನಿವಾರಣಬಲಿಯನ್ನು ತಂದೆಯಾದ ದೇವರು ಅಂಗೀಕರಿಸಲಿಲ್ಲವೆಂದು ಹೇಳ ಬೇಕಾಗುವದು. (ರೋಮಾ. ೪. ೨೫. ವಚನದ ವ್ಯಾಖ್ಯಾನ ನೋಡ ಬೇಕು.) ಹಾಗಾದರೆ ಕ್ರಿಸ್ತನಲ್ಲಿ ವಿಶ್ವಾಸವಿಟ್ಟವರಿಗೆ ಪಾಪಕ್ಷಮೆಯೂ, ನಿತ್ಯ ಜೀವವೂ ಇಲ್ಲವೆಂದು ಹೇಳ ಬೇಕಾಗಿರುವದು.



೧೯ ನಾಶವಾಗಿದ್ದಾರೆ. ನಾವು ಈ ಜೀವದಲ್ಲಿ ಮಾತ್ರ ಕ್ರಿಸ್ತನಲ್ಲಿ ನಿರೀಕ್ಷಿಸಿದವರಾಗಿದ್ದರೆ, ಎಲ್ಲಾ ಮನುಷ್ಯರಿ
ಗಿಂತ [1]ನಿರ್ಭಾಗ್ಯರಾಗಿದ್ದೇವೆ.
೨೦ ಆದರೆ ಈಗ ಕ್ರಿಸ್ತನು ಸತ್ತವರೊಳಗಿಂದ ಎಬ್ಬಿಸಲ್ಪಟ್ಟು, ನಿದ್ದೆ ಹೋದವರಲ್ಲಿ ಪ್ರಥಮ [2]ಫಲವಾದನು.
೨೧ ಯಾಕಂದರೆ ಮನುಷ್ಯನಿಂದ ಮರಣವು ಬಂದ ಕಾರಣ, ಸತ್ತವರ ಪುನರುತ್ಥಾನವು ಮನುಷ್ಯನಿಂದಲೇ.
೨೨ ಹ್ಯಾಗಂದರೆ, ಯಾವ ಪ್ರಕಾರ [3]ಆದಮನಲ್ಲಿ ಎಲ್ಲರು ಸಾಯುತ್ತಾರೋ, ಅದೇ ಪ್ರಕಾರ ಕ್ರಿಸ್ತನಲ್ಲಿ ಎಲ್ಲರು
೨೩ ಬದುಕಿಸಲ್ಪಡುವರು. ಆದರೆ ಒಬ್ಬೊಬ್ಬನು ಸ್ವಂತ ಕ್ರಮದಲ್ಲಿ; ಪ್ರಥಮ ಫಲ ಕ್ರಿಸ್ತನು; ತರುವಾಯ ಅವನ
ಬರುವಿಕೆಯಲ್ಲಿ ಕ್ರಿಸ್ತನವರು.
೨೪ ಆ ಮೇಲೆ [4]ಅಂತ್ಯವು—ಅವನು ಎಲ್ಲಾ ಧೊರೆತನವನ್ನೂ ಎಲ್ಲಾ ಅಧಿಕಾರ ಬಲಗಳನ್ನೂ ತೆಗೆದು ಹಾಕಿ,
೨೫ ತಂದೆಯಾದ ದೇವರಿಗೆ ರಾಜ್ಯವನ್ನು ಒಪ್ಪಿಸಿದಾಗಲೇ. ಯಾಕಂದರೆ ಎಲ್ಲಾ ಶತ್ರುಗಳನ್ನು ಅವನ ಪಾದ
೨೬ ಗಳ ಕೆಳಗೆ ಇಟ್ಟಿರುವ ಮಟ್ಟಿಗೂ, ಅವನು [5]ರಾಜ್ಯವಾಳ ಬೇಕು. [6]ಮರಣವು ಕಡೇ ಶತ್ರುವಾಗಿ ಲಯ
೨೭ ಮಾಡಲ್ಪಡುವದು. ಯಾಕಂದರೆ ಎಲ್ಲವುಗಳನ್ನು ಅವನ ಪಾದಗಳ ಕೆಳಗೆ ಇಟ್ಟಿದ್ದಾನೆ. (ಕೀರ್ತ. ೮.
೬—೮.) ಆದರೆ ಎಲ್ಲವುಗಳು ಕೆಳಗೆ ಇಟ್ಟವೆ ಎಂದು ಹೇಳುವಾಗ, ಎಲ್ಲವುಗಳನ್ನು ಅವನ ಕೆಳಗೆ ಇಟ್ಟ
೨೮ ವನು ಹೊರ್ತು ಎಂಬುವದು ತೋರುತ್ತದೆ. ಮತ್ತು ಎಲ್ಲವುಗಳು ಅವನ ಕೆಳಗಾದಾಗ, ದೇವರು ಎಲ್ಲವು
ಗಳಲ್ಲಿ ಎಲ್ಲಾ ಆಗುವ ಹಾಗೆ, ಎಲ್ಲವುಗಳನ್ನು ಕೆಳಗಾಗ ಮಾಡಿದವನಿಗೆ [7]ಮಗನು ತಾನೇ ಕೆಳಗಾಗುವನು.

1. ಅಧಿಕ ಪ್ರಯಾಸದಿಂದ ಕಷ್ಟ ನಷ್ಟಗಳನ್ನು ತಾಳಿ ಹುಡುಕಿದ ವಸ್ತು ಶಿಕ್ಕಲಿಲ್ಲವಂದರೆ ಬಹಳ ಪರಿತಾಪವಲ್ಲವೋ? (೨೯—೩೨. ವ.) ಅದಕ್ಕಾಗಿ ಇಷ್ಟು ಕಷ್ಟ ಪಡುವವರಿಗಿಂತಲೂ, ಅದನ್ನು ಕುರಿತು ವಿಚಾರವಿಲ್ಲದಿರುವ ಮನುಷ್ಯರ ಸ್ಥಿತಿಯು ಮೇಲಾದದ್ದೆಂದು ಹೇಳ ಬೇಕು.

2. ಶತ್ರುಗಳ ತಪ್ಪಾದ ಅಭಿಪ್ರಾಯವನ್ನೂ ಅದರಿಂದುಂಟಾಗುವ ನಷ್ಟಗಳನ್ನೂ ತೋರಿಸಿ, ಕ್ರಿಸ್ತನ ಪುನರುತ್ಥಾನವನ್ನೂ ಅದರಿಂದ ಹುಟ್ಟುವ ಮೇಲುಗಳನ್ನೂ ಪೌಲನು ತೋರಿಸುತ್ತಾನೆ. ಆತನು ತಾನೇ ಪುನರುತ್ಥಾನವಾದದ್ದಲ್ಲದೆ, ಪುನರುತ್ಥಾನವಾಗುವವರಿಗೆಲ್ಲಾ ಮೊದಲಿನವನಾಗಿಯೂ ಸಂಚಕಾರದ ಹಾಗೆಯೂ ಇದ್ದಾನೆ. (ರೋಮಾ. ೮. ೨೩. ೧ ಥೆಸ್ಸ. ೪. ೧೪.) ಪಸ್ಕದ ಸಬ್ಬತಿನಲ್ಲಿ ಬೆಳೆಯ ಪ್ರಥಮ ಫಲವನ್ನು ದೇವರಿಗೆ ಅರ್ಪಿಸುವದು ಯೆಹೂದ್ಯರಲ್ಲಿ ಪದ್ಧತಿಯಾಗಿತ್ತು. (ಲೇವಿ. ೨೩. ೧೦, ೧೧.) ಆ ದಿವಸಕ್ಕೆ ಸರಿಯಾದ ದಿವಸದಲ್ಲಿಯೇ ಕರ್ತನು ಜೀವದಿಂದ ಎದ್ದದರಿಂದ “ನಿದ್ದೆ ಹೋದವರಲ್ಲಿ ಪ್ರಥಮ ಫಲವಾದನು”, ಎಂದು ಉಪಮಾನವಾಗಿ ಹೇಳಿರುವದು ಚನ್ನಾಗಿದೆ.

3. (ರೋಮಾ. ೫. ೧೪; ೮. ೯—೧೧. ವಚನಗಳ ವ್ಯಾಖ್ಯಾನಗಳನ್ನು ನೋಡ ಬೇಕು.) ಆದಿ ಪುರುಷನಾದ ಆದಮನಿಂದ ಲೋಕದಲ್ಲಿ ಮರಣವು ಪ್ರವೇಶಿಸಿದ ಪ್ರಕಾರ, ಪರಮ ಪುರುಷನಾದ ಕ್ರಿಸ್ತನೆಂಬ ಎರಡನೇ ಆದಮನಿಂದ ಸತ್ತವರ ಪುನರುತ್ಥಾನವು ಉಂಟಾಯಿತು. ದೇವಕುಮಾರನು ಮನುಷ್ಯರೂಪ ತೆಗೆದುಕೊಂಡು ಮನುಷ್ಯನಾಗಿ ತೋರಿದ್ದರಿಂದ, ಆತನು ಒಂದೇ ಮಾಂಸವು ಒಂದೇ ಎಲುವಿನ ಹಾಗೆ ಮನುಷ್ಯರ ಸಮ್ಮಂಧಿಕನಾದನು. ಆದದರಿಂದ ಆದಮನಲ್ಲಿ ಸಾಯುವವರು ಎರಡನೇ ಆದಮನಾದ ಕ್ರಿಸ್ತನಲ್ಲಿ ಜೀವ ಹೊಂದಿ ಬಾಳುವರು.

4. ಪುನರುತ್ಥಾನದಲ್ಲಿ ಬಹಳ ಕ್ರಮವೂ ಅಲಂಕಾರವೂ ತೋರುತ್ತದೆ. ೧ನೇದು, ಜೀವದಧಿಪತಿಯಾದ ಯೇಸು ಕರ್ತನು ತನ್ನ ದಾಸರಿಗೆ ಕೊಡುವದಕ್ಕಾಗಿ, ಪುನರುತ್ಥಾನವನ್ನೂ ಸಾಯದ ವರವನ್ನೂ ನಿತ್ಯ ಮಹಿಮೆಯನ್ನೂ ತನ್ನ ಕೈಯಲ್ಲಿ ಹಿಡಿದವನಾಗಿ ಒಂಟಿಯಾಗಿ ಎದ್ದಿದ್ದಾನೆ. ೨ನೇದು, ಕ್ರಿಸ್ತನವರು ಎಂಬ ಶ್ರೇಷ್ಠ ನಾಮವನ್ನು ಹೊಂದಿದ ಪರಿಶುದ್ಧವಂತರು ಎದ್ದು ಬರುವರು. ೩ನೇದು, ಕಡೆಯಲ್ಲಿ ಅಂತ್ಯವಾಗುವದು. ಕ್ರಿಸ್ತನು ಮಧ್ಯಸ್ಥನಾಗಿ ಮಾಡಿದ ಪುಣ್ಯಕೆಲಸವು ತೀರಿ ಆತನ ರಾಜ್ಯಭಾರವು ನಿಂತು ಹೋಗುವದು. (ಯೋಹಾ. ೫. ೨೨; ೬. ೩೯.) ದುರ್ಮಾರ್ಗರು ಎದ್ದು ನ್ಯಾಯತೀರ್ವಿಕೆ ಹೊಂದುವರು. ಪಿಶಾಚನು, ಪಾಪವು, ಮರಣವು, ಪಾತಾಳವು, ಎಂಬ ಶತ್ರುಗಳು ನಾಶವಾಗಿ ಹೋಗುವರು.

5. ತಂದೆಯ ಮಾತಿನ ಪ್ರಕಾರ ಸಮಸ್ತ ಶತ್ರುಗಳೂ ಮಡಿದು ಹೋಗುವ ಪರ್ಯಂತರ ಕುಮಾರನು ರಾಜ್ಯವಾಳ ಬೇಕು. (ಕೀರ್ತ. ೧೧೦. ೧.)

6. ಮರಣವನ್ನು ಒಂದು ಶತ್ರುವಿನಂತೆ, ಅಥವಾ ವಿರೋಧಿಯಾದ ಒಬ್ಬ ಅರಸನಂತೆ ಉಪಮಾನಿಸಿ ಹೇಳಿ ಇದೆ. ಲೋಕಾಂತ್ಯದ ಮಟ್ಟಿಗೂ ಧೊರೆತನ ಮಾಡುವ ಈ ಕ್ರೂರ ರಾಕ್ಷಸನನ್ನು ಯೇಸು ಮಹಾರಾಜನು ತನ್ನ ಕಬ್ಬಿಣದ ಗದೆಯಿಂದ ಹೊಡೆದು ಜಜ್ಜಿ ಹತ ಮಾಡುವನು.

7. ಕ್ರಿಸ್ತನು ಮಧ್ಯಸ್ಥನಾಗಿದ್ದು ಸರ್ವಸೃಷ್ಟಿಗಳ ಮೇಲೆಯೂ ಮಾಡುವ ರಾಜ್ಯಭಾರವು, ಆತನು ಮಹಿಮಾಸ್ವರೂಪನಾಗಿ ಎದ್ದಾಗ ಪ್ರಾರಂಭವಾಯಿತು. ಕಡೇ ಶತ್ರುವಾದ ಮರಣವು ನಾಶವಾಗಿ ಮನುಷ್ಯರೆದ್ದು ನ್ಯಾಯತೀರ್ವಿಕೆ ಹೊಂದುವಾಗ ಆ ರಾಜ್ಯಭಾರವು ಮುಗಿಯುವದು. ತರುವಾಯ ಆತನು ಮಧ್ಯಸ್ಥನಾಗಿರುವ ವಿಷಯದಲ್ಲಿ ಮನೋತ್ಸಾಹವಾಗಿ ತಂದೆಗೆ ಒಳಪಟ್ಟಿರುವನು. ದೈವತ್ವದ ಪ್ರಕಾರ ತಂದೆಯೂ ಆತನೂ ಒಂದಾಗಿರುವದರಿಂದ ಆತನ ರಾಜ್ಯಭಾರಕ್ಕೆ ಅಂತ್ಯವಿರದು. (ಲೂಕ. ೧. ೩೩. ಇಬ್ರಿ. ೧. ೮. ಕೀರ್ತ. ೧೧೦. ೪.) ಸರ್ವಲೋಕಗಳಿಗೂ ಕರ್ತನಾದ ತ್ರಿಯೇಕ ದೇವರು ಎಲ್ಲಾದರಲ್ಲಿ ಎಲ್ಲಾ ಆಗಿ ತೋರುವನು.

೨೯ ಇಲ್ಲದಿದ್ದರೆ ಸತ್ತವರು ಎಂದಿಗೂ ಏಳದಿದ್ದರೆ, ಸತ್ತವರ ನಿಮಿತ್ತ [1]ಸ್ನಾನ ಹೊಂದುವವರು ಏನು ಮಾಡು
೩೦ ವರು? ಇನ್ನು ಸತ್ತವರ ನಿಮಿತ್ತ ಸ್ನಾನ ಹೊಂದುವದು ಯಾಕೆ? ಇದಲ್ಲದೆ, ನಾವು ಘಳಿಗೆ ಘಳಿಗೆಗೂ
೩೧ ಗಂಡಾಂತರದಲ್ಲಿರುವದು ಯಾಕೆ? ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿ ನನಗೆ ಉಂಟಾಗಿರುವ ನಿಮ್ಮ
೩೨ ಹೆಚ್ಚಳದ ಸಾಕ್ಷಿಯಾಗಿ, [2]ದಿನಾಲು ಸಾಯುತ್ತೇನೆ. ನಾನು [3]ಮನುಷ್ಯನ ಪ್ರಕಾರ ಎಫೆಸದಲ್ಲಿ ಮೃಗ
ಯುದ್ಧ ಮಾಡಿದ್ದಾಗ್ಯೂ, ಸತ್ತವರು ಏಳದ ಪಕ್ಷದಲ್ಲಿ ನನಗೆ ಪ್ರಯೋಜನವೇನು? ಉಣ್ಣುವ, ಕುಡಿಯುವ,
೩೩ ನಾಳೆ [4]ಸಾಯುತ್ತೇವೆ. (ಯೆಶಾ. ೨೨. ೧೩.) ತಪ್ಪಿ ಹೋಗ ಬೇಡಿರಿ; ಕೆಟ್ಟ ಸಂಭಾಷಣೆಗಳು ಒಳ್ಳೇ
೩೪ [5]ಮರ್ಯಾದೆಗಳನ್ನು ಕೆಡಿಸುತ್ತವೆ. ತಕ್ಕ ಹಾಗೆ [6]ಎಚ್ಚರಿಕೆಯಾಗಿರ್ರಿ, ಪಾಪ ಮಾಡ ಬೇಡಿರಿ; ಯಾಕಂ
ದರೆ ದೇವರನ್ನು ಕುರಿತು ಕೆಲವರಿಗೆ ಅಜ್ಞಾನ ಉಂಟು. ನಿಮ್ಮನ್ನು ನಾಚಿಕೆ ಪಡಿಸ ಇದನ್ನು ಹೇಳುತ್ತೇನೆ.

ಉಪಮಾನಪ್ರಮಾಣದಿಂದ ಪುನರುತ್ಥಾನವನ್ನು ದೃಷ್ಟಾಂತ ಪಡಿಸಿದ್ದು; ಮನುಷ್ಯದೇಹಕ್ಕುಂಟಾಗುವ
ದೊಡ್ಡ ಮಾರ್ಪಡುವಿಕೆ. ಮರಣವು ಪೂರ್ಣವಾಗಿ ಲಯವಾಗುವದು.

೩೫ ಆದರೆ, ಸತ್ತವರು ಹ್ಯಾಗೆ ಎಬ್ಬಿಸಲ್ಪಡುತ್ತಾರೆ? ಯಾವ ಶರೀರದಿಂದ ಬರುತ್ತಾರೆ? ಎಂದು ಒಬ್ಬನು ಹೇಳು

---

1. ಇದನ್ನು ಕುರಿತು ವಿದ್ವಾಂಸರಲ್ಲಿ ಬಹಳ ತರ್ಕ ಉಂಟು. ಸ್ನಾನ ಹೊಂದ ಬೇಕೆಂದಿದ್ದವರು, ಹೊಂದುವದಕ್ಕೆ ಮುಂಚೆ ಸತ್ತು ಹೋದದರಿಂದ ಅವರಿಗಾಗಿ ಮತ್ತೊಬ್ಬರು ಬಂದು ಸ್ನಾನ ಹೊಂದುವ ವಾಡಿಕೆ ಕೆಲವು ಕಾಲ ನಡಿಯಿತೆಂದೂ, ಅದನ್ನು ಕುರಿತೇ ಹೀಗೆ ಹೇಳಿರುತ್ತದೆಂದೂ ಕೆಲವರು ನೆನಸುತ್ತಾರೆ. ಬೇರೆ ಕೆಲವರು ಪುನರುತ್ಥಾನದ ವಿಷಯವಾದ ವಿಶ್ವಾಸವನ್ನು ಅರಿಕೆ ಮಾಡಿ ಸ್ನಾನ ಹೊಂದುವ ಪದ್ಧತಿಯನ್ನು ಕುರಿತದ್ದೆಂದು ನೆನಸುತ್ತಾರೆ. (ಅಪೊ. ಕ್ರಿ. ೨೩. ೬.) ಬೇರೆ ಕೆಲವರು ಮರಣದ ತರುವಾಯ ಪುನರುತ್ಥಾನವಾಗುವದೆಂದು ಕ್ರೈಸ್ತರು ಹೇಳಿದ್ದರಿಂದ, ಲೋಕದವರಿಂದ ಅವರಿಗೆ ಸಂಭವಿಸಿದ ಉಪದ್ರಗಳನ್ನು ಉಪಮಾನವಾಗಿ ತೋರಿಸುವದಕ್ಕೆ ಸ್ನಾನವೆಂಬ ಪದವನ್ನು ಪ್ರಯೋಗಿಸಿ ಇದೆ ಎಂದು ನೆನಸುತ್ತಾರೆ. ಸತ್ತವರ ನಿಮಿತ್ತ ಸ್ನಾನ ಹೊಂದುವವರು ಎಂಬುವದು, ಸತ್ತವರ ವಿಷಯ ಸ್ನಾನ ಹೊಂದುವವರೆಂಬ ಅರ್ಥವು. ಅವರು ಹೊಂದಿದ ಸ್ನಾನದಿಂದ ಪುನರುತ್ಥಾನವಾಗಿ ನಿತ್ಯಜೀವವನ್ನು ಹೊಂದುವೆವೆಂಬ ನಿಶ್ಚಯದಿಂದ, ಅವರಿಗಿಂತ ಮುಂಚೆ ಸತ್ತು ಹೋದ ದೇವದಾಸರ ಭಕ್ತಿಯೂ ವಿಶ್ವಾಸವೂ ಸರಿ ಎಂದು ಲೋಕಕ್ಕೆ ಸಾರುವವರ ಹಾಗಿದ್ದರು. ಅವರು ನಾಶವಾದರೆಂದು ಲೋಕದವರು ಹೇಳಲಾಗಿ (೧೮. ವ.) ಅವರು ಬದುಕುತ್ತಾರೆಂದು ಇವರು ತಮ್ಮ ಕ್ರಿಯೆಗಳಿಂದ ಸಾರುವವರ ಹಾಗೆ ಇದ್ದರು.

2. ಯಾವಾಗಲೂ ಗಂಡಾಂತರಕ್ಕೆ ಹೇತುವೆಯಾಗಿದ್ದ ಪೌಲನು ಅನುದಿನವೂ ಮರಣಾಪತ್ತಿಗೊಳಗಾದವನ ಹಾಗೆ ಇದ್ದನು. (೨ ಕೊರಿ. ೪. ೧೧.) ಅದರ ನಿಜವನ್ನು ಕೊರಿಂಥದ ಸಭೆಯವರು ಯೋಚಿಸ ತಕ್ಕ ಒಂದು ವಿಷಯದಿಂದ ಸ್ಥಾಪಿಸುತ್ತಾನೆ. ದೇವರು ಅವರನ್ನು ಗುಣ ಪಡಿಸಿದ್ದರಿಂದ ತನಗೆ ಅನುಗ್ರಹಿಸಿದ ಸಂತೋಷವೇ ಸಾಕ್ಷಿ, ತಾನು ಹೇಳುವ ಈ ಸಂಗತಿಯು ನಿಜವೆಂದು ದೃಢ ಪಡಿಸಿ ಹೇಳುತ್ತಾನೆ.

3. ಕ್ರೈಸ್ತರ ಮೇಲಾದ ಯೋಚನೆಯ ಪ್ರಕಾರ ಇದನ್ನು ಹೇಳದೆ ಮನುಷ್ಯರ ಸಾಧಾರಣ ರೀತಿಯಾಗಿ ಹೇಳುತ್ತಾನೆ. ಅವನು ಒಂದು ವೇಳೆ ನಿಜವಾಗಿ ಎಫೆಸ ಪಟ್ಟಣದಲ್ಲಿ ದುಷ್ಟ ಮೃಗಗಳ ಸಂಗಡ ಹೋರಾಡಿ ಇರುವನು; ಅಥವಾ ಮೃಗಗಳಿಗೆ ಸಮಾನವಾದ ದುಷ್ಟ ಮನುಷ್ಯರ ಸಂಗಡ ಹೋರಾಡಿ ಇರುವನು; ಎಫೆಸದಲ್ಲಿ ಅವನಿಗೆ ಸಂಭವಿಸಿದ ಉಪದ್ರವನ್ನು ಕುರಿತು, ಅಪೊ. ಕ್ರಿ. ೧೮. ೧೮—೨೧; ೧೯. ೧—೨೦. ಹೇಳಿ ಇದೆ. ದೆಮೇತ್ರಿಯನೆಂಬವನಿಂದ ಅವನಿಗೆ ಸಂಭವಿಸಿದ ಆಪತ್ತು ಇದಕ್ಕೆ ಹಿಂದಿನ ಕಾಲದಲ್ಲಿ ಸಂಭವಿಸಿದ್ದು.

4. ಇದು ಎಪಿಕೂರ್ಯರೆಂಬ ಶಾಸ್ತ್ರಿಗಳಲ್ಲಿ ಬಳಿಕೆಯಾದ ಒಂದು ಗಾದೆಯು. ಪರಲೋಕದ ಸಂತೋಷವು ಅವರಿಗೆ ನಿಶ್ಚಯವಿಲ್ಲದ್ದರಿಂದ, ಯೆಶಾಯನ ಪ್ರವಾದನಾವಾಕ್ಯದ ಪ್ರಕಾರ, ಇಹದಲ್ಲಿ ಸುಖದಲ್ಲಿಯೂ ಶರೀರಭೋಗಗಳಲ್ಲಿಯೂ ಮುಣುಗಿ ಹೋಗುವಂತೆ ಸಂಭವಿಸಿತು. ತಪ್ಪಾದ ಯೋಚನೆಯಿಂದ ತಪ್ಪಾದ ನಡತೆಯುಂಟಾಗುವದು. (೩೩. ವ.) ಹಾಗೆಯೇ ಕೊರಿಂಥದ ಸಭೆಯವರಲ್ಲಿ ಉಂಟಾಗಿತ್ತು. (೩೪. ವ.)

5. ಇದು ಸಾಧಾರಣವಾದ ಒಂದು ಗಾದೆಯಾಗಿದೆ. ಗ್ರೀಕ ಕವೀಶ್ವರರಲ್ಲಿ ಒಬ್ಬರಿಬ್ಬರು ಇದನ್ನು ಬರೆದ್ದರಿಂದ ಎಲ್ಲರಿಗೂ ಬಳಿಕೆಯಾಗಿತ್ತು. ಪೌಲನು ತನ್ನ ಕಾರ್ಯಕ್ಕೆ ಅನುಕೂಲವಾಗಿ ಆ ಗಾದೆಯನ್ನು ಇಲ್ಲಿ ಉಪಯೋಗಿಸುತ್ತಾನೆ.

6. ದೇವರ ಬಲವನ್ನು ಅರಿಯದೆ, ಪುನರುತ್ಥಾನವಿಲ್ಲವೆಂದು ಹೇಳುವವರ ಕೆಟ್ಟ ಸಂಭಾಷಣೆಗಳಿಂದ ಉಂಟಾಗುವ ಪಾಪದ ಮರುಳನ್ನು ಬಿಟ್ಟು ಬಿಟ್ಟು, ತೇರಿದ ಬುದ್ಧಿಯುಳ್ಳವರಾಗಿ ನಡಿಯ ಬೇಕು. (ಮತ್ತಾ. ೨೨. ೨೯. ವಚನದ ವ್ಯಾಖ್ಯಾನ ನೋಡ ಬೇಕು.) ಅವಿಶ್ವಾಸವು ಸನ್ಮಾರ್ಗವನ್ನು ಕೆಡಿಸಿ, ದುರ್ಮಾರ್ಗವನ್ನು ಉಂಟು ಮಾಡುವದು. ದೇವರ ವಿಷಯವಾದ ಅಜ್ಞಾನವೇ ಅವಿಶ್ವಾಸಕ್ಕೂ ದುರ್ಮಾರ್ಗಕ್ಕೂ ಕಾರಣವು. ಇಂಥಾ ಅಜ್ಞಾನವನ್ನು ಕುರಿತು ಕೊರಿಂಥದ ಸಭೆಯವರು ಮಾತ್ರವಲ್ಲ ಎಲ್ಲರೂ ನಾಚಿಕೆ ಪಡ ತಕ್ಕದ್ದೇ.



೩೬, ೩೭ ವನು. ಮೂಢನೇ, ನೀನು [1]ಬಿತ್ತುವಂಥಾದ್ದು [2]ಸತ್ತರೆ ಹೊರ್ತು, ಬದುಕಿಸಲ್ಪಡದು. ಮತ್ತು ನೀನು
ಬಿತ್ತುವಂಥಾದ್ದು, ಉಂಟಾಗುವ ಶರೀರವನ್ನಲ್ಲ, ಬರೇ ಕಾಳನ್ನೇ, ಒಂದು ವೇಳೆ ಗೋಧಿಯಾಗಲಿ, ಮಿಕ್ಕಾ
೩೮ ದವುಗಳಲ್ಲಿ ಒಂದು ಆಗಲಿ, ಬಿತ್ತುತ್ತೀ. ಆದರೆ ದೇವರು ತನ್ನ ಮನಸ್ಸಿಗೆ ಬಂದ ಹಾಗೆ ಅದಕ್ಕೆ ಶರೀರವನ್ನು—
ಒಂದೊಂದು ಬೀಜಕ್ಕೆ [3]ಸ್ವಂತ ಶರೀರವನ್ನು—ಕೊಡುತ್ತಾನೆ.
೩೯ ಎಲ್ಲಾ ಮಾಂಸವು ಒಂದೇ ಮಾಂಸವಲ್ಲ. ಆದರೆ ಮನುಷ್ಯನ ಮಾಂಸವು ಬೇರೆ, ಪಶುಗಳ ಮಾಂಸವು
೪೦ ಬೇರೆ, ಮೀನುಗಳದು ಬೇರೆ, ಪಕ್ಷಿಗಳದು ಬೇರೆ. ಇದಲ್ಲದೆ, [4]ಆಕಾಶದ ಶರೀರಗಳು ಉಂಟು, ಭೂಮಿಯ
೪೧ ಶರೀರಗಳು ಉಂಟು; ಆದರೆ ಆಕಾಶದವುಗಳ ಮಹಿಮೆ ಬೇರೆ, ಭೂಮಿಯವುಗಳದು ಬೇರೆ. ಸೂರ್ಯನ
ಮಹಿಮೆ ಬೇರೆ, ಚಂದ್ರನ ಮಹಿಮೆ ಬೇರೆ, ನಕ್ಷತ್ರಗಳ ಮಹಿಮೆ ಬೇರೆ; ಯಾಕಂದರೆ, ನಕ್ಷತ್ರಕ್ಕೆ ನಕ್ಷತ್ರ
ಮಹಿಮೆಯಲ್ಲಿ ಹೆಚ್ಚು ಕಡಿಮೆ ಆಗಿದೆ.
೪೨ ಹಾಗೆಯೇ ಸತ್ತವರ ಪುನರುತ್ಥಾನವು. ಲಯವಾಗಿ ಬಿತ್ತಲ್ಪಡುವದು, ನಿರ್ಲಯವಾಗಿ ಎಬ್ಬಿಸಲ್ಪಡುವದು;
೪೩ ಅವಮಾನದಲ್ಲಿ ಬಿತ್ತಲ್ಪಡುವದು, ಮಹಿಮೆಯಲ್ಲಿ ಎಬ್ಬಿಸಲ್ಪಡುವದು; ಅಶಕ್ತಿಯಲ್ಲಿ ಬಿತ್ತಲ್ಪಡುವದು, ಬಲ
೪೪ ದಲ್ಲಿ ಎಬ್ಬಿಸಲ್ಪಡುವದು; [5]ಪ್ರಾಣಭಾವದ ಶರೀರವು ಬಿತ್ತಲ್ಪಡುವದು, ಆತ್ಮಭಾವದ ಶರೀರವು ಎಬ್ಬಿಸಲ್ಪ
೪೫ ಡುವದು. ಪ್ರಾಣಭಾವದ ಶರೀರ ಉಂಟು, ಆತ್ಮಭಾವದ ಶರೀರ ಉಂಟು. ಮತ್ತು ಹೀಗೆ ಬರೆದದೆ—
ಮೊದಲನೇ ಮನುಷ್ಯನಾದ ಆದಮನು ಬದುಕುವ ಪ್ರಾಣವಾದನು; (ಉತ್ಪ. ೨. ೭.) ಕಡೇ ಆದಮನು
೪೬ [6]ಬದುಕಿಸುವ ಆತ್ಮವಾದನು. ಆದರೆ ಆತ್ಮಭಾವದ್ದು ಮೊದಲನೇದಲ್ಲ, ಪ್ರಾಣಭಾವದ್ದೇ; ತರುವಾಯ
೪೭ ಆತ್ಮಭಾವದ್ದು. ಮೊದಲನೇ ಮನುಷ್ಯನು ಭೂಮಿಯಿಂದ ಉಂಟಾದವನಾಗಿ ಮಣ್ಣಿನವನು; ಎರಡನೇ ಮ
೪೮ ನುಷ್ಯನು ಪರಲೋಕದಿಂದ ಬಂದ ಕರ್ತನು. ಮಣ್ಣಿನವನು ಎಂಥವನೋ ಅಂಥವರೇ ಮಣ್ಣಿನವರು; ಪರ

---

1. ಪುನರುತ್ಥಾನದ ಉಪದೇಶವನ್ನು ನಿರೂಪಿಸಿ, ಪುನರುತ್ಥಾನವಾಗುವ ವಿಧವನ್ನು ಹೇಳಿ ಇದೆ. ಪುನರುತ್ಥಾನವು ನಿಜವಾದರೆ, ಸತ್ತವರು ಹ್ಯಾಗೆ ಏಳುವರು? ಎಂಥಾ ಶರೀರವುಳ್ಳವರಾಗಿ ಏಳುವರು? ಎಂದು ಎದುರಿಯು ಆಕ್ಷೇಪಿಸುವದಾಗಿ ಪೌಲನು ಭಾವಿಸಿ ಕೊಂಡು, ಅದಕ್ಕೆ ಸಮಾಧಾನ ಹೇಳುತ್ತಾನೆ. ಬುದ್ಧಿಹೀನನೇ, ನೀನು ಆಗಾಗ್ಯೆ ಭೂಮಿಯಲ್ಲಿ ಬಿತ್ತುವ ಬೀಜವೇ ಇದಕ್ಕೆ ದೃಷ್ಟಾಂತವು. ಮೇಲಾದ ಜೀವ ಉಂಟಾಗುವದಕ್ಕೆ, ಹೀನವಾದ ಜೀವ ನಾಶವಾಗುವದು ಅವಶ್ಯವೆಂದು ಬೀಜದ ದೃಷ್ಟಾಂತದಿಂದ ತಿಳಿದು ಕೊಳ್ಳ ಬಹುದಲ್ಲವೇ? ಅನ್ನುತ್ತಾನೆ.

2. ಜೀವವಿಲ್ಲದ ಶರೀರವು ಮಣ್ಣಿನಲ್ಲಿಡಲ್ಪಡುವಾಗ ಮಣ್ಣಾಗಿ ನಾಶವಾಗುತ್ತದಲ್ಲ? ಎಂಬುವದೇ ಆಕ್ಷೇಪಣೆ. ಅದಕ್ಕೆ ಬೀಜವು ಮಣ್ಣಿನಲ್ಲಿ ಕೊಳೆತು ನಾಶವಾದರೂ, ಅದು ಪೂರ್ಣವಾಗಿ ಕೆಡುವದಿಲ್ಲ; ಅದು ಜೀವ ಹೊಂದುವದಕ್ಕಾಗಿಯೇ ಕೊಳೆಯುತ್ತದೆ ಎಂಬುವದೇ ಸಮಾಧಾನವು. (ಯೋಹಾ. ೧೨. ೨೪. ವಚನದ ವ್ಯಾಖ್ಯಾನ ನೋಡ ಬೇಕು.)

3. ಜೀವಕೋಟಿಗಳೆಲ್ಲಾ ನಾನಾ ಪ್ರಕಾರ ಉತ್ಪತ್ತಿಯಾಗಿವೆ ಎಂದೂ, ನಾನಾ ಗುರಿಗಳನ್ನು ಈಡೇರಿಸುತ್ತವೆ ಎಂದೂ, ಲೋಕದ ಸೃಷ್ಟಿಯಿಂದ ತಿಳಿದು ಕೊಳ್ಳ ಬಹುದು. (೩೮—೪೧. ವ.) ಆದದರಿಂದ ಸಾಯುವ ದೇಹಕ್ಕೂ, ಸಾಯದ ದೇಹಕ್ಕೂ ಇರುವ ವ್ಯತ್ಯಾಸದಿಂದ ಪುನರುತ್ಥಾನವಿಲ್ಲವೆಂದು ಹೇಳುವದು ಸರಿಯಲ್ಲ.

4. ಆಕಾಶದ ಶರೀರಗಳು ಎಂಬುವದು, ಸೂರ್ಯ ಚಂದ್ರ ನಕ್ಷತ್ರಗಳನ್ನು ಅಥವಾ ಪರಮ ಸೈನ್ಯಗಳಾದ ದೂತರನ್ನು ಕುರಿತದ್ದು. (೪೪. ವ.) ಭೂಮಿಯ ಶರೀರಗಳಲ್ಲಿ ನಾನಾ ಬಗೆ ಉಂಟು. ಆಕಾಶದ ಶರೀರಗಳಲ್ಲಿಯೂ ನಾನಾ ಬಗೆಯುಂಟು. ಭೂಮಿಯ ಶರೀರಗಳ ಮಹಿಮೆ ಬೇರೆ, ಆಕಾಶದ ಶರೀರಗಳ ಮಹಿಮೆ ಬೇರೆ. ನಿರ್ಜೀವವಾದ ಅಂದವಿಲ್ಲದ ಬೀಜವನ್ನು ಮಣ್ಣಿನಲ್ಲಿ ಬಿತ್ತಿದರೆ, ಅಲಂಕಾರವಾದ ಗಿಡವಾಗುವ ಪ್ರಕಾರ, ಕೇವಲ ಪ್ರಾಣಭಾವದ ಶರೀರವು ಮಣ್ಣಿನಲ್ಲಿ ಬಿತ್ತಲ್ಪಟ್ಟರೆ, ಅಲಂಕಾರವೂ ಮಹಿಮೆಯೂ ಉಳ್ಳ ಶರೀರವಾಗಿ ಏಳುವದು. ಬಿತ್ತಿದ ಬೀಜದಿಂದಲೇ ಗಿಡವಾಗುವ ಪ್ರಕಾರ, ಮಣ್ಣಿನಲ್ಲಿ ಹೂಣಲ್ಪಟ್ಟ ಶರೀರವೇ, ಮಹಿಮೆಯುಳ್ಳ ವಜ್ರಕಾಯವಾಗಿ ಏಳುವದು. ಇದೆಲ್ಲಾ ಕ್ರಿಸ್ತನ ಬಲದಿಂದಲೇ ಆಗುವದು.

5. ಬೀಜ, ಗಿಡ, ಮೃಗ, ಮೀನು, ಪಕ್ಷಿ, ಸೂರ್ಯ, ಚಂದ್ರ, ನಕ್ಷತ್ರ ಮುಂತಾದ ಸರ್ವಸೃಷ್ಟಿಗಳೂ ಪುನರುತ್ಥಾನವುಂಟೆಂದು ಸಾರುವ ಹಾಗಿದೆ. ನಾಶವಾಗುವಂಥ, ಅವಮಾನವಾದಂಥ, ಬಲಹೀನವಾದಂಥ ಶರೀರವು ಬಿತ್ತಲ್ಪಡುವದು. ನಾಶವಾಗದ ಮಹಿಮೆಯೂ ಬಲವೂ ಉಳ್ಳದ್ದಾಗಿ ಏಳುವದು. ಈಗ ಪ್ರಾಣಭಾವದ ಶರೀರವು ಬಿತ್ತಲ್ಪಡುವದು, ಆತ್ಮಭಾವದ ಶರೀರವು ಎಬ್ಬಿಸಲ್ಪಡುವದು. ಪ್ರಾಣಭಾವದ ಶರೀರವು ಅಂದರೆ ಮಾಂಸವಾದ ಶರೀರವು. ಈ ಶರೀರಕ್ಕೆ ಅನೇಕ ಕೊರತೆಗಳುಂಟು. ಪರಮ ಪದವಿಗೆ ತಕ್ಕ ಆತ್ಮಭಾವದ ಶರೀರಕ್ಕೆ ಕೊರತೆ ಏನೂ ಇಲ್ಲ.

6. ಆದಮನಿಗೆ ಮಣ್ಣಿನಿಂದುಂಟಾದದ್ದೂ, ಮಣ್ಣಿಗೆ ತಕ್ಕದ್ದೂ ಆದ ಮಾಂಸಸ್ವಭಾವವಿತ್ತು. (ಉತ್ಪ. ೨. ೭.) ರಕ್ಷಕನಾದ ಕ್ರಿಸ್ತನು ಆತ್ಮದ ಸ್ವಭಾವವೂ, ಜೀವಿಸ ಮಾಡುವ ಶಕ್ತಿಯೂ ಉಳ್ಳವನಾಗಿ (ಯೋಹಾ. ೫. ೨೧, ೨೬.) ಪರಲೋಕದಿಂದ ಉದ್ಭವಿಸಿದ ಮೇಲಾದ ಕರ್ತನು. (೪೭. ವ. ಯೋಹಾ. ೩. ೧೩.) ಯೆಹೂದ್ಯರು ತಮ್ಮ ಮೆಸ್ಸೀಯನಾದ ಲೋಕರಕ್ಷಕನನ್ನು ಎರಡನೇ ಆದಮನೆಂದು ಹೇಳುವರು.

೪೯ ಲೋಕದವನು ಎಂಥವನೋ, [1]ಅಂಥವರೇ ಪರಲೋಕದವರು. ಮತ್ತು ಮಣ್ಣಿನವನ ಹೋಲಿಕೆಯನ್ನು
ವಹಿಸಿದ ಹಾಗೆ, ಪರಲೋಕದವನ ಹೋಲಿಕೆಯನ್ನು ಸಹ ವಹಿಸುವೆವು.
೫೦ ಆದರೆ, ಸಹೋದರರೇ, [2]ನಾನು ಹೇಳುವದೇನಂದರೆ—ರಕ್ತ ಮಾಂಸಗಳು ದೇವರ ರಾಜ್ಯವನ್ನು ಸ್ವತಂತ್ರಿಸಿ
೫೧ ಕೊಳ್ಳಲಾರವು; ಮತ್ತು ಲಯವು ನಿರ್ಲಯವನ್ನು ಸ್ವತಂತ್ರಿಸಿ ಕೊಳ್ಳದು. ಇಗೋ, [3]ಮರ್ಮವನ್ನು ನಿಮಗೆ
೫೨ ಹೇಳುತ್ತೇನೆ—ಎಲ್ಲರು ನಿದ್ದೆ ಹೋಗೆವು; ಆದರೆ ಕ್ಷಣದಲ್ಲಿ, ರೆಪ್ಪೆ ಬಡಿಯುವದರಲ್ಲಿ, [4]ಕಡೇ ತುತೂರಿಯಲ್ಲಿ,
ಎಲ್ಲರು ಮಾರ್ಪಡುವೆವು. ಯಾಕಂದರೆ ತುತೂರಿಯು ಧ್ವನಿಯಾಗುವದು; ಆಗ ಸತ್ತವರು ನಿರ್ಲಯ
೫೩ ವಾಗಿ ಎಬ್ಬಿಸಲ್ಪಡುವರು; ಮತ್ತು ನಾವು ಮಾರ್ಪಡುವೆವು. ಯಾಕಂದರೆ ಈ ಲಯವಾದದ್ದು ನಿರ್ಲಯ
ವನ್ನು ಧರಿಸಿ ಕೊಳ್ಳ ಬೇಕು; ಮತ್ತು ಈ ಮರ್ತ್ಯವಾದದ್ದು ಅಮರತ್ವವನ್ನು ಧರಿಸಿ ಕೊಳ್ಳ ಬೇಕು.
೫೪ ಆದರೆ ಈ ಲಯವಾದದ್ದು ನಿರ್ಲಯವನ್ನು ಧರಿಸಿ ಕೊಂಡಾಗಲೂ, ಈ ಮರ್ತ್ಯವಾದದ್ದು ಅಮರತ್ವವನ್ನು
[5]ಧರಿಸಿ ಕೊಂಡಾಗಲೂ, ಬರೆದ ಮಾತು ಉಂಟಾಗುವದು. ಏನಂದರೆ, ಮರಣವು ಜಯದಲ್ಲಿ ನುಂಗಲ್ಪ
೫೫ ಟ್ಟದೆ. (ಯೆಶಾ. ೨೫. ೮.) ಮರಣವೇ, ನಿನ್ನ ಕೊಂಡಿಯು ಎಲ್ಲಿ? [6]ಪಾತಾಳವೇ, ನಿನ್ನ ಜಯವು ಎಲ್ಲಿ?
೫೬ (ಹೊಶೇ. ೧೩. ೧೪.) ಮರಣದ ಕೊಂಡಿಯು ಪಾಪವೇ; [7]ಪಾಪದ ಬಲವು ನ್ಯಾಯಪ್ರಮಾಣವೇ.
೫೭ ಆದರೆ ನಮ್ಮ ಕರ್ತನಾದ ಯೇಸು ಕ್ರಿಸ್ತನ ಮೂಲವಾಗಿ ನಮಗೆ ಜಯವನ್ನು ಕೊಡುವ ದೇವರಿಗೆ
ಸ್ತೋತ್ರವು.
೫೮ ಆದದರಿಂದ, ನನ್ನ ಪ್ರಿಯ ಸಹೋದರರೇ, ನಿಮ್ಮ ಪ್ರಯಾಸವು ಕರ್ತನಲ್ಲಿ [8]ವ್ಯರ್ಥವಲ್ಲವೆಂದು ತಿಳಿದು

1. ಮನುಷ್ಯರ ರಕ್ಷಣೆಯ ವಿಷಯದಲ್ಲಿ ದೈವಿಕ ಕ್ರಮವನ್ನು ನೋಡ ಬಹುದು. ೧ನೇದು, ಜನ್ಮಶರೀರವು ಮಣ್ಣಿನಿಂದ ಉಂಟಾಯಿತು. ಮನುಷ್ಯನೇ! ನೀನು ನಿನ್ನನ್ನು ಮಣ್ಣು ಎಂದು ನೆನಸಿ ದೀನಭಾವವಾಗಿ ನಡೆದುಕೋ. ೨ನೇದು, ಆತ್ಮಸಮ್ಮಂಧವಾದ ಶರೀರ ಉಂಟಾಗುವದು. ಮಹಿಮೆಯ ಕರ್ತನು ಇಂಥಾ ಶರೀರವನ್ನು ವಹಿಸಿ ಕೊಂಡದ್ದರಿಂದ, ಆತನನ್ನು ಹೊಂದಿ ಕೊಂಡವರೆಲ್ಲರು ಆತನ ಸಾರೂಪ್ಯವನ್ನು ಹೊಂದಿ ಎಂದೆಂದಿಗೂ ಪ್ರಕಾಶಿಸುವರು. (೧ ಯೋಹಾ. ೩. ೨. ಫಿಲಿ. ೩. ೨೦, ೨೧. ವಚನಗಳ ವ್ಯಾಖ್ಯಾನಗಳನ್ನು ನೋಡ ಬೇಕು.)

2. ನಾನು ನಿಮಗೆ ಒಂದು ಮುಖ್ಯ ಸಂಗತಿಯನ್ನು ಹೇಳುತ್ತೇನೆ. ಈ ಮಾರ್ಪಡುವಿಕೆ ಅವಶ್ಯವಾಗಿರುವದರಿಂದ ಇದು ನಿಶ್ಚಯವಾಗಿ ಆಗುವದು. ರಕ್ತ ಮಾಂಸಗಳುಳ್ಳದ್ದಾಗಿಯೂ, ನಾಶವಾಗುವಂಥಾದ್ದಾಗಿಯೂ ಇರುವ ಮನುಷ್ಯದೇಹವು ಪರಮಪದವಿಗೆ ಸ್ವಲ್ಪವಾದರೂ ತಕ್ಕದ್ದಲ್ಲ. ಆದದರಿಂದ ನಾಶವಾಗದ ಶರೀರದಿಂದ ಎಬ್ಬಿಸಲ್ಪಡ ಬೇಕಾದದ್ದು ದೈವಸಂಕಲ್ಪಕ್ಕೆ ಅವಶ್ಯವಾಗಿ ಇರುತ್ತದೆ.

3. ಥೆಸ್ಸಲೊನೀಕ ಸಭೆಯವರಿಗೆ ಪ್ರಕಟಿಸಲ್ಪಟ್ಟದ್ದ ಈ ರಹಸ್ಯವು (೧ ಥೆಸ್ಸ. ೪. ೧೫—೧೭.) ಕೊರಿಂಥದ ಸಭೆಯವರಿಗೆ ತಿಳಿಯದೆ ಇದ್ದದರಿಂದ ಈಗ ಅವರಿಗೆ ಈ ಸಂಗತಿ ತಿಳಿಸಲ್ಪಟ್ಟಿತು.

4. ಯೆಹೂದ್ಯರ ಹಬ್ಬಗಳಲ್ಲಿ ಜನರನ್ನು ಕೂಡಿಸುವದಕ್ಕೆ ತುತೂರಿ ಊದುವ ಪದ್ಧತಿ ಇತ್ತು. (ಅಂಕೆ. ೧೦. ೧—೧೦.) ಅದೇ ಪ್ರಕಾರ ಕಡೆಯಲ್ಲಿ ಲೋಕದವರೆಲ್ಲರು ಒಂದಾಗಿ ಕೂಡಿ ಬರುವದಕ್ಕೆ ತುತೂರಿ ಊದಲ್ಪಡುವದೆಂದು ಹೇಳಿ ಇದೆ. ಈ ತುತೂರಿಯು ಧ್ವನಿಗೈಯುವಾಗ ಇದರ ಶಬ್ದದಿಂದ ಪರಲೋಕ ಭೂಲೋಕ ಪಾತಾಳ ಲೋಕಗಳು ಅದರುವವು. ಸಭೆಯ ಶತ್ರುಗಳು ಅಪಜಯ ಹೊಂದಿದ್ದಕ್ಕೂ, ಸಭೆ ಎಂಬ ಮದಲಗಿತ್ತಿಗೂ ಮದಲಿಂಗನಾದ ಕ್ರಿಸ್ತನಿಗೂ ಉಂಟಾಗುವ ಆತ್ಮಿಕ ವಿವಾಹಕ್ಕೂ ಅದು ಗುರುತಾಗಿರುವದು. ಒಂದೇ ಕ್ಷಣದಲ್ಲಿ, ಕಣ್ಣುರೆಪ್ಪೆ ಬಡಿಯುವಷ್ಟರಲ್ಲಿ ಈ ಮಾರ್ಪಡುವಿಕೆ ಉಂಟಾಗುವದು.

5. ಇಸ್ರಯೇಲ್ಯರು ಸೌಖ್ಯ ಹೊಂದುವರೆಂದೂ, ಕೃಪೆಯ ಒಡಂಬಡಿಕೆಯಾದ ಸುವಾರ್ತೆಯಿಂದ ಸಮಸ್ತ ಜನರಿಗೂ ಆರೋಗ್ಯವೂ ಆತ್ಮದ ಜೀವವೂ ಉಂಟಾಗುವವೆಂದೂ, ಹೇಳಿದ ಪೂರ್ವಿಕ ಪ್ರವಾದನೆಗಳು (ಹೊಶೇ. ೧೩. ೧೪. ಯೆಶಾ. ೨೫. ೮.) ಆ ಕಾಲದಲ್ಲಿ ಪೂರ್ಣವಾಗಿ ಈಡೇರುವವು. (ಯೆಶಾ. ೨೬. ೧೯. ಎಜೇಕಿ. ೩೭. ೧೩.)

6. ಕ್ರಿಸ್ತನ ದಾಸರು ನಿರ್ಲಯವಾದ ಶರೀರಗಳುಳ್ಳವರಾಗಿ ಏಳುವಾಗ, ಮರಣದ ಕೊಂಡಿಯೂ, ಪಾತಾಳದ ಜಯವೂ ಇಲ್ಲದೆ ಹೋಗುವವು.

7. ಪಾಪವಿಲ್ಲದಿದ್ದರೆ, ಮರಣಕ್ಕೆ ಕೊಂಡಿಯೂ ವಿಷವೂ ಇರದು. ನ್ಯಾಯಪ್ರಮಾಣವಿಲ್ಲದಿದ್ದರೆ, ಪಾಪದ ಬಲವು ತೋರದು. (ರೋಮಾ. ೭. ೭—೧೩. ವಚನಗಳ ವ್ಯಾಖ್ಯಾನ ನೋಡ ಬೇಕು.) ಈ ಕ್ರೂರ ಶತ್ರುವನ್ನು ಜಯಿಸಿ, ಜಯಕೀರ್ತನೆಯಿಂದ ಸಮಾಧಾನವಾಗಿ ಸಾಯುವದಕ್ಕೆ ಯೇಸು ಕರ್ತನಿಗೆ ಶರಣಾಗತರಾಗುವದೇ ಉಪಾಯವು. ಆತನೇ ಮರಣವನ್ನು ಜಯಿಸಿ, ಸುವಾರ್ತೆಯ ಮೂಲಕವಾಗಿ ಜೀವವನ್ನೂ ನಿರ್ಲಯವನ್ನೂ ತೋರ ಮಾಡಿದವನು. ಆತನ ಮೂಲಕವಾಗಿ ನಮಗೆ ಜಯವನ್ನು ಪಾಲಿಸಿದ ದೇವರಿಗೆ ಅನಂತ ಸ್ತೋತ್ರವು.

8. ನೀವು ಸತ್ತರೂ, ಕ್ರಿಸ್ತನಿಗೋಸ್ಕರ ನೀವು ಪಡುವ ಪ್ರಯಾಸಗಳಿಗೆ ತಕ್ಕ ಫಲವು, ನೀತಿವಂತರ ಪುನರುತ್ಥಾನದಲ್ಲಿ ನಿಮಗೆ ಕೃಪೆಯಿಂದ ಕೊಡಲ್ಪಡುವದೆಂದು ನಿಶ್ಚಯಿಸಿ ಕೊಂಡು, ಎಲ್ಲಾ ಪರಿಶುದ್ಧ ಸೇವೆಗಳಲ್ಲಿಯೂ ಸತ್ಕ್ರಿಯೆಗಳಲ್ಲಿಯೂ ಹೆಚ್ಚುವವರಾಗಿರ್ರಿ, ಅನ್ನುತ್ತಾನೆ. ಈ ಕಟ್ಟಳೆಯ ಹಾಗೆ ನಡಿಯುವದಕ್ಕೆ ದೇವರ ಕೃಪೆಯನ್ನು ಬೇಡಿ ಕೊಳ್ಳುವ.



ಕೊಂಡು, ಸ್ಥಿರವಾದವರಾಗಿಯೂ, ಕದಲದವರಾಗಿಯೂ, ಕರ್ತನ ಕೆಲಸದಲ್ಲಿ ಯಾವಾಗಲೂ ಹೆಚ್ಚುವವ
ರಾಗಿಯೂ ಇರ್ರಿ.

ಯೆರೂಸಲೇಮಿನಲ್ಲಿರುವ ಬಡ ಕ್ರೈಸ್ತರಿಗೆ ಧರ್ಮಸಹಾಯ ಮಾಡಲಾಜ್ಞಾಪಿಸಿದ್ದು;
ವಂದನೋಕ್ತಿಗಳಿಂದ ಪತ್ರಿಕೆಯನ್ನು ಮುಗಿಸಿದ್ದು.

16. ಆದರೆ [1]ಪರಿಶುದ್ಧರಿಗೋಸ್ಕರ [2]ಕೂಡಿಸುವದನ್ನು ಕುರಿತು ಗಲಾತ್ಯದ ಸಭೆಗಳಿಗೆ ಹ್ಯಾಗೆ ನೇಮಿಸಿದೆನೋ,
೨ ಹಾಗೆಯೇ ನೀವೂ ಮಾಡಿರಿ. ನಾನು ಬಂದಾಗ, ಕೂಡಿಸುವಿಕೆಗಳು ಆಗದ ಹಾಗೆ, [3]ವಾರಗಳ ಮೊದ
ಲನೇ ದಿವಸದಲ್ಲಿ ನಿಮ್ಮಲ್ಲಿ ಒಬ್ಬೊಬ್ಬನು ತನ್ನ ಬಾಳಿನ ಪ್ರಕಾರ ತನ್ನ ಬಳಿಯಲ್ಲಿ ಇಟ್ಟು ಕೊಂಡು, ಮಡಗಲಿ.
೩ ಮತ್ತು ನಾನು ಶೇರಿದಾಗ, ನೀವು ಪತ್ರಿಕೆಗಳಿಂದ ಯಾರನ್ನು ಯೋಗ್ಯರೆಂದು ಹೇಳುವಿರೋ, [4]ಅವರನ್ನು
೪ ನಿಮ್ಮ ಉಪಕಾರವನ್ನು ಯೆರೂಸಲೇಮಿಗೆ ತಕ್ಕೊಂಡು ಹೋಗ ಕಳುಹಿಸುವೆನು. ಮತ್ತು [5]ನಾನು ಸಹ
ಪಯಣ ಮಾಡುವದಕ್ಕೆ ತಕ್ಕದ್ದಾಗಿದ್ದರೆ, ನನ್ನ ಸಂಗಡ ಪಯಣ ಮಾಡುವರು.
೫ ಇದಲ್ಲದೆ, [6]ಮಕೆದೋನ್ಯವನ್ನು ಹಾದು ಹೋಗುವಾಗ, ನಿಮ್ಮ ಬಳಿಗೆ ಬರುವೆನು. ಯಾಕಂದರೆ ಮಕೆ
೬ ದೋನ್ಯವನ್ನು ಹಾದು ಹೋಗುತ್ತೇನೆ. ಮತ್ತು ನಿಮ್ಮ ಬಳಿಯಲ್ಲಿ ಒಂದು [7]ವೇಳೆ ಇಳುಕೊಳ್ಳುವೆನು;
ಇಲ್ಲವೆ ಎಲ್ಲಿಗೆ ಪಯಣ ಮಾಡಿದರೂ, ಅಲ್ಲಿಗೆ ನೀವು ನನ್ನನ್ನು ಮುಂದೆ ಕಳುಹಿಸುವ ಹಾಗೆ, ಹಿಮಕಾಲ
೭ ದಲ್ಲಿ ವಾಸ ಮಾಡುವೆನು. ಯಾಕಂದರೆ ಈಗಲೇ [8]ಮಧ್ಯ ಮಾರ್ಗದಲ್ಲಿ ನಿಮ್ಮನ್ನು ನೋಡ ನನಗೆ ಮನ
ಸ್ಸಿಲ್ಲ; ಆದರೆ ಕರ್ತನು ಅಪ್ಪಣೆ ಕೊಟ್ಟರೆ, ನಿಮ್ಮ ಬಳಿಯಲ್ಲಿ ಸ್ವಲ್ಪ ಕಾಲ ಇರುವದಕ್ಕೆ ನಿರೀಕ್ಷಿಸುತ್ತೇನೆ.

1. ಈ ಸಂಧಿಯಲ್ಲಿ ಬಡ ಕ್ರೈಸ್ತರಿಗೆ ಮಾಡ ತಕ್ಕ ಧರ್ಮಸಹಾಯವನ್ನು ಕುರಿತೂ, (೧—೪. ವ.) ಪೌಲನು ತಾನು ಅವರ ಬಳಿಗೆ ಬರ ಯೋಚನೆಯುಳ್ಳವನಾಗಿರುವದನ್ನು ಕುರಿತೂ, (೫—೯. ವ.) ತಿಮೊಥೆಯನನ್ನು ಪಕ್ಷವಾಗಿ ನಡಿಸ ಬೇಕೆಂಬುವದನ್ನು ಕುರಿತೂ, (೧೦, ೧೧. ವ.) ಪೌಲನು ಕೊರಿಂಥಕ್ಕೆ ಕಳುಹಿಸ ಯೋಚಿಸಿದ್ದ ಅಪೊಲ್ಲೋಸನನ್ನು ಕುರಿತೂ, (೧೨. ವ.) ದೃಢವಾಗಿಯೂ ಪ್ರೀತಿಯಾಗಿಯೂ ನಡೆದು ಕೊಂಡು, ದೇವರ ಸೇವಕರನ್ನು ಘನವಾಗಿ ಎಣಿಸ ಬೇಕೆಂಬುವದನ್ನು ಕುರಿತೂ, (೧೩—೧೮. ವ.) ಬೇರೊಬ್ಬರು ಹೇಳುವ ವಂದನೆಗಳನ್ನು ಕುರಿತೂ, (೧೯, ೨೦. ವ.) ಪೌಲನ ಸ್ವಂತ ಕೈಯಿಂದ ಬರೆದ ವಂದನೆಗಳನ್ನು ಕುರಿತೂ, (೨೧—೨೪. ವ.) ಹೇಳಿ ಇದೆ.

2. ಪೌಲನು ಶ್ರೇಷ್ಠ ಉಪದೇಶಗಳಾದ ಪುನರುತ್ಥಾನವನ್ನೂ ಪರವನ್ನೂ ಕುರಿತು ಹೇಳಿದ ತರುವಾಯ, ಸಂಗಡಲೇ ಕ್ರೈಸ್ತರಿಗೆ ತಕ್ಕ ಧರ್ಮಕೆಲಸವನ್ನು ಕುರಿತು ಬರಿಯುತ್ತಾನೆ. ಈ ಧರ್ಮಹಣವನ್ನು ಕುರಿತು ಮುಂಚಿತಾಗಿಯೇ ಅವರಿಗೆ ಹೇಳಿ ಇದ್ದನು. (ಗಲಾ. ೨. ೧೦.) ಹತ್ತರಲ್ಲಿ ಒಂದನ್ನು ಕರ್ತನಿಗೆ ಕೊಡ ಬೇಕೆಂಬುವದು ಹಳೇ ಒಡಂಬಡಿಕೆಯ ಕಟ್ಟಳೆಯಾಗಿತ್ತು. ಹಾಗೆಯೇ ಅಬ್ರಹಾಮನು ಮೆಲ್ಕೀಚೆದೆಕನಿಗೆ ದಶಮ ಭಾಗವನ್ನು ಕೊಟ್ಟನು. (ಉತ್ಪ. ೧೪. ೨೦.) ಯಾಕೋಬನು ಹತ್ತರಲ್ಲಿ ಒಂದನ್ನು ಕೊಡುವೆನೆಂದು ಹರಿಕೆ ಮಾಡಿ ಕೊಂಡನು. (ಉತ್ಪ. ೨೮. ೨೨.) ಮೋಶೆಯ ನ್ಯಾಯಪ್ರಮಾಣದಲ್ಲಿಯೂ ಹೀಗೆಯೇ ಕಟ್ಟಳೆಯುಂಟು. ಕಡೇ ಪ್ರವಾದಿಯಾದ ಮಲಕೀಯನು ಇದನ್ನು ಕುರಿತು ಹೇಳಿದ್ದಾನೆ. (ಮಲಕಿ. ೩. ೮—೧೦.) ಕ್ರಿಸ್ತನು ಸಹ ಇದಕ್ಕೆ ಸಮ್ಮತಿಸಿ ಮಾತಾಡುತ್ತಾನೆ. (ಮತ್ತಾ. ೨೩. ೨೩.) ಹೀಗೆ ಮಾಡುವವರಿಗೆ ದೇವರ ಆಶೀರ್ವಾದ ಸಂಪೂರ್ಣವಾಗಿ ಉಂಟಾಗುವದು. ಈ ಕಾಲದ ಕ್ರೈಸ್ತರಲ್ಲಿ ಇದು ಬಹು ಅಪರೂಪ. ಇದು ಬಹಳ ಕೊರತೆಯಾದ ಸಂಗತಿ.

3. (ಅಪೊ. ಕ್ರಿ. ೨೦. ೭. ವಚನದ ವ್ಯಾಖ್ಯಾನ ನೋಡ ಬೇಕು.) ಆ ದಿವಸದಲ್ಲಿ ಕರ್ತನು ಪುನರುತ್ಥಾನವಾದ ಅತಿಶಯವನ್ನು ನೆನಸುವ ಭಕ್ತರು, ಕೊರತೆ ಪಡುವ ಆತನ ಭಕ್ತರಿಗೆ ತಮ್ಮಿಂದಲಾಗುವ ಸಹಾಯವನ್ನು ಮಾಡದೆ ಇರರು. ಪ್ರಸಂಗಕ್ಕೆ ಅಭ್ಯಂತರವಾಗದಂತೆ ಈ ಧರ್ಮಹಣವನ್ನು ಪ್ರತಿ ವಾರದಲ್ಲಿಯೂ ಕೂಡಿಸಿ ಆಯತ್ತವಾಗಿ ಇಟ್ಟಿರ ಬೇಕೆಂದು ಪೌಲನು ಹೇಳುತ್ತಾನೆ.

4. ಹಣದ ವಿಷಯದಲ್ಲಿ ನಂಬಿಗಸ್ಥನು ಬೇಕಾಗಿರುವದರಿಂದ, ನೀವು ಆದು ಏರ್ಪಡಿಸುವವರನ್ನು ನಿಮ್ಮ ಪತ್ರಿಕೆಗಳ ಸಂಗಡ ಕಳುಹಿಸುವೆನೆಂದು, ಅನ್ನುತ್ತಾನೆ.

5. ಧರ್ಮಹಣವು ಅಧಿಕವಾಗಿದ್ದರೆ, ತಾನು ಸಹ ಅವರ ಸಂಗಡ ಹೋಗುವೆನು, ಅನ್ನುತ್ತಾನೆ. ಹಾಗೆಯೇ ಹೋಗುವಂತೆ ಸಂಭವಿಸಿತು. (ರೋಮಾ. ೧೫. ೨೫—೨೭. ಅಪೊ. ಕ್ರಿ. ೨೪. ೧೭.)

6. ಈ ಪತ್ರಿಕೆ ಬರೆಯಲ್ಪಟ್ಟ ಸ್ಥಳವಾದ ಎಫೆಸದಿಂದ (೮. ವ.) ಹೊರಟು ಮಕೆದೋನ್ಯದ ಮಾರ್ಗವಾಗಿ ಕೊರಿಂಥಕ್ಕೆ ಹೋಗ ಯೋಚಿಸಿದ್ದನು. ಇದಕ್ಕೆ ಮುಂಚೆ ತನ್ನ ಪ್ರಯಾಣವನ್ನು ಕುರಿತು ಬೇರೆ ಪ್ರಕಾರ ನಿಶ್ಚಯಿಸಿದ್ದಾಗಿ ಅವರಿಗೆ ಹೇಳಿ ಇದ್ದನು. (೨ಕೊರಿ. ೧. ೧೫, ೧೬.) ಈಗ ಆ ನಿರ್ಣಯವನ್ನು ಬದಲು ಮಾಡಿ, ಬೇರೆ ಪ್ರಕಾರ ನಿರ್ಣಯಿಸಿದ್ದನ್ನು ಅವರಿಗೆ ದಿಟ್ಟವಾಗಿ ಹೇಳುತ್ತಾನೆ. (೨ ಕೊರಿ. ೧. ೨೩.)

7. ಒಂದು ವೇಳೆ ಎಂಬುವದು ಮಳೆಕಾಲವಾಗಿರ ಬಹುದು. ಅವನು ಮೂರು ತಿಂಗಳು ಮಕೆದೋನ್ಯ, ಅದರ ನಾಡುಗಳು, ಇಲ್ಲುರಿಕ ಮುಂತಾದ ಸ್ಥಳಗಳಲ್ಲಿ ವಾಸ ಮಾಡುತ್ತಾ ಬಂದನು. (ಅಪೊ. ಕ್ರಿ. ೨೦. ೩. ರೋಮಾ. ೧೫. ೧೯.) ಮಳೆಕಾಲ ತೀರಿದ ಮೇಲೆ ಹಡಗಮಾರ್ಗವಾಗಿ ಸುರಿಯಕ್ಕೆ ಹೋಗುವದಕ್ಕಾಗಿ ಅಲ್ಲಿ ತಂಗಿ ಇದ್ದನೆಂದು ತೋರುತ್ತದೆ.

8. ಅವನು ಮಕೆದೋನ್ಯಕ್ಕೆ ಅವಸರವಾಗಿ ಹೋದದರಿಂದ ಮಾರ್ಗದಲ್ಲಿ ತಂಗಿ ಅವರನ್ನು ಕಂಡು ಕೊಳ್ಳ ಕೂಡದೆ ಇತ್ತು.

೮,೯ ಆದರೆ ಪಂಚಾಶತ್ತಿನ ಮಟ್ಟಿಗೂ [1]ಎಫೆಸದಲ್ಲಿ ಇರುವೆನು. ಯಾಕಂದರೆ ಬಲವಾದ ದೊಡ್ಡ ಬಾಗಲು
ನನಗೆ ತೆರೆದದೆ; ಮತ್ತು ಎದುರಾಳಿಗಳು ಅನೇಕರು.
೧೦ ಇದಲ್ಲದೆ, [2]ತಿಮೊಥೆಯನು ಬಂದರೆ, ಅವನು ನಿರ್ಭಯವಾಗಿ ನಿಮ್ಮ ಬಳಿಯಲ್ಲಿ ಇರುವ ಹಾಗೆ, ನೋಡಿ
೧೧ ಕೊಳ್ಳಿರಿ. ಯಾಕಂದರೆ ನನ್ನ ಹಾಗೆಯೇ ಕರ್ತನ ಕೆಲಸವನ್ನು ನಡಿಸುತ್ತಾನೆ. ಆದದರಿಂದ ಯಾವನಾ
ದರೂ ಅವನನ್ನು ಅಸಡ್ಡೆ ಮಾಡದೆ ಇರಲಿ; ಆದರೆ ನನ್ನ ಬಳಿಗೆ ಬರುವ ಹಾಗೆ, ಅವನನ್ನು ಸಮಾಧಾನವಾಗಿ
ಮುಂದೆ ಕಳುಹಿಸಿರಿ; ಯಾಕಂದರೆ ಅವನನ್ನು [3]ಸಹೋದರರ ಸಂಗಡ ಎದುರು ನೋಡುತ್ತೇನೆ.
೧೨ ಸಹೋದರನಾದ ಅಪೊಲ್ಲೋಸನನ್ನು ಕುರಿತೇನಂದರೆ, [4]ಸಹೋದರರ ಸಂಗಡ ನಿಮ್ಮ ಬಳಿಗೆ ಬರ ಬೇಕೆಂದು,
ಅವನನ್ನು ಬಹಳವಾಗಿ ಬೇಡಿ ಕೊಂಡೆನು. ಆದರೆ [5]ಈಗಲೇ ಬರ ಅವನಿಗೆ ಎಷ್ಟು ಮಾತ್ರವೂ ಮನಸ್ಸಿರಲಿಲ್ಲ;
ಆದಾಗ್ಯೂ ಅವನಿಗೆ ಒಳ್ಳೇ ಸಮಯವಾದಾಗ ಬರುವನು.
೧೩,೧೪ [6]ಎಚ್ಚರಿಕೆಯಾಗಿರ್ರಿ; ವಿಶ್ವಾಸದಲ್ಲಿ ನಿಲ್ಲಿರಿ; ಪೌರುಷವಾಗಿರ್ರಿ; ತ್ರಾಣವಾಗಿರ್ರಿ. ನಿಮ್ಮವುಗಳೆಲ್ಲಾ ಪ್ರೀತಿ
ಯಿಂದ ಆಗಲಿ.
೧೫ ಸ್ತೆಫನನ ಮನೆಯು ಅಕಾಯದ [7]ಪ್ರಥಮ ಫಲವಾಗಿದೆ ಎಂದೂ, ಪರಿಶುದ್ಧರ ಸೇವೆಗೆ ತಮ್ಮನ್ನು ಒಪ್ಪಿಸಿ
೧೬ ದ್ದಾರೆಂದೂ, ಬಲ್ಲಿರಿ. ಸಹೋದರರೇ, ಇಂಥವರಿಗೂ ನಮ್ಮ ಸಂಗಡ ಕೆಲಸ ಮಾಡಿ ಪ್ರಯಾಸ ಪಡುವವರೆ
ಲ್ಲರಿಗೂ, ನೀವು ಸಹ ಅಧೀನರಾಗಿರ ಬೇಕೆಂದು, ನಿಮ್ಮನ್ನು ಬೇಡಿ ಕೊಳ್ಳುತ್ತೇನೆ.
೧೭ ಸ್ತೆಫನನೂ, ಪೊರ್ತುನಾತನೂ, ಅಕಾಯಿಕನೂ, [8]ಬಂದದರಿಂದ ಸಂತೋಷ ಪಡುತ್ತೇನೆ; ಯಾಕಂದರೆ
೧೮ ನಿಮ್ಮಿಂದಾದ [9]ಕೊರತೆಯನ್ನು ಇವರು ಪೂರ್ತಿ ಮಾಡಿದ್ಧಾರೆ. ಯಾಕಂದರೆ ನನ್ನ ಆತ್ಮವನ್ನೂ ನಿಮ್ಮ
ದನ್ನೂ ಸಂತೈಸಿದ್ಧಾರೆ. ಆದ ಕಾರಣ ಅಂಥವರನ್ನು ಲಕ್ಷ್ಯ ಮಾಡಿರಿ.

1. ದೆಮೇತ್ರಿಯನಿಂದುಂಟಾದ ಕಲಹದ ನಿಮಿತ್ತ ಅವನು ಎಫೆಸವನ್ನು ಬಿಟ್ಟು, ತಾನು ನಿರ್ಣಯಿಸಿದ್ದ ಕಾಲಕ್ಕೆ ಸ್ವಲ್ಪ ಮುಂಚಿತಾಗಿ ಹೊರಟನೆಂದು ತೋರುತ್ತದೆ. (ಅಪೊ. ಕ್ರಿ. ೨೦. ೧.) ಅವನಿಗೆ ಆ ಪಟ್ಟಣದಲ್ಲಿ ದೊಡ್ಡ ಅನುಕೂಲವಾದ ಬಾಗಲು ತೆರೆಯಲ್ಪಟ್ಟಿತ್ತು. ಸತ್ಯಮಾರ್ಗ ಅಭಿವೃದ್ಧಿಯಾಗುವದಕ್ಕೆ ಅನುಕೂಲವಾದ ಬಾಗಲು ತೆರೆಯಲ್ಪಟ್ಟಿದ್ದಾಗ್ಯೂ, ಅದನ್ನು ಅಭ್ಯಂತರಿಸುವದಕ್ಕೆ ವಿರೋಧಿಗಳು ಸಹ ಅನೇಕರು ಇದ್ದರು. (ಯೋಹಾ. ೧೬. ೩೩.)

2. ತಿಮೊಥೆಯನು ಮಕೆದೋನ್ಯಕ್ಕೆ ಕಳುಹಿಸಲ್ಪಟ್ಟಿದ್ದನು. (ಅಪೊ. ಕ್ರಿ. ೧೯. ೨೨.) ಅಲ್ಲಿಂದ ಅವನು ಕೊರಿಂಥಕ್ಕೆ ಹೋಗಿರುವನು. (೪. ೧೭.) ಯೌವನಸ್ಥನಾಗಿ ಸ್ವಲ್ಪ ಬಲಹೀನನಾಗಿದ್ದ ಅವನು (೧ ತಿಮೊ. ೪. ೧೨.) ಕೊರಿಂಥ್ಯರ ಕ್ರಮವಿಲ್ಲದ ನಡತೆಯನ್ನು ನೋಡುವಾಗ ಕಳವಳ ಪಡುವನು. ಅದರಿಂದ ಅವನನ್ನು ಗೌರವವಾಗಿ ನಡಿಸ ಬೇಕೆಂದು ಪೌಲನು ಆಜ್ಞಾಪಿಸುತ್ತಾನೆ. ಅವನು ಕರ್ತನ ಕೆಲಸವನ್ನು ನಡಿಸುತ್ತಾನೆಂಬುವದೇ ಅವರು ಅವನನ್ನು ಲಕ್ಷ್ಯ ಮಾಡುವದಕ್ಕೆ ತಕ್ಕ ಕಾರಣವು.

3. ಎರಸ್ತನು ಮುಂತಾದ ಸಹೋದರರನ್ನು ಕುರಿತದ್ದು.

4. ಇದು ತಿಮೊಥೆಯನನ್ನೂ ಎರಸ್ತನನ್ನೂ ಕುರಿತದ್ದು. (ಅಪೊ. ಕ್ರಿ. ೧೯. ೨೨.) ಇಲ್ಲದಿದ್ದರೆ, ಕೊರಿಂಥದಿಂದ ಬಂದವರೂ, ಈ ಪತ್ರಿಕೆಯನ್ನು ತೆಗೆದು ಕೊಂಡು ಹೋಗ ನೇಮಿಸಲ್ಪಟ್ಟವರೂ ಆದ ಸಹೋದರರನ್ನು ಕುರಿತದ್ದು. (೧೭. ವ.)

5. ಕೊರಿಂಥದ ಸಭೆಯಲ್ಲಿ ಅಪೊಲ್ಲೋಸ ಹೆಸರಿನ ಕಕ್ಷಿಗಾರರು ಭೇದ ಉಂಟು ಮಾಡಿದ್ದರಿಂದ ಅಲ್ಲಿಗೆ ಹೋಗ ಅವನಿಗೆ ಮನಸ್ಸಿಲ್ಲದೆ ಇರುವದು. (೧. ೧೨; ೩. ೪—೬.) ಅಂಥಾ ಭೇದಗಳು ನಿವರ್ತಿಯಾದಾಗ ಅವನು ಅಲ್ಲಿಗೆ ಹೋಗ ತಕ್ಕ ಸಮಯವಾಗಿರುವದು. ಅವನು ಅಲ್ಲಿಗೆ ಹೋಗ ಪೌಲನಿಗೆ ಬಹಳ ಮನಸ್ಸಿರುವದನ್ನು ನೋಡಿದರೆ, ಅವನ ಯಥಾರ್ಥತ್ವವನ್ನೂ ವಿವೇಕವನ್ನೂ ಕುರಿತು ಪೌಲನಿಗೆ ತೃಪ್ತಿಕರವಾಗಿತ್ತೆಂದು ತೋರುತ್ತದೆ.

6. ಸಭೆಯವರ ಎಚ್ಚರಿಕೆ ಜಾಗ್ರತೆಗಳ ಪ್ರಕಾರ ಬೋಧಕರ ಕೆಲಸ ಸಫಲವಾಗುವದರಿಂದ, ಅವರು ಎಚ್ಚರಿಕೆಯಾಗಿಯೂ ದೃಢವಾಗಿಯೂ, ಪೌರುಷವಾಗಿಯೂ, ವಿಶೇಷವಾಗಿ ಪ್ರೀತಿಯುಳ್ಳವರಾಗಿಯೂ ನಡೆದು ಕೊಳ್ಳ ಬೇಕೆಂದು ಆಜ್ಞಾಪಿಸುತ್ತಾನೆ.

7. ಸ್ತೆಫನನ ಮನೆಯವರನ್ನು ಕುರಿತು ಪೌಲನು ಕೊಟ್ಟ ಸಾಕ್ಷಿ ಶ್ರೇಷ್ಠವಾದದ್ದು. ಅಕಾಯ ದೇಶದಲ್ಲಿ ಗುಣ ಪಟ್ಟ ಆತ್ಮಭಾವದ ಬೆಳೆಯಲ್ಲಿ ಇವರೇ ಪ್ರಥಮ ಫಲವು. ಇವರು ಪೌಲನಿಂದ ಸ್ನಾನ ಹೊಂದಿದವರು. (೧. ೧೬.) ಇವರು ತಮ್ಮ ಧನವನ್ನು ಮಾತ್ರವಲ್ಲ, ತಮ್ಮ ಪ್ರಾಣವನ್ನು ಸಹ ದೇವರ ಪಾದಕ್ಕೆ ಅರ್ಪಿಸಿದವರು. ಒಂದೊಂದು ಕ್ರೈಸ್ತ ಕುಟುಂಬವೂ ಅವರ ಹಾಗಿದ್ದರೆ, ಎಷ್ಟೋ ಮಹಿಮೆಯಾಗಿರುವದು. (ರೋಮಾ. ೧೬. ೫.)

8. ಇವರು ಕೊರಿಂಥದಿಂದ, ಎಫೆಸದಲ್ಲಿದ್ದ ಪೌಲನಿಗೆ ಪತ್ರಿಕೆಯನ್ನು ತೆಗೆದು ಕೊಂಡು ಬಂದಿರುವರು. (೭. ೧.)

9. ಕೊರಿಂಥದ ಸಭೆಯವರಿಗೆ ಬದಲಾಗಿ ಸ್ತೆಫನನು ಮುಂತಾದ ಸಹೋದರರು ಪೌಲನ ಸಂಗಡ ಇದ್ದು ಅವನಿಗೆ ಆದರಣೆ ಮಾಡಿದರು. ಮತ್ತು ಅವರು ತಿರಿಗಿ ಕೊರಿಂಥಕ್ಕೆ ಹೋಗುವಾಗ, ಪೌಲನ ಕ್ಷೇಮಸಮಾಚಾರವನ್ನೂ, ಅವನ ಪ್ರೀತಿಯನ್ನೂ ಅವರಿಗೆ ತಿಳಿಸಿ, ಅವರನ್ನು ಆದರಣೆ ಪಡಿಸ ಹೇತುವೆಯಾಗಿದ್ದರು. (೧೮. ವ.)



೧೯ [1]ಆಸ್ಯದ ಸಭೆಗಳು ನಿಮ್ಮನ್ನು ವಂದಿಸುತ್ತವೆ. [2]ಅಕ್ವಿಲನೂ, ಪ್ರಿಸ್ಕಿಲ್ಲಳೂ, ಅವರ ಮನೆಯಲ್ಲಿರುವ ಸಭೆಯ
೨೦ ಸಂಗಡ, ಕರ್ತನಲ್ಲಿ ನಿಮ್ಮನ್ನು ಬಹಳವಾಗಿ ವಂದಿಸುತ್ತಾರೆ. ಸಹೋದರರೆಲ್ಲರೂ ನಿಮ್ಮನ್ನು ವಂದಿಸು
ತ್ತಾರೆ. ಒಬ್ಬರನ್ನೊಬ್ಬರು [3]ಪರಿಶುದ್ಧ ಮುದ್ದಿನಿಂದ ವಂದಿಸಿರಿ.
೨೧,೨೨ ಪೌಲನೆಂಬ ನಾನು [4]ನನ್ನ ಸ್ವಂತ ಕೈಯಿಂದ ಮಾಡುವ ವಂದನೆ. ಒಬ್ಬನು ಕರ್ತನಾದ ಯೇಸು
ಕ್ರಿಸ್ತನನ್ನು ಪ್ರೀತಿ ಮಾಡದಿದ್ದರೆ, ಶಾಪವಾಗಲಿ; ನಮ್ಮ [5]ಕರ್ತನು ಬರುತ್ತಾನೆ.
೨೩,೨೪ ಕರ್ತನಾದ ಯೇಸು ಕ್ರಿಸ್ತನ ಕೃಪೆಯು ನಿಮ್ಮ ಸಂಗಡ ಇರಲಿ. ಕ್ರಿಸ್ತ ಯೇಸುವಿನಲ್ಲಿ ನನ್ನ [6]ಪ್ರೀತಿ
ಯು ನಿಮ್ಮೆಲ್ಲರ ಸಂಗಡ ಇರಲಿ. ಆಮೆನ್.

1. ಇದು ರೋಮಾಯ ಅಧಿಪತಿ ಆಳುತ್ತಿದ್ದ ಚಿಕ್ಕ ಏಷ್ಯವು. ಅದಕ್ಕೆ ಎಫೆಸ ಮುಖ್ಯ ಪಟ್ಟಣವು (ಅಪೊ. ಕ್ರಿ. ೧೬. ೬.)

2. ಶ್ರೇಷ್ಠ ಭಕ್ತರಾದ ಈ ಇಬ್ಬರನ್ನು ಕೊರಿಂಥದ ಸಭೆಯವರು ಚನ್ನಾಗಿ ಬಲ್ಲರು. ಅವರು ಆ ಕಾಲದಲ್ಲಿ ಕೊರಿಂಥವನ್ನು ಬಿಟ್ಟು ಎಫೆಸಕ್ಕೆ ಹೋಗಿದ್ದರು. (ಅಪೊ. ಕ್ರಿ. ೧೮. ೨, ೨೬. ರೋಮಾ. ೧೬. ೩.)

3. ರೋಮಾ. ೧೬. ೧೬. ವಚನದ ವ್ಯಾಖ್ಯಾನವನ್ನು ನೋಡಬೇಕು.

4. ರೋಮಾ. ೧೬. ೨೨. ವಚನದ ವ್ಯಾಖ್ಯಾನವನ್ನು ನೋಡಬೇಕು.

5. ಸ್ವಂತ ಕೈಯಿಂದ ವಂದನೆ ಬರೆದ ಪೌಲನು ಎಲ್ಲರೂ ಯೋಚಿಸ ತಕ್ಕ ಒಂದು ಮುಖ್ಯವಾದ ವಾಕ್ಯವನ್ನು ಕೂಡಿಸಿ ಬರೆಯುತ್ತಾನೆ. ಕ್ರಿಸ್ತನನ್ನು ಪ್ರೀತಿ ಮಾಡದವನು ಆತನು ಪ್ರತ್ಯಕ್ಷವಾಗುವ ಆ ಮಹಾ ದಿವಸದಲ್ಲಿ ಕಠಿಣ ಶಾಪವನ್ನು ಹೊಂದುವನು. ಶಪಿಸಲ್ಪಟ್ಟವರೇ, ನನ್ನನ್ನು ಬಿಟ್ಟು, ಪಿಶಾಚನಿಗೂ ಅವನ ದೂತರಿಗೂ ಸಿದ್ಧ ಮಾಡಲ್ಪಟ್ಟ ನಿತ್ಯ ಬೆಂಕಿಗೆ ಹೋಗಿರಿ, ಎಂಬ ಭಯಂಕರವಾದ ಆಜ್ಞೆನಿರ್ಣಯವು ಆತನನ್ನು ಪ್ರೀತಿ ಮಾಡದ ಒಬ್ಬೊಬ್ಬ ಭಕ್ತಿಹೀನನಿಗೂ ಹೇಳಲ್ಪಡುವದು. (ಮತ್ತಾ. ೨೫. ೪೧.)

6. ಈ ಪತ್ರಿಕೆಯಲ್ಲಿ ಪೌಲನು ಅವರನ್ನು ಅಧಿಕವಾಗಿ ಖಂಡಿಸಿ ಎಚ್ಚರಿಸಿದಾಗ್ಯೂ, ಅವರ ಮೇಲೆ ಅವನಿಗೆ ಇದ್ದ ಪ್ರೀತಿ ಕಡಿಮೆಯಾಗಲಿಲ್ಲ. ಆದದರಿಂದ ಕಡೆಯಲ್ಲಿ ಕ್ರಿಸ್ತನ ಕೃಪೆಯನ್ನೂ ತನ್ನ ಪ್ರೀತಿಯನ್ನೂ ಅವರಿಗೆ ತಿಳಿಸಿ ಪತ್ರಿಕೆಯನ್ನು ಮುಗಿಸುತ್ತಾನೆ.